

ಕಲ್ಯಾಣ ಕಿರಣ



ಮೇ-2009

ಬೆಲೆ- ರೂ.10/-



ಚೆನ್ನೈಯಲ್ಲಿ ಸಮ್ಮೇಳನ ಉದ್ಘಾಟನೆ 2-5-2009











ಸಂಪುಟ-39 | ಬಸವ ಶಕೆ -876 | ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-5 | ಮೇ-2009 | ವಾರ್ಷಿಕ ಚಂದಾ 100/- ರೂ.

ಶರಣ ಸಮಾಜ ಕಟ್ಟಲು ಬನ್ನಿ

ಶರಣು ಶರಣಾರ್ಥಿ ಶರಣರೆ ಶರಣು ಶರಣಾರ್ಥಿ
ಶರಣು ಶರಣಾರ್ಥಿ ನಿಮಗೆ ಶರಣು ಶರಣಾರ್ಥಿ ॥ಪ॥

ಬನ್ನಿರಿ ಶರಣರೆ ಬನ್ನಿರಿ ಬೇಗನೆ
ಬಸವ ಮಹಾಮನೆ ಕಟ್ಟುವ ಬನ್ನಿ
ಶರಣರ ಆಶಯ ಪೂರೈಸ ಬನ್ನಿ
ಶರಣರ ಋಣವನು ತೀರಿಸ ಬನ್ನಿ ॥1॥

ಅಂದು ಕಲ್ಯಾಣದಿ ಕ್ರಾಂತಿಯು ಘ
ತಂದೆಯು ಪಡೆದರು ಗಡಿಯ ಪಾರನು
ವಚನ ವಾಙ್ಮಯವ ಹೊತ್ತ ಶರಣರು
ಹರಣವ ತೆತ್ತು ಕಾಪಿಟ್ಟರದೆನು ॥2॥

ತಂದೆ ತಾಯಿಯ ಆಸರೆ ತಪ್ಪಲು
ಲಿಂಗಾಯತ ಗಣವು ಅನಾಥವಾಯಿತು
ಅತಿತಲೆಯುತ ಸೋತು ಬಳಲುತಿರೆ
ಮತ್ತೆ ಸಿಕ್ಕಿದೆ ಶರಣ ಪರಂಪರೆ ॥3॥

ವೀರಶೈವರು, ವೈದಿಕ ಮತಿಗಳು
ತಂದು ತುಂಬಿಹ ಕಸವನು ಗುಡಿಸುವಾ
ಧೂರ್ತ ಸ್ವಾರ್ಥಿಗಳ ಸಂಚನು ಅರಿತು
ಮತಿವಂತರ ಸಂಘಟನೆಯ ಮಾಡುವಾ ॥4॥

ಲಿಂಗಾಯತವು ಸ್ವತಂತ್ರ ಧರ್ಮ
ಗುರು ಬಸವಣ್ಣನೆ ಆತ್ಮವೆಂದರಿತು
ತನು ಮನ ಧನವ ಸವೆಸುತಲೀಗ
ಬಸವ ಸಂದೇಶವ ಸಾರುವ ಬನ್ನಿ ॥5॥

ದಿಟ್ಟ ಹೆಜ್ಜೆಗಳ ಹಾಕುವ ಬನ್ನಿ
ನಿಷ್ಠೆಯ ಫಲವ ತಾಳುವೆವೆನ್ನಿ
ಶರಣ ಸಮಾಜವ ಕಟ್ಟುವ ಬನ್ನಿ
ಬಸವಾತ್ಮಜೆಯ ಬಿನ್ನಹವಿದುವು ॥6॥ -ಮಾತಾಜಿ

ಜೂನ್ 30ರಂದು ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ 15ನೆಯ ಲಿಂಗೈಕ್ಯ ಸಂಸ್ಮರಣೆ

ಪರಮ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಹಿರಿಯೂರಿನಲ್ಲಿ ದಿ.30-6-1995ರಂದು ಲಿಂಗೈಕ್ಯರಾಗಿ ಕ್ರಿಯಾ ವಿಶ್ರಾಂತಿಯನ್ನು ಹೊಂದಿದರು. ದಿ.30-6-2009ಕ್ಕೆ 15 ವರ್ಷಗಳಾಗುತ್ತಿರುವುದರಿಂದ ಬೆಂಗಳೂರಿನ ಬಸವ ಮಂಟಪದಲ್ಲಿ ಅಂದು ಬೆಳಿಗ್ಗೆ 11ಗಂಟೆಯಿಂದ ಸಂಸ್ಮರಣಾ ಕಾರ್ಯಕ್ರಮ ಮತ್ತು ಪ್ರಸಾದ ದಾಸೋಹವನ್ನು ಏರ್ಪಡಿಸಲಾಗಿದೆ.

ಸರ್ವರಿಗೂ ಆದರದ ಸ್ವಾಗತ

ಕಿರಣಗನ್ನಡಿ

ಅಪ್ಪುವನಪ್ಪಿದ ವಾರಿಕಲ್ಲಂತೆ, ವಾಯುವನಪ್ಪಿದ ಪರಿಮಳದಂತೆ
ಲಿಂಗವನಪ್ಪಿದ ಶರಣನ ದೇಹಿ ಎನ್ನಬಹುದೆ?
ಅನಲನಪ್ಪಿದ ಕರ್ಪೂರದಂತೆ, ಕೂಡಲ ಚನ್ನ ಸಂಗಯ್ಯ
ನಿಮ್ಮ ಶರಣ ಬಸವಣ್ಣನ ನಿಲುವು.

-ಚನ್ನಬಸವಣ್ಣನವರು

KALYANA KIRANA-Reg No.19988/70. Monthly Magazine
Edited And Published by Pujya Mate Kasturidevi on behalf of Vishwakalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10.
Ph: 9481249857, 9620058492

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ: 22923736/23131476

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿ ನಗರ, ಬೆಂಗಳೂರು-560010

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

866666

ವಿಶ್ವಗುರು ಬಸವಣ್ಣನವರ
814ನೆಯ ಲಿಂಗೈಕ್ಯ ಸಂಸ್ಮರಣೆ



ಶರಣ (ಶನಿ)ವಾರ ದಿ. 25-7-2009 ರಂದು ಬೆಳಿಗ್ಗೆ 10-30

ಬೆಂಗಳೂರು ನಗರದ
ಸಿಟಿ ಮಾರುಕಟ್ಟೆ ಪ್ರದೇಶದಲ್ಲಿರುವ
ಸರ್ ಕೆ.ಪಿ.ಪುಟ್ಟಣ್ಣಚೆಟ್ಟಿ (ಟೌನ್ ಹಾಲ್)
ಪುರಭವನದಲ್ಲಿ

❋ ಶರಣರ ಬರುವೆಮಗೆ ಪ್ರಾಣ ಜೀವಾಳ ❋

ವಿಶ್ವಗುರು ಬಸವಣ್ಣನವರು ಮತ್ತು ದಾಸೋಹ ಮೂರ್ತಿ ನೀಲಾಂಬಿಕಾ ತಾಯಿಯವರ 814ನೆಯ ಲಿಂಗೈಕ್ಯ ದಿನಾಚರಣೆ

ಸ್ಥಳ:ಸರ್.ಕೆ.ಪಿ.ಪುಟ್ಟಣ್ಣ ಚೆಟ್ಟಿ ಪುರಭವನ,ಬೆಂಗಳೂರು,

ದಿ.25-7-2009, ಬೆಳಿಗ್ಗೆ .10-30

ಶರಣ ಬಂಧುಗಳಲ್ಲಿ ಹೃತ್ಪೂರ್ವಕ ಬಿನ್ನಹ

ವಿಶ್ವಗುರು ಬಸವಣ್ಣನವರು ಆನಂದನಾಮ ಸಂವತರದ ವೈಶಾಖ ಮಾಸದ ಅಕ್ಷಯ ತೃತೀಯಾದಂದು ರೋಹಿಣಿ ನಕ್ಷತ್ರದಲ್ಲಿ ಜನಿಸಿ(30-4-1134)62 ವರ್ಷ 3 ತಿಂಗಳು 2 ದಿವಸಗಳ ಕಾಲ ಇಳೆಯ ಮೇಲಿದ್ದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ ಮಂಗಳ (ಬಸವ)ವಾರದಂದು ದಿ. 30-7-1196ರಂದು ಉರಿಯುಂಡ ಕರ್ಪುರದಂತೆ, ಸಮುದ್ರವನ್ನು ಬೆರೆತ ನದಿಯಂತೆ ಲಿಂಗೈಕ್ಯರಾಗಿ ದೇವನಲ್ಲಿ ಒಂದಾದರು. ಅವರು ಬಯಲಾದಂದಿನಿಂದಲೂ ಆ ದಿನವು **"ಬಸವ ಪಂಚಮಿ"** ಎಂದು ಖ್ಯಾತಿವೆತ್ತಿದೆ. ಈ ವರ್ಷ 814ನೆಯ ಲಿಂಗೈಕ್ಯ ದಿನವು ಭಾನು(ದೇವ) ವಾರ ದಿ.26-7-2009ರಂದು ಒದಗಿ ಬಂದಿದೆ. ಆದಿ ಪ್ರಮಥ, ಗಣಾಧಿಪತಿ ಬಸವಣ್ಣನವರು ಲಿಂಗೈಕ್ಯರಾದ ಮರು ದಿವಸ ದಾಸೋಹ ಮೂರ್ತಿ ನೀಲಾಂಬಿಕಾ ತಾಯಿಯವರು ಸಹ ಉರಿಯುಂಡ ಕರ್ಪುರದಂತೆ ಲಿಂಗೈಕ್ಯರಾದರು. ಅವರ 814ನೆಯ ಲಿಂಗೈಕ್ಯ ಸಂಸ್ಮರಣೆಯನ್ನು ಸಹ ಆಚರಿಸಲಾಗುತ್ತಿದೆ. ಪವಿತ್ರ ಹಬ್ಬಗಳಾದ ಬಸವ ಪಂಚಮಿ ಮತ್ತು ನೀಲಾಂಬಿಕಾ ಷಷ್ಠಿಯನ್ನು ಭಕ್ತಿ ಪೂರ್ವಕವಾಗಿ ಆಚರಿಸಬೇಕಾದುದು ನಮ್ಮೆಲ್ಲರ ಕರ್ತವ್ಯ.

ವಿಶೇಷ ವಿವರ: ಪ್ರತಿ ವರ್ಷವೂ ಬಸವ ಪಂಚಮಿಯನ್ನು ಸರ್.ಪುಟ್ಟಣ್ಣಶೆಟ್ಟಿ ಪುರಭವನದಲ್ಲಿ ಆಚರಿಸುತ್ತಾ ಬಂದಿದ್ದೇವೆ. ಈ ಸಲ ಅದು ಭಾನುವಾರ ಬಂದಿದ್ದು ನಮಗೆಲ್ಲ ಅತೀವ ಆನಂದವಾಗಿತ್ತು. ಆದರೆ ಪುರಭವನವು ಭಾನುವಾರದಂದು ಬೇರೆಯವರಿಗೆ ಕೊಡಲಟ್ಟ ಕಾರಣ ನಾವು ಕಾರ್ಯಕ್ರಮವನ್ನು ದಿ.25-7-2009, ಶನಿ (ಶರಣ)ವಾರದಂದು ಪುಟ್ಟಣ್ಣಶೆಟ್ಟಿ ಪುರಭವನದಲ್ಲಿ, ದಿ.26-7-2009 ಭಾನು (ದೇವ) ವಾರದಂದು ರಾಜಾಜಿನಗರದ ಬಸವ ಮಂಟಪದಲ್ಲಿ ಏರ್ಪಡಿಸುತ್ತಿದ್ದೇವೆ.

ಹಾಲು ಹಣ್ಣು ವಿತರಣೆ

ನಾಗರ ಪಂಚಮಿ ಎಂದು ಹುತ್ತಕ್ಕೆ, ನಾಗರ ಕಲ್ಲಿಗೆ ಹಾಲು ಎರೆಯುವ ಮೂಢ ಸಂಪ್ರದಾಯ ಬಿಟ್ಟು ಮಾನವೀಯ ಕಾರ್ಯಕ್ಕೆ ಅದನ್ನು ಬಳಸಬೇಕೆಂದು ರಾಷ್ಟ್ರೀಯ ಬಸವ ದಳದ ವತಿಯಿಂದ ವಿಕ್ಟೋರಿಯಾ ಮತ್ತು ಕುಷ್ಠರೋಗಿಗಳ ಆಸ್ಪತ್ರೆಯಲ್ಲಿ ದಿ.26-7-2009ರಂದು ಹಣ್ಣು- ಹಾಲು ವಿತರಿಸುವ ಕಾರ್ಯಕ್ರಮವನ್ನು ಸಂಯೋಜಿಸಲಾಗಿದೆ.

ವಚನ ನೃತ್ಯ ರೂಪಕ

ಅತ್ಯಂತ ವಿಶೇಷವಾದ ವಚನ ನೃತ್ಯ ರೂಪಕವನ್ನು ಏರ್ಪಡಿಸಲಾಗುವುದು.ವೈಭವಯುತವೂ ಅರ್ಥಗರ್ಭಿತವೂ ಆದ ನೃತ್ಯ ರೂಪಕವು ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಲಿದೆ.

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಈ ಎರಡು ದಿನಗಳ ಕಾರ್ಯಕ್ರಮವನ್ನು ಉಪನ್ಯಾಸ ಮತ್ತು ನಂತರ ಗಣ ಪ್ರಸಾದ(ಭೋಜನ)ವನ್ನು ವ್ಯವಸ್ಥೆ ಮಾಡಿದೆ. ಆದ್ದರಿಂದ ಎಲ್ಲಾ ಶರಣ ಬಂಧುಗಳು ಕುಟುಂಬ ಪರಿವಾರ ಸಹಿತವಾಗಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಈ ಎರಡೂ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದೇ ಅಲ್ಲದೆ ತನು-ಮನ-ಧನಗಳಿಂದ ಸಹಕರಿಸಿ ಕಾರ್ಯಕ್ರಮ ವ್ಯವಸ್ಥೆ ಮತ್ತು ಸಾಮೂಹಿಕ ಗಣ ಪ್ರಸಾದಕ್ಕಾಗಿ ಉದಾರವಾದ ದೇಣಿಗೆಯನ್ನು ಕೊಡಬೇಕೆಂದು ವಿನಂತಿಸುತ್ತೇವೆ.

★ ಶರಣರ ಬರುವೆಮಗೆ ಪ್ರಾಣ ಜೀವಾಳ ★

ದಿ.25ರ ಕಾರ್ಯಕ್ರಮ ವಿವರ

ಬೆಂಗಳೂರು ನಗರದ ಸಿಟಿ ಮಾರುಕಟ್ಟೆ ಸಮೀಪದಲ್ಲಿರುವ ಸರ್ ಕೆ.ಪಿ.ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ವತಿಯಿಂದ 814 ನೆಯ ಬಸವ ಪಂಚಮಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

1. ಬೆಳಿಗ್ಗೆ 10-30 ಗಂಟೆಗೆ ಕಾರ್ಯಕ್ರಮ ಆರಂಭ
2. ಕಾರ್ಯಕ್ರಮದ ನಂತರ 2 ಗಂಟೆಗೆ ಗಣದಾಸೋಹ(ಊಟ)
3. ಸಾಂಸ್ಕೃತಿಕ ಕಾರ್ಯಕ್ರಮ 3ರಿಂದ 4
4. 4 ಗಂಟೆಯಿಂದ ಮೆರವಣಿಗೆ ಮತ್ತು ಶರಣ ಶರಣೆಯರಿಂದ ಪಥ ಸಂಚಲನ . ಪುಟ್ಟಣ್ಣ ಚೆಟ್ಟಿ ಟೌನ್ ಹಾಲ್‌ದಿಂದ ಹೊರಟು ನಗರ್ತರ ಪೇಟೆ, ಅವೆನ್ಯೂ ರಸ್ತೆ ಮಾರ್ಗವಾಗಿ ಸಾಗಿ ಬಸವೇಶ್ವರ ವೃತ್ತದ ಬಳಿ ಇರುವ ಬಸವಣ್ಣನವರ ಪುತ್ಥಳಿಗೆ ಮಾಲಾರ್ಪಣೆ ಮಾಡುವುದರ ಮೂಲಕ ಕಾರ್ಯಕ್ರಮ ಪೂರ್ಣಗೊಳ್ಳುವುದು. ಮೆರವಣಿಗೆಯಲ್ಲಿ ಬಿಳಿಯ ಉಡುಗೆಗಳನ್ನು ಉಟ್ಟು, ಬೆನ್ನ ಮೇಲೆ ಬಸವ ರಕ್ಷೆ(ಕಾವಿಯ ಸ್ಕಾರ್ಫ್) ಹೊದ್ದು ಭಾಗವಹಿಸಬೇಕು. ಕಾರು, ದ್ವಿಚಕ್ರ ವಾಹನಗಳಿಗೆ ಬಸವ ಧ್ವಜಗಳನ್ನು ಕಟ್ಟಿಕೊಂಡು ಸಾಲಾಗಿ ಮೆರವಣಿಗೆಯಲ್ಲಿ ಸಾಗಲು ಅವಕಾಶ ಉಂಟು.

ಹೃತ್ಪೂರ್ವಕ ಆಹ್ವಾನ

ಅತ್ಯಂತ ಪವಿತ್ರವಾದ ಬಸವ ಲಿಂಗೈಕ್ಯ ದಿನಾಚರಣೆಯನ್ನು ಶ್ರದ್ಧೆ-ಭಕ್ತಿಗಳಿಂದ ಆಚರಿಸುವುದು ಎಲ್ಲರ ಕರ್ತವ್ಯ. ಆದ್ದರಿಂದ ಇದನ್ನೇ ನೇರ ಆಹ್ವಾನವೆಂದು ಪರಿಗಣಿಸಿ ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಇರುವವರು,ಸಮೀಪದ ಊರುಗಳವರು ಕಾರ್ಯಕ್ರಮ ಮತ್ತು ಮೆರವಣಿಗೆಯಲ್ಲಿ ಭಾಗವಹಿಸಬೇಕೆಂದು ಆಶಿಸುತ್ತೇವೆ.

ನೀಲಾಂಬಿಕಾ ಷಷ್ಠಿ - ಸಾಮೂಹಿಕ ಇಷ್ಟಲಿಂಗಾರ್ಚನೆ

ತಾಯಿ ನೀಲಾಂಬಿಕೆಯವರು ಅಸಾಮಾನ್ಯ ಯೋಗಿಣಿ. ಇಚ್ಛಾಮರಣಿಯಾಗಿ ಶ್ರೀ ಗುರು ಬಸವಣ್ಣನವರು ಲಿಂಗೈಕ್ಯರಾದ ಮರುದಿವಸ ಅವರು ಕರದಿಷ್ಟ ಲಿಂಗದ ಪೂಜೆ ಮಾಡುತ್ತ ಲಿಂಗೈಕ್ಯರಾದರು. ಈ ನಿಮಿತ್ತ ದಿ.26-7-2009ರಂದು 814ನೆಯ ನೀಲಾಂಬಿಕಾ ಷಷ್ಠಿಯನ್ನು ಬೆಳಿಗ್ಗೆ 10-30ರಿಂದ ಬೆಂಗಳೂರಿನ ರಾಜಾಜಿ ನಗರದ ಬಸವ ಮಂಟಪದಲ್ಲಿ ಸಾಮೂಹಿಕ ಇಷ್ಟಲಿಂಗಾರ್ಚನೆಯೊಡನೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಸನ್ನಿಧಿಯಲ್ಲಿ ಆಚರಿಸಲಾಗುತ್ತಿದೆ. ಶರಣ ಬಂಧುಗಳು ಪೂಜಾ ನಂತರ ಕರುಣ ಪ್ರಸಾದವನ್ನು ಪಡೆಯಬೇಕು.

ಪರ ಊರುಗಳಿಂದ ಬರುವವರಿಗೂ ಸಹ ಬಸವ ಮಂಟಪದಲ್ಲಿ ವಸತಿ-ಊಟದ ವ್ಯವಸ್ಥೆ ಇರುವುದರಿಂದ ಬಂದು ಬಸವ ಪಂಚಮಿ ಉತ್ಸವದಲ್ಲಿ ಭಾಗಿಗಳಾಗಲು ಕೋರುತ್ತೇವೆ. ಬಸ್ಸುಗಳಲ್ಲಿ ಬರುವವರು ರಾಜಾಜಿ ನಗರದ ನವರಂಗ್ ಟಾಕೀಸ್ ಬಳಿ ಇಳಿದರೆ ಬಸವ ಮಂಟಪವನ್ನು 10 ನಿಮಿಷದಲ್ಲಿ ತಲುಪಬಹುದು, ಬಸವ ಮಂಟಪವು ರಾಜಾಜಿನಗರದ 2ನೆಯ ಬ್ಲಾಕಿನಲ್ಲಿ 20ನೆಯ ಮುಖ್ಯರಸ್ತೆಯಲ್ಲಿ(ಸಿಟಿ ಆಸ್ಪತ್ರೆ ಪಕ್ಕ) ಇದೆ.

ಹೆಚ್ಚಿನ ಸಂಖ್ಯೆಯಲ್ಲಿ ಸಹೃದಯರು ಭಾಗವಹಿಸಿ ಕಾರ್ಯಕ್ರಮಕ್ಕೆ ಶೋಭೆ ತರಬೇಕೆಂದು ಕೋರುತ್ತೇವೆ.

ಬಸವ ಮಂಟಪಕ್ಕೆ ಬಸ್ ಮಾರ್ಗ
ಮೆಜೆಸ್ಟಿಕ್‌ನಿಂದ
251,80ಎ, 265, 80ಇ
ರೂಟಿನ ಸಿಟಿ ಬಸ್ಸುಗಳು ಬರುತ್ತವ

ಕಾರ್ಯಕ್ರಮ ವ್ಯವಸ್ಥಾಪಕರು :
ವಿಶ್ವ ಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, 2035, 20ನೆಯ ಮೇನ್
2ನೆಯ ಬ್ಲಾಕು, ರಾಜಾಜಿನಗರ,
ಬೆಂಗಳೂರು-10
ದೂರವಾಣಿ : 080- 23131476

ಬಸವ ವಚನಾಮೃತ

173. ಮದದಲ್ಲಿ ದೇವನ ಮರೆಯದಿರು

ಹರನೀವ ಕಾಲಕ್ಕೆ ಸಿರಿಯು ಬೆನ್ನಲಿ ಬರ್ಕು
ಹರಿದು ಹೆದ್ದೊರೆಯು ಕೆರೆ ತುಂಬಿದಂತಯ್ಯಾ;
ನೆರೆಯದ ವಸ್ತು ನೆರೆವುದು ನೋಡಯ್ಯಾ;
ಅರಸು ಪರಿವಾರ ಕೈವಾರ ನೋಡಯ್ಯಾ!
ಪರಮ ನಿರಂಜನನ ಮರೆದ ಕಾಲಕ್ಕೆ
ತುಂಬಿದ ಹರವಿಯ ಕಲ್ಲು ಕೊಂಡಂತೆ, ಲಿಂಗದೇವಾ. -ಬ.ವ.ದೀ.171

ವ್ಯಕ್ತಿಯ ಜೀವನದಲ್ಲಿ ದೇವನ ಅನುಗ್ರಹ ದೃಷ್ಟಿ ಬೀಳುತ್ತಲೇ ಸಿರಿಯು ಬರತೊಡಗುತ್ತದೆ. ಬಡತನದ ಬವಣೆಯಲ್ಲಿ ಬಳಲುವವನು ಎಲ್ಲ ರೀತಿಯ ಸಂಪತ್ತು ಹೊಂದತೊಡಗುತ್ತಾನೆ. ಬೆನ್ನಲಿ ಬರ್ಕು ಎಂಬ ಪದದ ಅರ್ಥ ಬಹಳವಿದೆ. ಸಿರಿಯು ಬೆನ್ನು ಹತ್ತಿ ಬಿಡುತ್ತದೆ, ಸೂರ್ಯನ ದಿಕ್ಕಿಗೆ ನಡೆದಾಗ ನೆರಳು ಬೆನ್ನು ಹತ್ತುವಂತೆ. ಮುಟ್ಟಿದ್ದೆಲ್ಲ ಚಿನ್ನವಾಗುತ್ತದೆ. ಬೇಸಿಗೆಯಲ್ಲಿ ಒಣಗಿ ಬೆಂಡಾಗಿ ನಿಂತಿದ್ದ ಕೆರೆಗೆ ಒಂದು ಹೆದ್ದೊರೆ ಹರಿದು ಕೆರೆಯು ತುಂಬಿದಂತೆ ಸಂಪತ್ತು ತುಂಬುವುದು. ಇಷ್ಟು ದಿನ ಯಾವ ವಸ್ತು ಬಳಿ ಇಲ್ಲ, ಬೇಕು ಬೇಕು ಎಂದು ಹಂಬಲಿಸಿ ಹಾತೊರೆಯುತ್ತಿದ್ದನೋ ಅದು ಅನಾಯಾಸವಾಗಿ ಸಿಗಲು ಆರಂಭಿಸುತ್ತದೆ. ಇವನ ಸಂಪತ್ತಿನಿಂದಾಗಿ ಅರಸನ ಗಮನ ಸಹ ಹರಿದು ಗಣ್ಯ ವ್ಯಕ್ತಿಯಾಗುತ್ತಾನೆ. ಬೆಲ್ಲವಿದ್ದಲ್ಲಿ ನೊಣ, ಇರುವೆ ಬಂದು ಮುತ್ತುವಂತೆ ಬಂಧು ಬಳಗ ಪರಿವಾರ ಸುತ್ತುವರಿಯುತ್ತದೆ, ಮನೆ ತುಂಬ ಆಳುಗಳು, ಕೈ ಕೆಲಸದ ಸೇವಕರು.

ಇಷ್ಟೆಲ್ಲ ಪ್ರಾಪ್ತಿಯಾಗುತ್ತಲೇ ಸಿರಿ ಮದ ಏರಿ ಲಿಂಗದೇವನನ್ನು, ಸಮಾಜವನ್ನು ಮರೆತರೆ ಮಡಿಕೆಯ ತುಂಬ ಹಾಲನ್ನು ತುಂಬಿರುವಾಗ ಒಂದು ಕಲ್ಲು ಬಂದು ಪಟ್ಟನೆ ಬಡಿದಂತೆ! ಎಲ್ಲವೂ ಜೊಳ್ಳೆಂದು ಸೋರಿ ಹೋಗಿ ಮೊದಲನೆಯ ಸ್ಥಿತಿಗೆ, ಅದಕ್ಕಿಂತಲೂ ದಯನೀಯ ಸ್ಥಿತಿಗೆ ಇಳಿಯುವನು.

174. ಕರ್ಮಫಲಭೋಗ ತಪ್ಪದು

ಹೊಯ್ದಡೆ ಹೊಯ್ಗಳು ಕೈಯ ಮೇಲೆ;
ಬೈದಡೆ ಬೈಗಳು ಕೈಯ ಮೇಲೆ;
ಹಿಂದಣ ಜನನವೇನಾದಡಾಗಲಿ
ಇಂದಿನ ಭೋಗವು ಕೈಯ ಮೇಲೆ, ಲಿಂಗದೇವಯ್ಯಾ,
ನಿಮ್ಮ ಪೂಜಿಸಿದ ಫಲ ಕೈಯ ಮೇಲೆ. - ಬ.ವ.ದೀ.172

ಕರ್ಮ ಸಿದ್ಧಾಂತ ಹೇಳುವುದೇನೆಂದರೆ, ಬೇರೆಯವರಿಗೆ ಹೊಡೆದರೆ ಅದರ ಫಲವಾಗಿ ತಾನೂ ಹೊಡೆತ ತಿನ್ನಬೇಕು. ಬೇರೆಯವರನ್ನು ಬೈದರೆ ತಾನೂ ಬೈಗುಳವನ್ನು ಪಡೆಯುವನು, ಬಿತ್ತಿದ ಬೆಳೆಯನ್ನು ಉಣ್ಣುವಂತೆ ತಾನು ಮಾಡಿದ ಕರ್ಮಗಳ ಫಲವನ್ನು ಉಣ್ಣಲೇ ಬೇಕು. ಈ ಸಿದ್ಧಾಂತದ ಪ್ರಕಾರ ಈ ಜನ್ಮವು ಹಿಂದಿನ ಜನ್ಮಗಳ ಕರ್ಮ ಸಂಚಯದ ಫಲ. ಹೀಗಾಗಿ ಅದು ನಮ್ಮ ಕೈ ಮೀರಿದೆ. ಆದರೆ ಇಂದಿನ ಜನ್ಮವನ್ನು ರೂಪಿಸಿಕೊಳ್ಳುವುದು ನಮ್ಮ ಕೈಲೇ ಇದೆ. ಲಿಂಗದೇವನ ಅನುಗ್ರಹ ಪಡೆದುಕೊಂಡು ಪೂರ್ವದ ಲಿಖಿತವನ್ನು ಅಳಿಸಿಕೊಳ್ಳುವುದು ನಮಗೆ ಸಾಧ್ಯ. ಆದ್ದರಿಂದ ದೇವನನ್ನು ಪೂಜಿಸಿ ಬದುಕನ್ನು ದೈವೀಕರಿಸಿಕೊಂಡು, ಸಾರ್ಥಕಗೊಳಿಸಿಕೊಳ್ಳಬೇಕು.

175. ಆದ್ಯರ ವಚನ ಪರುಷದಂತೆ

ಆದ್ಯರ ವಚನ ಪರುಷ ಕಂಡಣ್ಣಾ;
ಸದಾಶಿವನೆಂಬ ಲಿಂಗವ ನೆರೆ ನಂಬುವುದು
ನಂಬಲೊಡನೆ ನೀ ಎಜಯಿ ಕಂಡಣ್ಣಾ
ಅಧರಕ್ಕೆ ಕಹಿ, ಉದರಕ್ಕೆ ಸಿಹಿ
ಲಿಂಗದೇವನ ಶರಣರ ವಚನ ಬೇವ ಸವಿದಂತೆ - ಬ.ವ.ದೀ.147

ಆದಿ ಶರಣರು ಎಂದರೆ ಗುರು ಬಸವಣ್ಣನವರೇ ಆದಿ ಪ್ರಮಥರಾಗಿ ಸಮಾವೇಶವಾದ ಅನುಭಾವಿಗಳು. ಶರಣರಲ್ಲಿ ಮೂರು ಬಗೆ - ಆದ್ಯರು, ವೇದ್ಯರು, ಸಾಧ್ಯರು ಎಂದು. ಧರ್ಮಪಿತ ಬಸವಣ್ಣನವರ ವಚನದಲ್ಲಿ ಬರುವ ಆದ್ಯರು ಎಂಬ ಪದವನ್ನು ತಪ್ಪು ಅರ್ಥ ಮಾಡಿ ಬಸವಣ್ಣನವರಿಗಿಂತ ಮುನ್ನಿನವರು ಎಂದು ವ್ಯಾಖ್ಯಾನ ಮಾಡಿ, ತಮಿಳುನಾಡಿನ 63 ಪುರಾತನರು ಎಂದು ಕೆಲವರು ಊಹಿಸಿದರೆ, ಬಸವಣ್ಣನವರಿಗೂ ಸುಮಾರು 100 ವರ್ಷ ಮೊದಲು ಇದ್ದ ದೇವಾಂಗ ಕುಲತಿಲಕ ದೇವರ ದಾಸಿಮಯ್ಯನವರು ಎಂದು ಮತ್ತೆ ಕೆಲವರು ಊಹಿಸಿಕೊಳ್ಳುತ್ತ ಬಂದರು. ದೇವರ ದಾಸಿಮಯ್ಯನವರು ಪವಾಡ ಪುರುಷರೇ ವಿನಾ ವಚನಕಾರರಲ್ಲ; ವಚನಗಳನ್ನು ಬರೆದವರು ಜೇಡರ ದಾಸಿಮಯ್ಯನವರು. ಇವರು ಅನುಭವ ಮಂಟಪದ ಶರಣರು.

ವಚನ ಸಾಹಿತ್ಯದಲ್ಲಿ ಕೆಲವರ ವಚನಗಳು ಮಹತ್ವದ ಸ್ಥಾನ ಪಡೆದಿವೆ. ಸೈದ್ಧಾಂತಿಕ ಸೂತ್ರಗಳಾಗಿವೆ. ಇವರುಗಳು ಯಾರೆಂದರೆ ಧರ್ಮಪಿತ ಬಸವಣ್ಣನವರು, ಚಿನ್ಮಯಜ್ಞಾನಿ ಚನ್ನಬಸವಣ್ಣನವರು, ಶೂನ್ಯ ಪೀಠಾಧೀಶ ಅಲ್ಲಮ ಪ್ರಭುದೇವರು, ಬಸವ ಯೋಗಿ ಸಿದ್ಧರಾಮೇಶ್ವರ, ವೀರ ವಿರಾಗಿಣಿ ಅಕ್ಕಮಹಾದೇವಿ ಮತ್ತು ವೀರಗಣಾಚಾರಿ ಮಡಿವಾಳ ಮಾಚಿದೇವರು. ಇವರನ್ನು ಆದ್ಯರೆಂದು ನಾವು ಗುರುತಿಸಬಹುದು. ಏಳುನೂರಾ ಎಪ್ಪತ್ತು ಶರಣರಲ್ಲಿ ಈ ಆರು ಜನರನ್ನುಳಿದು ಉಳಿದವರು ವೇದ್ಯರು. ಧರ್ಮಗುರು ಬಸವಣ್ಣನವರ ಕಾಲದಲ್ಲಿ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಅನುಯಾಯಿಗಳು ಆಗಿ ಹೋದರಷ್ಟೆ, ಇವರುಗಳೇ ಸಾಧ್ಯರು.

ಮೇಲೆ ಕಾಣಿಸಿದ ಆದ್ಯರು ಕೊಟ್ಟ ವಚನಗಳು ಪರುಷ ಮಣಿಯಂತೆ, ಅವುಗಳ ಅಧ್ಯಯನ, ಪಾರಾಯಣದಿಂದ ಸದಾಶಿವ ಎಂಬ ಏಕೈಕ ಲಿಂಗದೇವನನ್ನು ನಂಬುವ ಶ್ರದ್ಧೆ ಬೆಳೆಯುತ್ತದೆ. ವೈಚಾರಿಕ ಹಿನ್ನೆಲೆಯಲ್ಲಿ ದೃಢವಾಗಿ ನಂಬಿ, ದೇವನಿಗೆ ಶರಣಾಗುತ್ತಲೇ ಜೀವನದಲ್ಲಿ ಯಶಸ್ಸು ಕಟ್ಟಿಟ್ಟದ್ದು. ವಚನಗಳು ಬೋಧಿಸುವ ಜಾತ್ಯತೀತತೆ, ಸಮಾನತೆ, ಏಕದೇವೋಪಾಸನೆ ಮುಂತಾದುವು ಬೇವಿನ ಹಣ್ಣು ನಾಲಿಗೆಗೆ ಕಹಿಯಾದಂತೆ, ಸಾಂಪ್ರದಾಯಿಕ ಮೂಢ ಮನಸ್ಸುಗಳಿಗೆ ಕಹಿಯಾಗಿ ಕಂಡರೂ, ಬೇವಿನ ಹಣ್ಣು ಹೊಟ್ಟೆಗೆ ಔಷಧಿಯಾದಂತೆ, ವ್ಯಕ್ತಿ ಜೀವನಕ್ಕೆ ಸಮಾಜ ಜೀವನಕ್ಕೆ ಬಹಳ ಹಿತಕಾರಿ.

176. ಹೊತ್ತು ಹೋಗದ ಮುನ್ನ ಪೂಜಿಸು

ಹೊತ್ತಾರೆ ಎದ್ದು ಅಗ್ಘವಣಿ ಪತ್ರೆಯ ತಂದು
ಹೊತ್ತು ಹೋಗದ ಮುನ್ನ ಪೂಜಿಸು ಲಿಂಗವ
ಹೊತ್ತು ಹೋದ ಬಳಿಕ ನಿನ್ನನಾರು ಬಲ್ಲರು?
ಹೊತ್ತು ಹೋಗದ ಮುನ್ನ, ಮೃತ್ಯುವೊಯ್ಯದ ಮುನ್ನ
ಕರ್ತನ ಪೂಜಿಸು ನಮ್ಮ ಲಿಂಗದೇವನ - ಬ.ವ.ದೀ.174

ಸುಪ್ರಭಾತದಲ್ಲಿ ಎದ್ದು ಭಾವಿಗೆ, ಹೂದೋಟಕ್ಕೆ ಹೋಗಿ ಶುದ್ಧ ಜಲವನ್ನು ಮತ್ತು ಬಿಲ್ವಪತ್ರೆ -ಪುಷ್ಪಗಳನ್ನು ಸಂಗ್ರಹಿಸಿ ತಂದು ಹೊತ್ತು ಏರುವ ಮುನ್ನ ಇಷ್ಟಲಿಂಗವನ್ನು ಪೂಜಿಸಬೇಕು.

ಬೆಳಗಿನ ಮೂರರಿಂದ ಆರು (ರಾತ್ರಿಯ ಕಡೆಯ ಜಾವ) ಇಷ್ಟಲಿಂಗಾರ್ಚನೆಗೆ ಅತ್ಯುತ್ತಮ ಸಮಯ. ಆರರಿಂದ ಒಂಬತ್ತು (ಹಗಲಿನ ಜಾವ) ಪರವಾಗಿಲ್ಲ. ಆ ಸಮಯದಲ್ಲಿ ಪೂಜೆಯನ್ನು ಮಾಡಬೇಕು. ಜೀವನದಲ್ಲಿ ಬಾಲ್ಯವು ಸುಪ್ರಭಾತ, ಯೌವ್ವನವು ಮಧ್ಯಾಹ್ನ, ವಾರ್ಧಿಕ್ಯ-ಮುಪ್ಪು ಸಂಜೆ. ವ್ಯಕ್ತಿಯು ಬಾಲ್ಯದಿಂದಲೇ ಪೂಜೆ-ಪ್ರಾರ್ಥನೆ-ಅಧ್ಯಯನಗಳನ್ನು ಅಳವಡಿಸಿಕೊಳ್ಳಬೇಕು. ನೀರನ್ನು, ಹೂವನ್ನು ಸಂಗ್ರಹಿಸಲು ಸಂಚಾರ ಮಾಡುವುದರಿಂದ ಶುದ್ಧವಾದ ಆಮ್ಲಜನಕ ಸಹಿತವಾದ ಗಾಳಿಯು ಉಸಿರಾಟಕ್ಕೆ ಲಭ್ಯವಾಗುವುದು. ನೀರು ಭಕ್ತಿಯ ಸಂಕೇತ, ಪುಷ್ಪವು ಸದ್ಭಾವದ ಸಂಕೇತವಾದರೆ ಮೂರುದಳಗಳ ಬಿಲ್ವವು ತ್ರಿಕರಣ ಶುದ್ಧಿಯ ಸಂಕೇತ. ವ್ಯಕ್ತಿಯ ಬಾಲ್ಯ, ಯೌವ್ವನಗಳಲ್ಲಿ ಶರೀರದಲ್ಲಿ ಕಸುವು ಇರುತ್ತದೆ, ಪರಾವಲಂಬಿಯಾಗಿ ಇರುವುದಿಲ್ಲ. ಹೊತ್ತು ಹೋದ ಬಳಿಕ ಎಂದರೆ ಶರೀರದಲ್ಲಿನ ಶಕ್ತಿಯು ಕುಂದಿದ ಬಳಿಕ ನಿಸ್ಸಹಾಯಕನಾದ ವ್ಯಕ್ತಿಯನ್ನು ಯಾರು ಕೇಳುವರು? ಅದರಲ್ಲಿಯೂ ಮೃತ್ಯುವು ಯಾವಾಗ ಬಂದು ಎರಗುವುದೋ ಬಲ್ಲವರಾರು? ಆದ್ದರಿಂದ ಜೀವನದ ಅಮೂಲ್ಯ ಕ್ಷಣಗಳು ಕಳೆದುಹೋಗುವ ಮುನ್ನ, ಮೃತ್ಯುವು ಬಂದು ಎಳೆದೊಯ್ಯುವ ಮುನ್ನ ಸೃಷ್ಟಿಕರ್ತ ಲಿಂಗದೇವನನ್ನು ಅರ್ಚಿಸಬೇಕು.

177. ಸಂಸಾರದಲ್ಲಿ ಅತ್ಯಾಸಕ್ತಿ ಬೇಡ

ಅಚ್ಚಿಗವೇಕಯ್ಯಾ, ಸಂಸಾರದೊಡನೆ ?
ನಿಚ್ಚ ನಿಚ್ಚ ಶಿವರಾತ್ರಿಯ ಮಾಡುವುದು
ಅರ್ಚನೆ ಪೂಜನೆಯ ಮಾಡುವುದು
ಬೇಗ ಬೇಗ ಲಿಂಗದೇವನ ಕೂಡುವುದು - ಬ.ವ.ದೀ.174

ಅಚ್ಚಿಗ ಅಂದರೆ ಅತಿಯಾದ ಪ್ರೀತಿ, ಸಂಸಾರದೊಳಗೆ ಸಲ್ಲದು. ಕರ್ತವ್ಯ ಪ್ರಜ್ಞೆಯಿಂದ ಹೆಂಡತಿ ಮಕ್ಕಳನ್ನು, ಬಂಧು ಬಳಗವನ್ನು ತನ್ನ ವ್ಯಾಪಾರ -ವ್ಯವಹಾರವನ್ನು ಪ್ರೀತಿಸಬೇಕು. ಆದರೆ ಅದರಲ್ಲೇ ತಲ್ಲೀನರಾಗಬಾರದು. ನಿಚ್ಚ ನಿಚ್ಚ ಶಿವರಾತ್ರಿಯ ಮಾಡಬೇಕು. ಶಿವರಾತ್ರಿಯ ಆಚರಣೆಯೆಂದರೆ ಉಪವಾಸ ಮತ್ತು ಜಾಗರಣೆ. ವರ್ಷಕ್ಕೊಮ್ಮೆ ಹಗಲು ಉಪವಾಸ ರಾತ್ರಿ ಜಾಗರಣೆ ಮಾಡಿದರೆ ಸಾಲದು. ದಿನ ನಿತ್ಯದ ಜೀವನದಲ್ಲಿಯೂ ಮಿತಾಹಾರವನ್ನು ಅಳವಡಿಸಿಕೊಳ್ಳಬೇಕು ಮತ್ತು ಇಂದ್ರಿಯಗಳನ್ನು ನಿಯಂತ್ರಿಸಿಕೊಳ್ಳಬೇಕು. ಮಂತ್ರಜಪವನ್ನು ಅಳವಡಿಸಿಕೊಂಡು ನಿದ್ರಾವಶವಾಗುವುದರಿಂದ ಜೀವನವು ದೈವೀಕರಣಗೊಳ್ಳುವುದು. ಇದು ಒಂದು ರೀತಿಯ ಶಿವರಾತ್ರಿ ಜಾಗರಣೆ!

ನಿಚ್ಚ ನಿಚ್ಚ ಶಿವರಾತ್ರಿಯ ಮಾಡುವುದರ ಮರ್ಮವೇನೆಂದರೆ ಧರ್ಮವನ್ನು ಎಲ್ಲ ಕ್ರಿಯೆಗಳಲ್ಲೂ ಅಳವಡಿಸಿಕೊಂಡು ಮುನ್ನಡೆಯುವುದು. ಸುಪ್ರಭಾತದಲ್ಲಿ ಇಷ್ಟಲಿಂಗಾರ್ಚನೆಯನ್ನು ಮಾಡುವುದು. ಮಧ್ಯಾಹ್ನ ಕಾಯಕ - ದಾಸೋಹ ಮಾಡುವುದು. ವಯಸ್ಸು ಕಳೆದು ನಿಸ್ಸಹಾಯಕರಾಗುವ ಮೊದಲೇ ಲಿಂಗದೇವನನ್ನು ಕೂಡುವುದು.

178. ಇಂದೇ ದೇವನನ್ನು ನೆನೆ

ಅಂದು ಇಂದು ಮತ್ತೊಂದೆನಬೇಡ;
ದಿನವಿಂದೇ ಶಿವಶರಣೆಂಬವಂಗೆ !
ದಿನವಿಂದೇ ಹರಶರಣೆಂಬವಂಗೆ !
ದಿನವಿಂದೇ ನಮ್ಮ ಲಿಂಗದೇವನ ಮಾಣದೆ ನೆನೆವಂಗೆ! - ಬ.ವ.ದೀ.176

ಆ ದಿನ ಪೂಜೆ ಮಾಡಿದರಾಯಿತು, ಇಂದು ಸಂಜೆಗೆ ಮಾಡಿದರಾಯಿತು ಎಂದು ಹೊಯ್ದಾಡಬೇಡ. ಹೊರಗಿನ ಗುಡಿಗುಂಡಾರ, ತೀರ್ಥ ಕ್ಷೇತ್ರಕ್ಕೆ ಹೋಗಲು ಆ ದಿನ, ಮತ್ತೊಂದು ದಿನ ಎಂದು ಕಾಯಬೇಕು.ಅಂಗದ ಮೇಲಿದ್ದು ಪೂಜೆಗೊಳ್ಳುವ ಲಿಂಗದೇವನಿರುವಾಗ ಇನ್ನೊಂದು ದಿನ, ಮತ್ತೊಂದು ದಿನ ಎಂದು ಕಾಯಬೇಕಾಗಿಲ್ಲ. ಇಷ್ಟಲಿಂಗದೀಕ್ಷೆ ತೆಗೆದುಕೊಳ್ಳುವುದಕ್ಕೆ ಕೂಡ ಅಷ್ಟೆ, ನಂತರ ತೆಗೆದುಕೊಳ್ಳೋಣ, ಇನ್ನೊಂದು ವರ್ಷ ಹೋಗಲಿ ಎಂದು ಮುಂದೂಡುತ್ತ ಹೋಗಬಾರದು. ಯಾವ ರೀತಿ ನೌಕರಿಯಲ್ಲಿ ಸೇವಾವಧಿ ಎಣಿಕೆಯಾವುದೋ ಹಾಗೆ ಪೂಜೆಯ ದಿನಗಳು ಸಹ ಲಿಂಗದೇವನ ಮುಂದೆ ಸಾಕ್ಷಿಯಾಗುವುದು. ಒಳ್ಳೆಯ ಕೆಲಸ ಮಾಡುವ ಆಕಾಂಕ್ಷೆ ಬಂದಾಗ ನಾಳೆಗೆ, ನಾಡಿದ್ದಕ್ಕೆ ಎಂದು ಮುಂದೂಡಬಾರದು. ಕೆಟ್ಟ ಕೆಲಸ ಮಾಡುವ ಆಕಾಂಕ್ಷೆ ಹುಟ್ಟಿದಾಗ ಇಂದು ಬೇಡ, ನಾಳೆ ನೋಡುವ ಎಂದು ಮುಂದೂಡಬೇಕಂತೆ. ದಿನ ಕಳೆದಂತೆ ಒಳ್ಳೆಯ ಆಕಾಂಕ್ಷೆಯೂ ದುರ್ಬಲ ಗೊಳ್ಳುವುದು. ದೇವನನ್ನು ನೆನೆಯಲು ಈಗಲೇ ಸುಸಮಯ, ಇಂದೇ ಶ್ರೇಷ್ಠ ದಿನ ಎಂದು ಭಾವಿಸಬೇಕು. ಕೆಲವೊಮ್ಮೆ ಕೆಲವು ಪೂಜೆಗಳನ್ನು, ವ್ರತಗಳನ್ನು ಮಾಡಲು ದಿನವನ್ನು, ನಕ್ಷತ್ರವನ್ನು ಗುರುತಿಸುವುದುಂಟು. ಈ ಯಾವ ಗೋಜಲು ಇಷ್ಟಲಿಂಗಾರ್ಚಕನಿಗಿಲ್ಲ. ಎಲ್ಲ ಸಮಯವೂ ಆತನಿಗೆ ಸುಸಮಯವೇ.

179. ಶಿವಪೂಜೆಯ ವೈಭವ

ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡುವುದು;
ಮಾಡಿದ ಪೂಜೆಯ ನೋಡುವುದು,
ಶಿವತತ್ವ ಗೀತವ ಹಾಡುವುದು;
ಶಿವನ ಮುಂದೆ ನಲಿದಾಡುವುದಯ್ಯಾ,
ಭಕ್ತಿ ಸಂಭಾಷಣೆಯ ಮಾಡುವುದು;
ನಮ್ಮ ಕೂಡಲ ಸಂಗನ ಬೇಡುವುದು. -ಬ.ವ.ದೀ.177

ಹಿಂದುಗಳ ಆರಾಧನಾ ಪದ್ಧತಿಯಲ್ಲಿ ಆರ್ಯ ಮತ್ತು ದ್ರಾವಿಡ ಸಂಸ್ಕೃತಿಗಳು, ವೈದಿಕ ಮತ್ತು

ಶೈವ ಪದ್ಧತಿಗಳು ಸಮ್ಮಿಳಿತಗೊಂಡಿವೆ. ಆಗಮಗಳಿಂದ ಬಂದ ಕೆಲವು ವಿಧಿವಿಧಾನಗಳು, ವೇದಗಳಿಂದ ಬಂದ ಕೆಲವು ವಿಧಿವಿಧಾನಗಳು ಸೇರ್ಪಡೆಗೊಂಡಿವೆ. ವೈದಿಕ - ಆರ್ಯ ಸಂಸ್ಕೃತಿ ಹೋಮ - ಯಜ್ಞ ಪ್ರಧಾನವಾದುದು. ಆಗಮಿಕ - ದ್ರಾವಿಡ ಶೈವ ಸಂಸ್ಕೃತಿ ಅರ್ಚನಾ ಪ್ರಧಾನವಾದುದು. ಶಿವನು ಯಜ್ಞ ವಿರೋಧಿ, ದ್ರಾವಿಡರು ಯಜ್ಞ -ಯಾಗ ವಿರೋಧಿಗಳು. ಅವರು ಪ್ರಾಣಿ ವಧೆಯನ್ನು ವಿರೋಧಿಸುತ್ತಿದ್ದರು.

ಶೈವ ಸಂಸ್ಕೃತಿಯ ಆರಾಧನೆಯಲ್ಲಿ ಅಷ್ಟವಿಧಾರ್ಚನೆ, ಷೋಡಶೋಪಚಾರಗಳು ಬಹುಮುಖ್ಯ. ಅಷ್ಟವಿಧಾರ್ಚನೆ ಎಂದರೆ ಎಂಟು ವಸ್ತುಗಳಿಂದ ಲಿಂಗಾರ್ಚನೆ ಮಾಡುವುದು. ಅವೆಂದರೆ ಜಲ, ಗಂಧ, ಅಕ್ಷತೆ, ಪತ್ರೆ, ಪುಷ್ಪ, ಧೂಪ, ದೀಪ, ನೈವೇದ್ಯ. ಶೈವ ದೇವಾಲಯಗಳ ಪ್ರಭಾವದಿಂದ ಇಂದು ವೈಷ್ಣವ, ಶಾಕ್ತ ದೇವಾಲಯಗಳಲ್ಲಿ ಸಹ ದೇವತಾ ವಿಗ್ರಹಗಳಿಗೆ ಷೋಡಶೋಪಚಾರ ಉಂಟು. ಷೋಡಶೋಪಚಾರದಲ್ಲಿ ಬರುವ ವಸ್ತು ಮತ್ತು ಪರಿಕ್ರಮಗಳೆಂದರೆ ಅರ್ಘ್ಯ, ಪಾದ್ಯ, ಆಚಮನ, ಪತ್ರಪುಷ್ಪ, ಗಂಧ, ಅಕ್ಷತೆ, ಆಭರಣ, ಛತ್ರ, ಚಾಮರ, ವ್ಯಜನ, ಗೀತ, ವಾದ್ಯ, ನರ್ತನ, ಪ್ರದಕ್ಷಿಣ, ನಮಸ್ಕಾರ ಮತ್ತು ಸ್ತೋತ್ರ. ಸ್ಥಾವರ ಲಿಂಗಗಳು ಅಥವಾ ದೇವತಾ ಮೂರ್ತಿಗಳನ್ನು ವಿವಿಧ ಸುಗಂಧ ದ್ರವ್ಯಗಳನ್ನು ಬೆರೆಸಿದ ನೀರಿನಿಂದ ತೊಳೆಯಲಾಗುವುದು. ಗಂಧಾಭಿಷೇಕ, ಕ್ಷೀರಾಭಿಷೇಕ ಮುಂತಾಗಿಯೂ ಮಾಡಲಾಗುವುದು. ಆಚಮನ ಎಂದರೆ ಸಂಧ್ಯಾ ವಂದನೆಯ ಬಳಿಕ ಅಂಗೈ ಗುಳಿಯಲ್ಲಿ ಮಂತ್ರೋದಕವನ್ನು ಹಾಕಿಕೊಂಡು ಕುಡಿಯುವುದು. (ಲಿಂಗಾಯತ ಧರ್ಮದಲ್ಲಿ ಅಂಗೈಯಲ್ಲಿಟ್ಟು ಇಷ್ಟಲಿಂಗವನ್ನು ಪೂಜಿಸುವ ಕಾರಣ ಖಾಲಿ (ಭವಿ) ತೀರ್ಥವನ್ನು ಕುಡಿಯದೆ ಇಷ್ಟಲಿಂಗದ ನೆತ್ತಿಯ ಮೇಲೆ 3 ಬಾರಿ ತೀರ್ಥವನ್ನು ಹಾಕಿಕೊಂಡು ಕರುಣೋದಕವಾಗಿ ಮಾಡಿಕೊಂಡು ಸ್ವೀಕರಿಸಲಾಗುವುದು.) ಗುಡಿಗಳಲ್ಲಿ ವಿಗ್ರಹಗಳ ಮೇಲೆ, ಉತ್ಸವಗಳಲ್ಲಿ ಛತ್ರಿ ಹಿಡಿಯಲಾಗುವುದು, ಚಾಮರ ಬೀಸಲಾಗುವುದು. ವ್ಯಜನ ಎಂದರೆ ಕನ್ನಡಿ. ದೇವಾಲಯಗಳಲ್ಲಿ ಕನ್ನಡಿಯನ್ನು ವಿಗ್ರಹದ ಎಡಬಲಗಳಲ್ಲಿ ಹಾಕಿರುವುದುಂಟು. ಸಾಂಪ್ರದಾಯಿಕ ದೇವಾಲಯಗಳಲ್ಲಿ ಹಾಡುಗಳನ್ನು ಶಾಸ್ತ್ರೀಯವಾಗಿ ಹೇಳುವುದುಂಟು. ಪಂಚಮಹಾವಾದ್ಯಗಳಾದ ಭೇರಿ, ದುಂದುಭಿ, ಕಹಳೆ, ಶಂಖ, ತೂರ್ಯ ಇವುಗಳನ್ನು ಬಾರಿಸುವುದು, ಊದುವುದು ಉಂಟು. ಗರ್ಭಗುಡಿಯ ಮುಂದಿರುವ ರಂಗ ಮಂಟಪದಲ್ಲಿ ನರ್ತನವನ್ನು ಮಾಡಲಾಗುತ್ತಿತ್ತು. ದೇವದಾಸಿಯರು ನರ್ತನ ಮಾಡಲಿಕ್ಕಾಗಿಯೇ ಇರುತ್ತಿದ್ದರು. ಸ್ವಯಂ ಪ್ರೇರಣೆಯಿಂದಲೂ ಕೆಲವರು ದೇವರ ಸೇವೆ ಎಂದು ನರ್ತನ ಮಾಡುತ್ತಿದ್ದರು. ಉದಾ: ಬನವಾಸಿಯ ಮಾಯಾದೇವಿ. ದೇವಾಲಯಗಳನ್ನು ಪ್ರದಕ್ಷಿಣ ರೂಪದಲ್ಲಿ ಸುತ್ತುವ ಸಂಪ್ರದಾಯವಿತ್ತು. ದೇವತೆಯ ಮುಂದೆ ಬಗೆಬಗೆಯ ಭಂಗಿಯ ನಮಸ್ಕಾರಗಳೂ ಇದ್ದವು. ಕಡೆಯದೆ ಸ್ತೋತ್ರ; ದೇವತೆಯನ್ನು ಸ್ತುತಿಸುವುದು, ದೇವತೆಯನ್ನು ಆಕಾರವನ್ನು ಲೀಲೆಗಳನ್ನು ಬಣ್ಣಿಸುತ್ತ ಸ್ತುತಿ ಮಾಡುವುದು.

ಹೀಗೆ ಅಷ್ಟವಿಧಾರ್ಚನೆ, ಷೋಡಶೋಪಚಾರಗಳು ಜರುಗುತ್ತವೆ. ಬಸವರಸರು ಬಾಲ್ಯದಿಂದಲೂ ಉತ್ತಮ ಸಾಧಕರು. ಉಳಿದ ಅರ್ಚಕರು ಒಂದು ನಿತ್ಯನೇಮವೆಂದು ಕಾಟಾಚಾರದಿಂದ, ಮತ್ತೆ ಕೆಲವರು ಹಣ ಸಂಪಾದನೆಗಾಗಿ ಪೂಜಿಸಿದರೆ ಬಸವರಸರಿಗೆ ಪೂಜೆ ಒಂದು ಪ್ರೀತಿಯ ಕ್ರಿಯೆಯಾಗಿತ್ತು. ಸಂಗಮೇಶ್ವರನ ಮೇಲೆ ವಿಲಕ್ಷಣ ಮೋಹ ಸಹಿತವಾದ ಭಕ್ತಿ. ಹೀಗಾಗಿ ಅಷ್ಟವಿಧಾರ್ಚನೆ, ಷೋಡಶೋಪಚಾರ ಮಾಡಿದ ಮೇಲೆ ಕಣ್ತುಂಬ ಅಲಂಕೃತ ಸಂಗಮೇಶ್ವರ ಲಿಂಗವನ್ನು ದಿಟ್ಟಿಸಿ ನೋಡಿ, ಪುಳಕಗೊಳ್ಳುತ್ತಿದ್ದರು, ನೋಡಿ ನೋಡಿ ಆನಂದಿಸುತ್ತಿದ್ದರು. ಶಿವನಿಗೆ ಸಂಬಂಧಿಸಿದ ಸ್ತುತಿಗಳನ್ನು ಮನದುಂಬಿ ಹಾಡುತ್ತಿದ್ದರು. ಇನ್ನೂ ಮುಂದುವರಿಸು ಜನ ಸಂಚಾರ ನಿಂತ ಮೇಲೆ ಏಕಾಂತದಲ್ಲಿ ಸಂಗಮೇಶ್ವರನ ಮುಂದೆ ನರ್ತಿಸುತ್ತಿದ್ದರು. ಶಿವನ ಪ್ರತಿರೂಪವಾದ ಸಂಗಮೇಶ್ವರನನ್ನು ಒಂದು ಜಡ ವಸ್ತುವೆಂದು ಭಾವಿಸದೆ ಭಕ್ತಿ ಸಂಭಾಷಣೆಯಲ್ಲಿ ತೊಡಗುತ್ತಿದ್ದರು. ತಮ್ಮ ಮನೋಗತ ಬಯಕೆ, ಆಸೆ ಆಕಾಂಕ್ಷೆಗಳನ್ನೆಲ್ಲ ಕೂಡಲ ಸಂಗಮನ ಮುಂದೆ ತೆರೆದಿಡುತ್ತಿದ್ದರು.

ಈ ವಚನ ಸಾಧಕ ಬಸವರಸರ ಸ್ವಂತ ಜೀವನದ ಅನುಭವ. ಹರಿಹರ ಮಹಾಕವಿ ತನ್ನ ಬಸವರಾಜ ದೇವರ ರಗಳೆಯಲ್ಲಿ ಈ ದೃಶ್ಯವನ್ನು ಸಾರವತ್ತಾಗಿ ಬಣ್ಣಿಸುತ್ತಾನೆ. ಇದರಿಂದ ತಿಳಿಯುವುದೇನೆಂದರೆ ಬಸವರಸರು ಸಕಲ ಕಲಾಕೋವಿದರು ಗಾಯನ, ನರ್ತನ ಕಲೆಯೂ ಅವರಿಗಿತ್ತು ಎಂಬುದು. ಈ ವಚನವು ಸಾಕ್ಷಾತ್ಕಾರದ ಪೂರ್ವದಲ್ಲಿ, ಏಕದೇವೋಪಾಸನೆಯನ್ನು ಬೋಧಿಸುವ ಮೊದಲು ಬರೆದ ವಚನ, ಏಕೆಂದರೆ ಇಷ್ಟಲಿಂಗೋಪಾಸಕ ಅಷ್ಟವಿಧಾರ್ಚನೆ ಮಾಡುವನೇ ಹೊರತು

ಇಷ್ಟಲಿಂಗಕ್ಕೆ ಷೋಡಶೋಪಚಾರ ಮಾಡುವುದಿಲ್ಲ. ಮಾಡಿದ ಪೂಜೆ ನೋಡುವುದು, ಶಿವತತ್ವಗೀತವ ಹಾಡುವುದು -ಇದನ್ನೇನೋ ಇಷ್ಟಲಿಂಗಪೂಜೆಯಲ್ಲಿ ಅನ್ವಯಿಸಬಹುದು. ಆದರೆ ಇಷ್ಟಲಿಂಗವನ್ನು ಕೈಯಲ್ಲಿ ಹಿಡಿದು ನಲಿದಾಡು(ನರ್ತನ ಮಾಡು)ವುದಿಲ್ಲ. ಶಿವನ ಮುಂದೆ ಅನ್ನುವ ಪದ ಸಂಗಮೇಶ್ವರ ಲಿಂಗದ ಮುಂದೆ ಎಂಬುದನ್ನು ಸೂಚಿಸುತ್ತದೆ.

ಶೈವ -ಆಗಮಿಕ ಪರಂಪರೆಯಿಂದ ಬಂದ ಆರಾಧನಾ ವಿಧಾನದಲ್ಲಿ ನವಧರ್ಮ ದ್ರಷ್ಟಾರ ಬಸವಣ್ಣನವರು ತಮ್ಮ ನೂತನ ಪಥ, ಹೊಸಮತ ಲಿಂಗಾಯತದಲ್ಲಿ ಅಷ್ಟವಿಧಾರ್ಚನೆಯನ್ನು ಇಷ್ಟಲಿಂಗಾರ್ಚನೆಯಲ್ಲಿ ಉಳಿಸಿಕೊಂಡರು, ಷೋಡಶೋಪಚಾರ ಕೈಬಿಟ್ಟರು. ಆದರೆ ಅದನ್ನು ಜಂಗಮನಿಗೆ, ಸಮಾಜಕ್ಕೆ ಮಾಡಬೇಕೆಂದರು. ಹೀಗಾಗಿ ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ -ಕೃತಜ್ಞತಾ ಸಮರ್ಪಣೆಗಾಗಿ, ಜಂಗಮಕ್ಕೆ ಷೋಡಶೋಪಚಾರ ಸೃಷ್ಟಿಕರ್ತ ಲಿಂಗದೇವನ ಋಣ ತೀರಿಸಲಿಕ್ಕಾಗಿ

180. ಎಲ್ಲರೂ ದೇವಧ್ಯಾನ ಮಾಡಬೇಕು

ಆಡಿಕೊಂಡಿಹರೆಂದು (ಆಳಿಗೊಂಡಿಹರೆಂದು) ಅಂಜಲದೇಕೆ?
ನಾಸ್ತಿಕವಾಡಿಹರೆಂದು ನಾಚಲದೇಕೆ?
ಆರಾದೊಡಾಗಲಿ ಶ್ರೀ ಮಹಾದೇವಂಗೆ ಶರಣೆನ್ನಿ
ಏನೂ ಅರಿಯೆನೆಂದು ಮೌನಗೊಂಡಿರಬೇಡ
ಲಿಂಗದೇವರ ಮುಂದೆ ದಂದಣ -ದತ್ತಣ ಎನ್ನಿ. - ಬ.ವ.ದೀ.178

ಬಹುಶಃ ನಿಷ್ಠೆಯಿಂದ ಧಾರ್ಮಿಕ ಆಚರಣೆಯನ್ನು ಮಾಡುವವರನ್ನು ಕಂಡರೆ ಆಡಿಕೊಳ್ಳುವುದು ಭಾರತೀಯರ ಸಂಪ್ರದಾಯವೇ ಇರಬಹುದು! ಅದೇ ಕ್ರೈಸ್ತರು ಪ್ರಾರ್ಥನೆ ಮಾಡುವುದು ಬಹಳ ಸಹಜವಿದ್ದಂತೆ, ಮುಸಲೀಮರು ನಿತ್ಯವು ನಮಾಜ ಮಾಡುವುದು ಸಹಜ ಕ್ರಿಯೆಯಾದಂತೆ, ಭಾರತೀಯ (ಹಿಂದುಗಳಲ್ಲಿ)ರಲ್ಲಿ ಇಲ್ಲ. ಹೀಗಾಗಿ ಜನರು ಆಡಿಕೊಳ್ಳುತ್ತಾರೆಂದು, ಕೆಲವರು ಭಸ್ಮಧಾರಣೆ, ಲಿಂಗಧಾರಣೆ, ರುದ್ರಾಕ್ಷಿಧಾರಣೆಗೆ ಸಂಕೋಚ ಪಡುತ್ತಾರೆ. (ಇನ್ನೊಬ್ಬರ ಎದುರಿಗೆ ಪೂಜೆ ಮಾಡಿಕೊಳ್ಳಲು ಹಿಂಜರಿಯುತ್ತಾರೆ. ಕೆಲವರು ಅನ್ಯ ಜಾತಿಯವರು ನೋಡಿದರೆ ಮೈಲಿಗೆಯಾಗುತ್ತದೆ ಎಂಬ ಮೂಢನಂಬಿಕೆಯಿಂದಲೂ ಹಾಗೆ ವರ್ತಿಸುತ್ತಾರೆ.)

ಮತ್ತೆ ಕೆಲವರು ಧರ್ಮವಂತರನ್ನು ಕಾಣುತ್ತಲೇ ನಾಸ್ತಿಕ ಪ್ರಶ್ನೆಗಳನ್ನು ಕೇಳಲು ತೊಡಗುತ್ತಾರೆ. ದೇವರು ಇದ್ದಾನೋ! ಪೂಜೆ ಮಾಡಿದರೆ ಏನಾಗುತ್ತೆ? ಇಷ್ಟಲಿಂಗ ಶಿಲೆ, ಅದನ್ನೇಕೆ ಕಟ್ಟಿ ಪೂಜಿಸುತ್ತೀರಿ? ಈ ಪ್ರಶ್ನೆಗಳಿಗೆ ಉತ್ತರ ಕೊಡಲಾರದೆ ಧಾರ್ಮಿಕ ಕ್ರಿಯೆಗಳನ್ನು ಮಾಡಲು ಅನೇಕ ಲಿಂಗಾಯತರು ನಾಚಿಕೊಳ್ಳುತ್ತಾರೆ. (ಕ್ರೈಸ್ತರಲ್ಲಿ ಹೇಗೆ ತಮ್ಮ ಧರ್ಮದ ಪ್ರಚಾರದ ಕಳಕಳಿ, ಬ್ರಹ್ಮಕುಮಾರಿಗಳಲ್ಲಿ ಹೇಗೆ ತಮ್ಮ ಪಂಥ ಬೆಳೆಸುವ ಬಗ್ಗೆ ಕಳಕಳಿ ಮತ್ತು ತರಬೇತಿ ಇದೆಯೋ ಹಾಗೆ ಲಿಂಗಾಯತ ಧರ್ಮದ ವಿಶೇಷತೆ ಕುರಿತು ಜನರಿಗೆ ತರಬೇತಿ ನೀಡಬೇಕು. ಬೇಕೆಂತಲೇ ಪ್ರದರ್ಶಿಸಿ ಎದುರಾಳಿಗಳು ಪ್ರಶ್ನೆ ಕೇಳಲು ನಾವು ಪ್ರೇರೇಪಿಸಿ ಅವರನ್ನು ಮಾತಿಗೆ ಎಳೆಯಬೇಕು.)

ಯಾರಾದರೇನು ಅತ್ಯಂತಿಕ ಶಕ್ತಿಯಾದ ಪರಮಾತ್ಮನಿಗೆ ಶರಣಾಗಲೇ ಬೇಕು. ಲಿಂಗದೇವನನ್ನು ಪೂಜಿಸಲು ಸ್ತೋತ್ರವಾಗಲೀ, ಮಂತ್ರವಾಗಲಿ ಬರುವುದಿಲ್ಲ ಎಂದು ಮೌನದಿಂದ ಇರಬಾರದು. ಭಕ್ತಿಯಿಂದ ಪಠಿಸಿದ ಪದವೇ ಮಂತ್ರ. ಭಕ್ತಿ ಇಲ್ಲದೆ ಯಾಂತ್ರಿಕವಾಗಿ ಪಠಿಸುವ ಮಂತ್ರ ಕೇವಲ ಶಬ್ದ ಮಾತ್ರ. ಆದ್ದರಿಂದ ತನಗೆ ಬರುವ ಪದವನ್ನೇ ಮುಗ್ಧ ಭಕ್ತಿಯಿಂದ, "ಅಪ್ಪಾ, ಸ್ವಾಮಿ, ತಂದೆ" ಎಂದು ನೆನೆಯಬಹುದು.

181. ಸುಪ್ರಭಾತದ ಪೂಜೆ ಶ್ರೇಷ್ಠ ಪೂಜೆ

ಸುಪ್ರಭಾತ ಸಮಯದಲ್ಲಿ ಅರ್ತಿಯಲ್ಲಿ ಲಿಂಗವ ನೆನೆದಡೆ,
ತಪ್ಪುವುವು ಅಪಮೃತ್ಯು ಕಾಲಕರ್ಮಂಗಳಯ್ಯಾ,
ದೇವಪೂಜೆಯ ಮಾಟ, ದುರಿತ ಬಂಧನದೋಟ!
ಶಂಭು ನಿಮ್ಮಯ ನೋಟ ಹೆರೆ ಹಿಂಗದ ಕಣ್ಬೇಟ!
ಸದಾ ಸನ್ನಿಹಿತನಾಗಿ ಶರಣೆಂಬುವುದು, ನಂಬುವುದು
ಜಂಗಮಾರ್ಚನೆಯ ಮಾಟ ಲಿಂಗದೇವನ ಕೂಟ! -ಬ.ವ. ದೀ.179

ಬೆಳಗಿನ ವೇಳೆಯಲ್ಲಿ ಶ್ರೇಷ್ಠ ಸಮಯವೆಂದರೆ ರಾತ್ರಿಯ ಕಡೆಯ ಜಾವ. ಸುಮಾರು ಬೆಳಗಿನ ಮೂರರಿಂದ ಐದು ಬ್ರಾಹ್ಮೀ ಮುಹೂರ್ತ ಪೂಜೆಗೆ ಸರ್ವಶ್ರೇಷ್ಠ ಎಂದು ಹೇಳಲಾಗುವುದು. ಹಗಲಿನ ಮೊದಲ ಜಾವ ಎಂದರೆ ಆರರಿಂದ ಒಂಬತ್ತು ಪರವಾಗಿಲ್ಲ. ಸಾಂಕೇತಿಕವಾಗಿ ಹೇಳುತ್ತಾರೆ, ರಾತ್ರಿ 9 ರಿಂದ 3ರವರೆಗೆ ನಿಶಾಚರ(ರಾಕ್ಷಸ)ರ ಸಂಚಾರ, 3ರಿಂದ 6ರವರೆಗೆ ದೇವತೆಗಳ ಸಂಚಾರ, ಬೆಳಗಿನ 6 ರಿಂದ ರಾತ್ರಿ 9ರವರೆಗೆ ಮಾನವರ ಸಂಚಾರ. ಸುಪ್ರಭಾತ ಎಂದರೆ ಬೆಳಗಿನ 3ರಿಂದ 9ರವರೆಗೆ ಎಂದು ಹೇಳಬಹುದು. ಬ್ರಾಹ್ಮೀ ಮುಹೂರ್ತದಲ್ಲಿ ಮಾಡುವ ಪೂಜೆ ಶ್ರೇಷ್ಠ. ಬೆಳಗಿನ 6 ರಿಂದ 9ರವರೆಗೆ ಮಾಡುವ ಪೂಜೆ ಮಧ್ಯಮ. ಒಂಬತ್ತರ ನಂತರ ಮಾಡುವ ಪೂಜೆ ಅಷ್ಟೊಂದು ಪರಿಣಾಮಕಾರಿಯಲ್ಲ. ಒಂದು ನಿತ್ಯ ಕ್ರಿಯೆ ಎಂದು ಯಾಂತ್ರಿಕವಾಗಿ ಮಾಡಬಹುದು ಅಷ್ಟೆ.

ಈಗಾಗಲೇ ತಿಳಿಸಿರುವಂತೆ ಬಾಲ್ಯವು ಜೀವನದ ಸುಪ್ರಭಾತ. ಆ ಅವಸ್ಥೆಯಲ್ಲಿಯೇ ಪೂಜಾದಿ ಧಾರ್ಮಿಕ ಕ್ರಿಯೆಗಳನ್ನು ಮಕ್ಕಳಿಗೆ ಕಲಿಸಿಬಿಡಬೇಕು, ಅವುಗಳ ಬಗ್ಗೆ ವೈಜ್ಞಾನಿಕ ತಿಳುವಳಿಕೆ ನೀಡಬೇಕು. ಪೂಜೆಯು ಅರ್ತಿಯಿಂದ ಅಂದರೆ ಪ್ರೀತಿಪೂರ್ವಕವಾಗಿ ನಡೆಯುವ ಕ್ರಿಯೆಯಾಗಬೇಕು. ಸುಪ್ರಭಾತ ಸಮಯದಲ್ಲಿ ಪ್ರೀತಿ, ಭಕ್ತಿ ಪೂರ್ವಕವಾಗಿ ಲಿಂಗದೇವನನ್ನು ನೆನೆದರೆ ಬದುಕಿನಲ್ಲಿ ಒದಗಬಹುದಾದ ಅವಗಡಗಳು, ಗಂಡಾಂತರಗಳು ತಪ್ಪುತ್ತವೆ. ಕಾಲ ಎಂದರೆ ಭಕ್ತ ಮಾರ್ಕಂಡೇಯ ಅಕಾಲಿಕ ಮೃತ್ಯುವಿನ ಗಂಡಾಂತರವನ್ನು ಗೆದ್ದುದು. ಆದಿ ಶಂಕರಾಚಾರ್ಯರು ಬಾಲಕರಿದ್ದಾಗ ಮೊಸಳೆಯ ಬಾಯಿಯಿಂದ ಪಾರಾದುದು. ಹಿಂದಿನ ಜನ್ಮದ ಕರ್ಮಫಲಗಳ ಒತ್ತಡದಿಂದ ಈ ಜನ್ಮದಲ್ಲಿ ಗಂಡಾಂತರಗಳು ಒದಗುತ್ತವೆ. ಕಣ್ಣಿಗೆ ಕಣ್ಣು, ಕಾಲಿಗೆ ಕಾಲು, ಬಿತ್ತಿದ ಬೆಳೆಯನ್ನು ಉಣ್ಣಲೇಬೇಕು ಎಂಬ ಸಿದ್ಧಾಂತದ ಮೇಲೆ ಇದು ನಿಂತಿದೆ. ನಿಜವಾದ ಶ್ರದ್ಧಾಭಕ್ತಿಯಿಂದ ಪೂಜೆ ಮಾಡುತ್ತ ಹೋದಾಗ ಆ ಕರ್ಮಗಳ ಒತ್ತಡ ಕಡಿಮೆಯಾಗುತ್ತದೆ. ಹೀಗಾಗಿ "ದೇವಪೂಜೆಯ ಮಾಟದಿಂದ ದುರಿತ ಬಂಧನದ ಓಟವಾಗುತ್ತದೆ."

ಕೇವಲ ಕರ್ಮ ನಿವಾರಣೆಗಾಗಿ ಮಾತ್ರ ಇಷ್ಟಲಿಂಗಪೂಜೆಯನ್ನು ಮಾಡುವುದು ಅಲ್ಪಾಕಾಂಕ್ಷೆಯಾಗುವುದು. ಇದರ ಗುರಿ ದಿವ್ಯಾನುಭವವನ್ನು ಪಡೆಯುವುದು. ಅದಕ್ಕಾಗಿದೆ ತ್ರಾಟಕ ಯೋಗ! ಶಂಭು ನಿಮ್ಮಯ ನೋಟ ಹೆರೆ ಹಿಂಗದ ಕಣ್ಬೇಟ. ದೃಷ್ಟಿಯ ಮೂಲಕ ಏಕಾಗ್ರತೆ ಸಾಧಿಸಿ ಲಿಂಗಾಂಗ ಸಾಮರಸ್ಯವನ್ನು ಹೊಂದುವುದೇ ಲಿಂಗಾರ್ಚನೆಯ ಗುರಿ. ಬೆಳಗಿನ ಪೂಜೆ ಮುಗಿಯುತ್ತಲೇ ಇಡೀ ದಿನ ದೇವನನ್ನು ಮರೆಯುವುದೆ? ಇಲ್ಲ, ಹೊರಗಿನ ಮನಸ್ಸು ವ್ಯವಹಾರಗಳನ್ನು ಮಾಡುತ್ತಿದ್ದರೂ ಒಳಗಿನ ಮನಸ್ಸು ಲಿಂಗದೇವನೊಡನೆ "ಸನ್ನಿಹಿತ" (In touch with) ಸಂಬಂಧ ಹೊಂದಿರಬೇಕು. ದೇವನಿಗೆ ಶರಣಾಗಿರಬೇಕು. ದೇವನು ಸದಾ ತಮ್ಮ ಒಡನೆ ಇದ್ದಾನೆ. "ಹಾವು ಕಚ್ಚಿ ಮುಟ್ಟಿಹ ಶಿಶುವೆಂದು ಹೆತ್ತತಾಯಿ ಮಗನ ಬೆಂಬತ್ತಿ ಬಪ್ಪಂತೆ, ಇಪ್ಪಂತೆ" ದೇವನು ತನ್ನ ರಕ್ಷಕನಾಗಿ ಇರುವನು ಎಂದು ನಂಬಬೇಕು. ದಿನವಿಡೀ, ಜೀವನವಿಡೀ ಕೇವಲ ಪೂಜೆ ಮಾಡುವುದೇ ಕೆಲಸವಲ್ಲ; ಬೆಳಗಿನ ಪೂಜೆ ಮುಗಿದ ಮೇಲೆ ಜಂಗಮಾರ್ಚನೆ, ಸೇವೆ ಆರಂಭವಾಗುತ್ತದೆ. ಕಾಯಕ ಮಾಡುವುದು, ದಾಸೋಹ ಗೈವುದು, ಜಂಗಮರನ್ನು ಗೌರವಿಸುವುದು ಇದೆಲ್ಲವೂ ಜಂಗಮಾರ್ಚನೆ ಅಂದರೆ ಸಮಾಜ ಸೇವೆ. ವ್ಯಕ್ತಿಯು ಕೇವಲ ಆತ್ಮಮುಖಿಯಾಗಿ ಆತ್ಮೋದ್ಧಾರಕ್ಕೆ ಗಮನ ಕೊಟ್ಟರೆ ಸಾಲದು ಸಮಾಜ -ಸಮಷ್ಟಿ ಮುಖಿಯಾಗಿ ಸೇವಾಕಾರ್ಯಗಳಲ್ಲಿಯೂ ತೊಡಗಿಸಿಕೊಳ್ಳಬೇಕು. ಆಗ ಮಾತ್ರ ಭಕ್ತಿಯೂ ಪರಿಪೂರ್ಣಗೊಂಡು ಲಿಂಗದೇವನೊಡನೆ ಸಾಮರಸ್ಯ ಹೊಂದಲು ಸಹಕಾರಿಯಾಗುವುದು.

182. ದೇವ ನೆನಹಿನಿಂದ ಪಾಪಕ್ಷಯ

ಅಂಕ ಕಳನೇರಿ ಕೈಮರೆದಿರ್ದಡೆ
ಮಾರಂಕ ಬಂದಿರುವುದ ಮಾಣ್ಬನೆ?
ನೆನಹ ಮತಿ ಮರೆದಿರ್ದಡೆ
ಪಾಪ ತನುವನಂಡಲೆವುದ ಮಾಣ್ಬುದೆ?
ಲಿಂಗದೇವನ ನೆನೆದಡೆ,
ಪಾಪ ಉರಿಗೊಡ್ಡಿದರಗಿನಂತೆ ಕರಗುವುದಯ್ಯಾ, - ಬ. ವ. ದೀ. 180

ಒಬ್ಬ ಅಪ್ರತಿಮ ಶೂರ, ಕಳ ಎಂದರೆ ಯುದ್ಧಭೂಮಿಗೆ ಇಳಿದಿದ್ದಾನೆ. ಆದರೆ ಕೈ ಅಂದರೆ ಆಯುಧವನ್ನು ಮರೆತಿದ್ದಾನೆ. ಆಗ ಎದುರಾಳಿಯು ಬಂದರೆ ಇರಿಯುವುದನ್ನು ಬಿಡುವನೆ? ಅತ್ತವು

ದೇವನ ಒಂದು ಅಂಶ, ಸ್ವಭಾವತಃ ಶುದ್ಧ ಚೈತನ್ಯ. ಆದರಿಂದು ಮೂರು ಶರೀರ ಅದರಲ್ಲಿರುವ ಮೂರು ಮಲಗಳಿಂದ ಆವೃತಗೊಂಡು ಬದ್ಧ ಚೇತನವಾಗಿ ಭವ ಎಂಬ ಯುದ್ಧಭೂಮಿಗೆ ಇಳಿದಿದೆ. ಇದನ್ನು ಪಾಪ ಎಂಬ ಸಶಸ್ತ್ರಧಾರಿ ಎದುರಾಳಿ ಹೆದರಿಸುತ್ತಿದೆ, ವಿರುದ್ಧ ಹೋರಾಡುತ್ತಿದೆ. ಮನುಷ್ಯನ ಚಿತ್ತಮನ ಬುದ್ಧಿಗಳು ದೇವನ ನೆನಹನ್ನು ಮರೆತಿದ್ದರೆ ಆಗ ಪಾಪ ಎಂಬ ಆತ್ಮನ ಶತ್ರು ಬಂದು ತನು ಮನಗಳನ್ನು ಆಶ್ರಯಿಸಿಕೊಳ್ಳುವುದನ್ನು ಬಿಡುವುದೆ? ಎಷ್ಟೇ ಪಾಪಿಯಾಗಿರಲಿ ಲಿಂಗದೇವನನ್ನು ನೆನೆದುದೇ ಆದರೆ ಪಾಪವು ಉರಿಗೊಡ್ಡಿದ ಅರಗಿನಂತೆ ಕರಗಿ ನಿಶ್ಶೇಷವಾಗುವುದು.

183. ಆಡುವುದು ಹಾಡುವುದು ಶರಣರ ಮುಂದೆ

ಆಡಿರಯ್ಯಾ ಹಾಡಿರಯ್ಯಾ ಮನಬಂದ ಪರಿಯಲಿ!
ಶಿವಶರಣರ ಮುಂದೆ ಆಡಿರಯ್ಯಾ ಹಾಡಿರಯ್ಯಾ!
ಕೋಡಂಗಿಯಾಟವನಾಡಿದ ಭಕ್ತಂಗೆ
ಬೇಡಿತ್ತನೀವ ನಮ್ಮ ಲಿಂಗದೇವ. - ಬ.ವ.ದೀ.181

ಭಕ್ತಿಯ ಅಭಿವ್ಯಕ್ತಿಯಲ್ಲಿ ನರ್ತಿಸುವುದು, ಹಾಡುವುದು ಸ್ವಾಭಾವಿಕ. ಇಲ್ಲಿ ನರ್ತನವೆಂದರೆ ಶಾಸ್ತ್ರೀಯ ಭರತನಾಟ್ಯವಲ್ಲ. ಭಕ್ತಿಯ ಪಾರಮ್ಯದಲ್ಲಿ ಭಕ್ತನು ನರ್ತಿಸುವುದು. ಇನ್ನು ಕೆಲವು (ಅಸಂಸ್ಕೃತ) ಪಂಥಗಳವರು ಮೈಮೇಲಿನ ಬಟ್ಟೆಯ ಪ್ರಜ್ಞೆಯೂ ಇಲ್ಲದೆ ಧೋ ಧೋ ಎಂದು ಕುಣಿಯುವರು. ಮತ್ತೆ ಕೆಲವು ಪಂಥದವರು ಹುಚ್ಚರಂತೆ ಕುಣಿಯುವರು. ಈ ರೀತಿ ಅಲ್ಲ, ನಾಜೂಕಾಗಿ ಭಕ್ತಿ ಪರವಶತೆಯಿಂದ ಹಾಡಿನ ಅರ್ಥಕ್ಕೆ ತಕ್ಕಂತೆ ನರ್ತಿಸುವುದು ನೋಡುಗರಲ್ಲಿ ತಿರಸ್ಕಾರ ಹುಟ್ಟಿಸದೆ ಭಕ್ತಿಯನ್ನು ಪ್ರೇರೇಪಿಸುತ್ತದೆ. ಈ ನರ್ತನ ಸಹ ಧರ್ಮೀಯರಾದ ಶರಣರ ಮಧ್ಯೆ ಮಾತ್ರ. ಮಕ್ಕಳು ಮುದ್ದು ಮುದ್ದಾಗಿ ಕುಣಿದಾಗ ಹೇಗೆ ತಾಯಿ ತಂದೆಗಳಿಗೆ ಸಂತೋಷವೋ ಹಾಗೆ ಭಕ್ತನ ಗಾಯನ ನರ್ತನಗಳು ಲಿಂಗದೇವನಿಗೆ ಖುಷಿಯನ್ನು ಕೊಡುತ್ತವೆ. ಹೀಗಾಗಿ ಭಕ್ತನು ಬೇಡಿದ ವರವನ್ನು ದೇವನು ಕೊಡುವನು. ಈ ಭಕ್ತನೋ ಏನನ್ನೂ ಬೇಡುವವನಲ್ಲ. ಅವನ ಅಗತ್ಯತೆಯನ್ನರಿತು ದೇವನೇ ಅನುಗ್ರಹಿಸುವನು.

184. ಒಂದು ಸೊಲ್ಲಿಂಗೆ ಮುಕ್ತಿ

ಹೊಲಬುಗೊಂಡು ಅರಸಬೇಡ, ಬಲಿತು ತೆರಬೇಡ;
ಒಲಿದೊಮ್ಮೆ ಶಿವಶರಣೆನ್ನಿರಯ್ಯಾ
ಒಂದು ಸೊಲ್ಲಿಂಗೆ ಮುಕ್ತಿ ಸಿದ್ಧಿ
ಲಿಂಗದೇವನು ಭಕ್ತಿಲಂಪಟನಾಗಿ - ಬ.ವ.ದೀ.182

ಹೊಲಬು ಅಂದರೆ ಮಾರ್ಗ. ಪರಿಪೂರ್ಣವಾದ ಧರ್ಮಮಾರ್ಗವೆಂದು ಒಮ್ಮೆ ಸ್ವೀಕರಿಸಿದ ಬಳಿಕ ಪುನಃ ಹೊಸ ದಾರಿಗಳನ್ನು ಹುಡುಕಲು ಹೋಗಬೇಡ. ದುರಹಂಕಾರದಿಂದ ಬಲಿತು, ಮದವೇರಿ ವರ್ತಿಸಿ ಅದಕ್ಕಾಗಿ ಮುಂದೆ ತಪ್ಪುದಂಡ ತೆರಬೇಡ ಅರ್ಥಾತ್ ಪಶ್ಚಾತ್ತಾಪ ಪಡಬೇಡ. ಮನವೊಲಿದು ದೇವನಿಗೆ ಶರಣಾಗಿರಿ. ನಿಷ್ಠೆಯಿಂದ ಮಾಡುವ ಒಂದೇ ಒಂದು ಮಂತ್ರಜಪದಿಂದ ಮುಕ್ತಿಯು ಪ್ರಾಪ್ತಿಯಾಗುವುದು. ಏಕೆಂದರೆ ಲಿಂಗದೇವನು ಭಕ್ತಿ ಲಂಪಟನು. ಭಕ್ತರ ಭಕ್ತಿಗೆ ಮೆಚ್ಚಿ ಆಕರ್ಷಿತನಾಗುವನು. ಲಂಪಟತ್ವವು ಅತಿಯಾದ ಮೋಹ ಎಂಬುದನ್ನು ಬಿಂಬಿಸುತ್ತದೆ.

"ಹೊಲಬುಗೊಂಡು ಅರಸಬೇಡ" ಎಂಬ ವಾಕ್ಯ ಬಹಳ ಮಹತ್ವಪೂರ್ಣ. ಅನೇಕರಿಗೆ ಸೃಷ್ಟಿಕರ್ತನಲ್ಲಿ, ಧರ್ಮಗುರುವಿನಲ್ಲಿ ನಂಬಿಕೆ ಇರದು. ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಹಲವಾರು ದೇವ ದೇವತೆಗಳನ್ನು ಆಶ್ರಯಿಸಲು ಹೋಗುವರು. ಕಡೆಗೆ ಕ್ಷುದ್ರ, ಉಗ್ರ ದೇವತೆಗಳನ್ನು ಆಶ್ರಯಿಸಲು ಹೋಗುವರು. ಕೆಲವರು ಲಿಂಗಾಯತ ಧರ್ಮದಲ್ಲಿಯೇ ಏಕದೇವೋಪಾಸನೆ, ನಿರಾಕಾರ ದೇವರ ಪರಿಕಲ್ಪನೆ, ದೃಷ್ಟಿಯೋಗ (ಇಷ್ಟಲಿಂಗ ತ್ರಾಟಕ), ಸ್ತ್ರೀ ಸಮಾನತೆ ಎಲ್ಲ ಇರುವಾಗ ಇದನ್ನು ಅರಿತು ಅನುಸರಿಸುವುದನ್ನು ಬಿಟ್ಟು ಇಷ್ಟಲಿಂಗವನ್ನು ತೊರೆದು ಬೇರೆ ಬೇರೆ ಪಂಥಗಳಿಗೆ ಹರಿದಾಡುವುದುಂಟು. ಅದಕ್ಕೆ ಧರ್ಮಪಿತರು ಹೇಳುತ್ತಾರೆ: "ಇಂಥ ಶ್ರೇಷ್ಠ ಲಿಂಗಾಯತ ಧರ್ಮದ ಹೊಲಬನ್ನು ಹೊಂದಿಯೂ ಸಹ ಮತ್ತೆ ಬೇರೆ ಮಾರ್ಗವನ್ನು ಹುಡುಕಲು ಹೋಗಬೇಡ" ಎಂದು. ಮತ್ತೆ ಕೆಲವರಿಗೆ ರೂಪ, ವಿದ್ಯೆ, ಸಂಪತ್ತು, ಅಧಿಕಾರ. ಇತ್ಯಾದಿ ಇರುವಾಗ ಭಯಂಕರ ಮದದಿಂದ ಬಲಿತು (ಸೊಕ್ಕಿ -ಕೊಬ್ಬಿ)

ವರ್ತಿಸುವರು. ಇಂಥವರಿಗೆ ಶಿಕ್ಷೆ ತಪ್ಪಿದಲ್ಲ. ಯಾರೊಡನೆ ಮದದಿಂದ ವರ್ತಿಸಿರುವರೋ ಅವರ ಎದುರಿಗೇ ಇವರು ದೈನ್ಯಾವಸ್ಥೆಯಲ್ಲಿ ಬಾಗಿ ನಿಲ್ಲಬೇಕಾಗುತ್ತದೆ. "ಒಂದು ಸೊಲ್ಲಿಂಗೆ ಮುಕ್ತಿ ಸಿದ್ಧಿ" ಎಂದು ಗುರು ಬಸವಣ್ಣನವರು ಆಶ್ವಾಸನೆ ನೀಡುತ್ತಾರೆ. ಗುರುವು ದೀಕ್ಷಾ ಸಮಯದಲ್ಲಿ ಒಂದು ಮಂತ್ರವನ್ನು ಉಪದೇಶಿಸುತ್ತಾನೆ ಅದನ್ನು ಶ್ರದ್ಧೆ- ನಿಷ್ಠೆಯಿಂದ ಜಪಿಸಿದರೆ ಸಾಕು ಮುಕ್ತಿ ಎಂಬುದು ಕಟ್ಟಿಟ್ಟ ಬುತ್ತಿ. ಭಕ್ತನು ಮುಗ್ಧ ಭಕ್ತಿಯಿಂದ ಯಾವ ಪದವನ್ನು ಉಚ್ಚರಿಸುವನೋ ಅದೇ ಮಂತ್ರವಾಗಿ ಮುಕ್ತಿಗೆ ಕಾರಣವಾಗುತ್ತದೆ.

185. ಭಕ್ತಿಪ್ರಿಯ ಶಿವನು.

ನಾದಪ್ರಿಯ ಶಿವನೆಂಬರು, ನಾದಪ್ರಿಯ ಶಿವನಲ್ಲಯ್ಯಾ
ವೇದಪ್ರಿಯ ಶಿವನೆಂಬರು, ವೇದಪ್ರಿಯ ಶಿವನಲ್ಲಯ್ಯಾ
ನಾದವ ಮಾಡಿದ ರಾವಣಂಗೆ ಅರೆ ಆಯುಷ್ಯವಾಯಿತ್ತು.
ವೇದವನೋದಿದ ಬ್ರಹ್ಮನ ಶಿರ ಹೋಯಿತ್ತು.
ನಾದಪ್ರಿಯನೂ ಅಲ್ಲ, ವೇದಪ್ರಿಯನೂ ಅಲ್ಲ
ಭಕ್ತಿ ಪ್ರಿಯ ನಮ್ಮ ಲಿಂಗದೇವಾ. - ಬ.ವ.ದೀ.183

ಶಿವನು ನಾದಪ್ರಿಯನು; ಅದಕ್ಕೆ ರಾವಣ ಚಕ್ರವರ್ತಿಯು ಶಿವನನ್ನು ಒಲಿಸಲು ತನ್ನ ಕರುಳನ್ನೇ ತಂತಿಯನ್ನಾಗಿ ಮಾಡಿ ವೀಣೆ ಬಾರಿಸಿದ, ಹಾಡಿದ ಎಂದು ಪುರಾಣಗಳಲ್ಲಿ ಬಣ್ಣಿಸಲಾಗುವುದು. ಅದೇ ರೀತಿ ಶಿವನು ವೇದಪ್ರಿಯನು, ಶಾಸ್ತ್ರೀಯವಾಗಿ ವೇದೋಕ್ತ ಮಂತ್ರಗಳನ್ನು ಪಠಿಸಿದರೆ ಶಿವನು ಒಲಿವನು. ಅದಕ್ಕಾಗಿ ರಚನೆಯಾಯಿತು ಸಾಮವೇದ. ನಿಜ, ಆದರೆ ನಾವು ಇತಿಹಾಸದಲ್ಲಿ ನೋಡುತ್ತೇವೆ. ಅಷ್ಟು ಚೆನ್ನಾಗಿ ವೀಣೆಯನ್ನು ಬಾರಿಸಿ ನಾದ ಸೇವೆಯನ್ನು ಮಾಡಿದ ರಾವಣನಿಗೆ ಪರಸ್ತ್ರೀಯನ್ನು ಅಪಹರಿಸಿದ ಪಾಪದ ಫಲವಾಗಿ ಅರ್ಧ ಆಯುಷ್ಯವಾಯಿತು. ವೇದ ಪಾರಂಗತನಾದ ಬ್ರಹ್ಮನು ಮದದಿಂದ ವರ್ತಿಸಿದ್ದಕ್ಕಾಗಿ ತನ್ನ ತಲೆಯನ್ನು ಕಳೆದುಕೊಳ್ಳಬೇಕಾಯಿತು. ಇದರಿಂದ ಮನದಟ್ಟಾಗುವುದೇನೆಂದರೆ ಶಿವನು ನಾದಪ್ರಿಯನೂ ಅಲ್ಲ, ವೇದ ಪ್ರಿಯನೂ ಅಲ್ಲ ಭಕ್ತಿ ಪ್ರಿಯನು. ಅವನನ್ನೊಲಿಸುವ ಭಕ್ತಿ ಹೇಗಿರಬೇಕೆಂದರೆ (ರಾವಣನ ನಡತೆಯಂತೆ) ಅನೀತಿಯಿಂದ ಕೂಡಿರಬಾರದು; ಬ್ರಹ್ಮನಂತೆ ಮದದಿಂದ ಕೂಡಿರಬಾರದು ; ಶ್ರದ್ಧೆ ಮತ್ತು ಶರಣಾಗತಿಯಿಂದ ಕೂಡಿರಬೇಕು.

186. ದೇವನ ನೇರಪೂಜೆ

ಹಸಿವಾದಡುಂಬುದನು, ಸತಿಯ ಸಂಭೋಗವನು
ಆನಾಗಿ ನೀ ಮಾಡೆಂಬುವವರುಂಟೆ?
ಮಾಡುವುದು, ಮಾಡುವುದು, ಮನಮುಟ್ಟಿ;
ಮಾಡುವುದು, ಮಾಡುವುದು, ತನುಮುಟ್ಟಿ;
ತನುಮುಟ್ಟಿ ಮನಮುಟ್ಟದಿರ್ದಡೆ
ಲಿಂಗದೇವನೇತರಲ್ಲಿಯೂ ಮೆಚ್ಚ ! - ಬ.ವ.ದೀ.184

ವೈದಿಕ ಧರ್ಮದ ಹಲವಾರು ದೋಷಗಳಲ್ಲಿ ಪುರೋಹಿತರ ಮೂಲಕ ಪೂಜೆ ಮಾಡಿಸುವುದೂ ಒಂದು. ಸತ್ಯನಾರಾಯಣ ಪೂಜೆ, ನವಗ್ರಹ ಪೂಜೆ ಮಾತ್ರವಲ್ಲದೆ ಮನೆಯ ಪೂಜಾಮಂದಿರದಲ್ಲಿರುವ ದೇವತಾ ವಿಗ್ರಹಗಳನ್ನು ಸಹ ಪುರೋಹಿತರ ಕೈಲಿ ಮಾಡಿಸುವರು. ಇನ್ನು ಮಹಿಳೆಯರಂತೂ ಉಪನಯನ ಹೊಂದುವಂತಿಲ್ಲ, ಗಾಯಿತ್ರಿ ಮಂತ್ರ ಪಠಿಸುವಂತಿಲ್ಲ. ಕೆಲವು ಶ್ರೀಮಂತರು ತಿಂಗಳ ಸಂಬಳದ ಮೇಲೆ ಪುರೋಹಿತರನ್ನು ನೇಮಿಸಿಕೊಳ್ಳುವರು. ಅವರು ಬಂದು ಇವರ ಮನೆಯಲ್ಲಿರುವ ದೇವತಾ ವಿಗ್ರಹ, ಭಾವಚಿತ್ರ ಪೂಜಿಸಿ ಮನೆಯವರಿಗೆ ಮಂಗಳಾರತಿ, ತೀರ್ಥ ಪ್ರಸಾದ ಕೊಟ್ಟು ಹೋಗುವರು. ಇದು ಬಸವಣ್ಣನವರಿಗೆ ವಿಚಿತ್ರವೆನಿಸಿತು. ಅದನ್ನು ವಿಡಂಬಿಸಿ ಹೇಳುತ್ತಾರೆ, ಹಸಿವಾದಡೆ ಊಟ ಮಾಡುವುದನ್ನು, ದಾಂಪತ್ಯ ಸುಖ ಬೇಕಾದರೆ ಅದನ್ನು ನನ್ನ ಪರವಾಗಿ ನೀನು ಮಾಡು ಎಂದು ಯಾರಿಗಾದರೂ ವಹಿಸಿಕೊಡಲು ಬರುವುದೆ? ಹಾಗೆಯೇ ದೇವರ ಅನುಗ್ರಹ ಬೇಕಾದವನು ಮನಃಪೂರ್ವಕವಾಗಿ ಪೂಜಿಸಬೇಕು; ಆ ಪೂಜೆಯಲ್ಲಿ ತನ್ನ ತನುವೂ ತೊಡಗಬೇಕು.

ಕೇವಲ ಯಾಂತ್ರಿಕವಾಗಿ ತನುವನ್ನು ಮಾತ್ರ ತೊಡಗಿಸಿ ಮನಸ್ಸನ್ನು ತೊಡಗಿಸದಿದ್ದರೆ ಲಿಂಗದೇವನು ಖಂಡಿತ ಮೆಚ್ಚಿಕೊಳ್ಳನು.

187. ಉಪಚಾರದ ಪೂಜೆ ಬೇಡ

ತನ್ನಾಶ್ರಯದ ಸತಿ ಸುಖವನು, ತಾನುಂಬ ಊಟವನು
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ?
ತನ್ನ ಲಿಂಗಕ್ಕೆ ಮಾಡುವ ನಿತ್ಯನೇಮವ ತಾ ಮಾಡಬೇಕಲ್ಲದೆ
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ?
ಕೆಮ್ಮನೆ ಉಪಚಾರಕ್ಕೆ ಮಾಡುವರೆಲ್ಲರು
ನಿಮ್ಮನೆತ್ತ ಬಲ್ಲರು ಲಿಂಗದೇವಾ? - ಬ.ವ.ದೀ.156

ಮೇಲಿನ ವಚನದ ವಿಚಾರವೇ ಇಲ್ಲೂ ಇದೆ. ತನ್ನ ಆಶ್ರಯದಲ್ಲಿರುವ ಸತಿಯ ಸುಖವನ್ನು, ಹಸಿವಾದಾಗ ತಾನು ಮಾಡುವ ಊಟವನ್ನು ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ? ಅದೇ ರೀತಿ ಲಿಂಗದೇವನ ಪೂಜೆಯನ್ನು ನಿತ್ಯವೂ ನಿಯಮಿತವಾಗಿ ತಾನೇ ಮಾಡಬೇಕಲ್ಲದ ಬೇರೆ ಮತ್ತೊಬ್ಬರ ಮೂಲಕ ಮಾಡಿಸಬಹುದೆ? ಕೆಲವರು (ಶ್ರೀಮಂತರು) ವೈಭವಪೂರ್ಣವಾಗಿ ಆಡಂಬರ ಪ್ರದರ್ಶನಕ್ಕಾಗಿ (ಸತ್ಯನಾರಾಯಣ ಪೂಜೆ ಮುಂತಾದವನ್ನು) ಏರ್ಪಡಿಸುವರು. ಇವರು ಉಪಚಾರಕ್ಕಾಗಿ ಮಾಡುವವರು, ದೇವರ ಸ್ವರೂಪವನ್ನೇ ಅರಿಯರು.

ಒಂದು ದೃಷ್ಟಾಂತವನ್ನು ಓದಿದೆ. ಒಮ್ಮೆ ಒಬ್ಬ ರಾಜಕುಮಾರ ಕಾಡಿನಲ್ಲಿ ಓರ್ವ ಸುಂದರ ಯುವತಿಯನ್ನು ಕಂಡು ಇಷ್ಟಪಟ್ಟು ಮದುವೆಯಾಗಿ ಅರಮನೆಗೆ ಕರೆತಂದ. ಅವಳು ಒಂದು ಮುದ್ದಾದ ಸುಂದರ ಬೆಕ್ಕನ್ನು ಸಾಕಿಕೊಂಡಿದ್ದಳು. ಅದನ್ನೂ ತೆಗೆದುಕೊಂಡು ಅರಮನೆಗೆ ಬಂದಳು. ಒಂದು ದಿನ ತಿರುಗಾಡುತ್ತ ಆ ಬೆಕ್ಕು ಅರಮನೆಯ ತೋಟಕ್ಕೆ ಹೋಯಿತು. ಬೆಕ್ಕು ಕಾಣದಾದಾಗ ರಾಣಿ ಅಳತೊಡಗಿದಳು. ಎಲ್ಲಿದ್ದರೂ ಬೆಕ್ಕನ್ನು ಹುಡುಕಿ ತರಬೇಕೆಂದು ರಾಜ ಆಜ್ಞೆ ಮಾಡಿದ. ಅರಮನೆಯ ಸಿಬ್ಬಂದಿ ಡೋಲು ಬಾರಿಸುತ್ತ ಹುಡುಕಲು ಪ್ರಾರಂಭಿಸಿದರು. ವಾಸನೆ ಹಿಡಿಯಲು ನಾಯಿಗಳನ್ನು ಒಯ್ದರು. ಈ ಗದ್ದಲ ನೋಡಿ ಗಾಬರಿಗೊಂಡು ಬೆಕ್ಕು ಒಂದು ಗಿಡದ ಪೊಟರೆಯಲ್ಲಿ ಅಡಗಿ ಕುಳಿತಿತು. ಬೆಕ್ಕು ಸಿಗಲಿಲ್ಲವೆಂದು ಅರಮನೆಯ ಸಿಬ್ಬಂದಿ ಮರಳಿ ಬಂದರು. ರಾತ್ರಿಯಾಯಿತು; ರಾಣಿಯ ದುಃಖ ಆರದೆ ನಿದ್ರೆ ಬರಲಿಲ್ಲ. ತಾನೇ ಸ್ವತಃ ಆ ನೀರವ ರಾತ್ರಿಯಲ್ಲಿ ಹೊರಹೋದಳು. ತನ್ನ ಮುದ್ದಿನ ಬೆಕ್ಕಿನ ಹೆಸರನ್ನು ಹಿಡಿದು ಕರೆದಳು. ಆ ಪೊಟರೆಯಲ್ಲಿ ಅಡಗಿ ಕುಳಿತಿದ್ದ ಬೆಕ್ಕು ಓಡುತ್ತ ಬಂದಿತು.

ಸದ್ದು ಗದ್ದಲ ಆಡಂಬರ ಪೂಜೆಯ ದೇವಾಲಯಗಳಲ್ಲಿಯೂ ಸಹ ದೇವನು ನೆಲೆಸಿರುವುದು ಅಸಂಭವ. ಅಂಥ ಪೂಜೆಗಳಿಗೆ ಒಲಿಯುವುದೂ ದುರ್ಲಭ. ನೀರವ ರಾತ್ರಿಯಲ್ಲಿ ರಾಣಿಯು ಪ್ರೀತಿಯಿಂದ ಕರೆದ ಧ್ವನಿ ಹೇಗೆ ಬೆಕ್ಕನ್ನು ಆಕರ್ಷಿಸಿತೋ ಹಾಗೆ ಮೌನವಾಗಿ ಅಥವಾ ಭಕ್ತಿಯಿಂದ ಭಕ್ತನೇ ನೇರವಾಗಿ ಮಾಡುವ ಪೂಜೆ-ಪ್ರಾರ್ಥನೆ ಲಿಂಗದೇವನನ್ನು ಒಲಿಸುತ್ತವೆ. ಎಲ್ಲರೂ ಪೂಜೆಯನ್ನು ಅವರವರೇ ಮಾಡಬೇಕು, ಇತರರ ಕೈಯಲ್ಲಿ ಮಾಡಿಸುವುದಲ್ಲ ಎಂಬ ಘೋಷಣೆಯನ್ನು ಮಾಡಿ ಗುರು ಬಸವಣ್ಣನವರು ಅಷ್ಟಕ್ಕೇ ಸುಮ್ಮನಾಗಲಿಲ್ಲ.

1. ನೇರವಾಗಿ ಪೂಜಿಸಲು ಅನುಕೂಲವಾಗುವಂತೆ ಎಲ್ಲರಿಗೂ ದೀಕ್ಷಾ ಸಂಸ್ಕಾರವನ್ನು ನೀಡಿದರು.
2. ಎಲ್ಲರೂ ಪೂಜಿಸಲು ಎಲ್ಲರ ಅಂಗೈಗೆ ಇಷ್ಟಲಿಂಗವನ್ನು ಕೊಟ್ಟರು. ಪುರೋಹಿತನ ಮಧ್ಯಸ್ಥಿಕೆ ತೊಡೆದು ಹಾಕಿ ದೇವ ಮತ್ತು ಭಕ್ತರ ನಡುವೆ ನೇರ ಸಂಬಂಧಕ್ಕೆ ಅನುವು ಮಾಡಿಕೊಟ್ಟರು.

188. ತಾಪತ್ರಯ ಬಿಡಿರಿ.

ಬಂಡಿ ತುಂಬ ಪತ್ರೆಯ ತಂದು ಕಂಡಕಂಡಲ್ಲಿ ಮಜ್ಜನಕ್ಕೆರೆವಿರಿ;
ತಾಪತ್ರಯವ ಕಳೆದು ಪೂಜಿಸಿ;
ತಾಪತ್ರಯವ ಲಿಂಗದೇವನೊಲ್ಲ
ಲಿಂಗದೇವ ಬರಿಯುದಕದಲ್ಲಿ ನೆನೆವನೆ? ಬ.ವ.ದೀ.160

ದೇವಾಲಯಗಳ ಆವರಣದಲ್ಲಿ, ಊರಿನ ಕೇರಿಗಳಲ್ಲಿ ಏನೇನೋ ಮೂರ್ತಿಗಳು, ಬಣ್ಣದ ಕಲ್ಲುಗಳು, ನಾಗರಕಲ್ಲುಗಳು ಮುಂತಾಗಿ ಇರುವುದುಂಟು. ಕೆಲವರು ಪತ್ರೆಯನ್ನು ಚೀಲದಲ್ಲಿ ತುಂಬಿಕೊಂಡು ಒಂದು ತಂಬಿಗೆಯಲ್ಲಿ ನೀರನ್ನು ತೆಗೆದುಕೊಂಡು ಒಂದಷ್ಟು ನೀರು ಬಿಟ್ಟು ಪತ್ರೆ ಏರಿಸಿ

ನಮಸ್ಕರಿಸಿ ಮುಂದೆ ಸಾಗುವರು. ಇನ್ನು ಕೆಲವರು ಲಕ್ಷ ಬಿಲ್ವಾರ್ಚನೆ, ಕೋಟಿ ಬಿಲ್ವಾರ್ಚನೆಯವರು. ಇವರ ಪೂಜೆ ಎಂದರೆ ಬಿಲ್ವವೃಕ್ಷಕ್ಕೆ ಬೋಳುತನವೇ ಸರಿ. ಇನ್ನು ಕೆಲವರು ಸದಾ ತಾಪತ್ರಯ ನಿವಾರಣೆಗಾಗಿ ಪೂಜೆ ಮಾಡುವರು. ಒಂದು ದಿನವಾದರೂ ಭಕ್ತಿಯಿಂದ, ಪ್ರೀತಿಯಿಂದ ಆರಾಧಿಸದೆ ತಮ್ಮ ಇಷ್ಟದೇವತೆಯ ಮುಂದೆ, "ಸ್ವಾಮಿ, ನಮ್ಮಪ್ಪ ಇಂಥ ಕಷ್ಟದೂರ ಮಾಡು." ಎಂದು ಬೇಡಿಕೆಯ ಪಟ್ಟಿ ಇಡುತ್ತಾರೆ. ನಿಷ್ಕಾಮ ಮನೋಭಾವದಿಂದ ಪೂಜಿಸಿದರೆ ತಾಪತ್ರಯಗಳು ತನ್ನಿಂದ ತಾನೇ ನಿವಾರಣೆಯಾಗುತ್ತವೆ; ಸಂಕಷ್ಟಗಳು ಗಾಳಿಗೊಡ್ಡಲ್ಪಟ್ಟ ಮೋಡಗಳಂತೆ ಚದುರುತ್ತವೆ. ಇಷ್ಟಲಿಂಗದೇವನಿಗೆ ಬರೀ ಯಾಂತ್ರಿಕವಾಗಿ ನೀರನ್ನೆರೆದರೆ ಸಾಲದು, ಭಕ್ತಿಯನ್ನೇ ಜಲವನ್ನಾಗಿ ಮಾಡಿ ಎರೆಯುವುದೂ ಅವಶ್ಯವಿದೆ.

189. ಭಕ್ತನಿಗೆ ವೈಯಕ್ತಿಕ ಜೀವನವೆಂಬುದಿಲ್ಲ

ಭಕ್ತನಾಗಿ ಲಿಂಗ -ಜಂಗಮವ ಪೂಜಿಸಬೇಕು.
ಭಕ್ತನಾಗಿ ತನ್ನ ತಾ ಪೂಜಿಸಿಕೊಂಬುದು ಎಂತಯ್ಯಾ!
ಸ್ವಾಮಿ -ಭೃತ್ಯ ಸಂಬಂಧವೆಂತಯ್ಯಾ ಪೂರಯಿಸುವುದು?
ಲಿಂಗದೇವಾ, ಕಣ್ಣಕಟ್ಟ ಕನ್ನಡಿಯ ತೋರುವಂತೆ ! - ಬ.ವ.ದೀ.161

ಭಕ್ತ, ಶರಣ ಎಂಬುದೊಂದು ಪರಿಕಲ್ಪನೆ(Concept). ಗುರುವಿನ ಹಸ್ತದ ಮೂಲಕ ವ್ಯಕ್ತಿಯು ಗಣಸಾಕ್ಷಿಯಾಗಿ ಭಕ್ತನಾಗುತ್ತಾನೆ. ಅಲ್ಲಿಗೆ ಅವನ ವೈಯಕ್ತಿಕ ಬದುಕು ಇಲ್ಲವಾಗುವುದು. ಅಲ್ಲಿಂದ ಮುಂದೆ ಅವನು ಲಿಂಗದ ಭಕ್ತ, ಜಂಗಮದ ಸೇವಕ. ಇಷ್ಟಲಿಂಗವನ್ನು ಪೂಜಿಸಬೇಕು, ಜಂಗಮದ ಸೇವೆಯನ್ನು ಮಾಡಬೇಕು. ಭಕ್ತನಾದ ಬಳಿಕ ತನ್ನ ತಾನು ಪೂಜಿಸಿಕೊಂಬ ಅಂದರೆ ಮೆರೆಸಿಕೊಂಬ ಹವ್ಯಾಸ ಬಿಡಬೇಕು. ಭಕ್ತನು ಭೃತ್ಯ; ಲಿಂಗದೇವನು ಸ್ವಾಮಿ, ಜಂಗಮವೂ ಒಡೆಯ. ಇಲ್ಲಿ ಜಂಗಮವೆಂದರೆ ಸಮಷ್ಟಿ, ಭಕ್ತನೆಂದರೆ ವ್ಯಷ್ಟಿ, ಜಂಗಮವೆಂದರೆ ತನ್ನ ಧಾರ್ಮಿಕ ಒಕ್ಕೂಟ, ಭಕ್ತನು ಅದರ ಅಂಗ. ಒಂದು ವೇಳೆ ಲಿಂಗ ಜಂಗಮವನ್ನು ಬಿಟ್ಟು ಬದುಕುತ್ತೇವೆಂಬ ಸಿರಿಮದ ಹೊಂದಿದವರ ಪಾಡು ಕಣ್ಣನ್ನು ಕಟ್ಟಿ ಕನ್ನಡಿಯನ್ನು ಹಿಡಿದಂತೆ. ಧಾರ್ಮಿಕ ಒಕ್ಕೂಟದ ಮಹತ್ವವನ್ನು ಎಲ್ಲ ಧರ್ಮಗಳೂ ಒತ್ತಿ ಒತ್ತಿ ಹೇಳುತ್ತವೆ. ವಿದೇಶಿ ಧರ್ಮಗಳಲ್ಲಿ ಇಸ್ಲಾಂ ಮುಂದೆ; ಅದೇ ರೀತಿ ಕ್ರೈಸ್ತ ಧರ್ಮವು. ಅವರು ಎಲ್ಲಿಯೇ ಹೋಗಲಿ ತಮ್ಮ ಧಾರ್ಮಿಕ ಒಕ್ಕೂಟವನ್ನು ಹುಡುಕುತ್ತಾರೆ, ಇಲ್ಲದಿದ್ದರೆ ರಚಿಸಿಕೊಳ್ಳುತ್ತಾರೆ. ಭಾರತೀಯ ಧರ್ಮಗಳಲ್ಲಿ ಈ ದಿಶೆಯಲ್ಲಿ ಮುಂಚೂಣಿಯಲ್ಲಿ ಇರುವುದು ಸಿಖ್ ಧರ್ಮ, ನಂತರದ್ದು ಜೈನ ಧರ್ಮ. ಸಮಾಜವಿಲ್ಲದೆ ವ್ಯಕ್ತಿ ಬದುಕಲಾರ ಎಂಬ ಗಾಢ ನಂಬಿಕೆ ಅವರದು. ಬೀದರಿನಲ್ಲಿ ಏರ್ ಫೋರ್ಸ್‌ಗೆ ಬಂದಿದ್ದ ಕೆಲವು ವ್ಯಕ್ತಿಗಳಿಂದ ಸಿಖ್ ಸಮಾಜ ಕಾಣತೊಡಗಿತು. ಅವರ ಸಮೂಹ ಬೆಳೆಯುವ ಮುನ್ನವೇ ಬಹು ಸುಂದರವಾದ ಬೃಹತ್ತಾದ ಗುರುದ್ವಾರ ನಿರ್ಮಾಣವಾಯಿತು. ಗುರು ನಾನಕ ಝರಾವನ್ನು ಸಂದರ್ಶನೀಯ ಸ್ಥಳವನ್ನಾಗಿ ಮಾಡಿದರು. ಸಿಖ್ಖರ ಧರ್ಮ ಶ್ರದ್ಧೆ ಮತ್ತು ಔದಾರ್ಯ ನಿಜಕ್ಕೂ ಅನುಕರಣೀಯ. ಅವರು ಚೆನ್ನೈಯಲ್ಲಿ ತೀರಾ ನಗಣ್ಯ ಸಂಖ್ಯೆಯಲ್ಲಿದ್ದಾರೆ. ಆದರೂ ಸುಂದರವಾದ ಮತ್ತು ಬೃಹತ್ತಾದ ಗುರುದ್ವಾರ ಕಟ್ಟಿದ್ದಾರೆ. ಯಾವುದಾದರೊಂದು ಸ್ಥಳದಲ್ಲಿ ಅವರು ಗುರುದ್ವಾರ ಕಟ್ಟಬೇಕೆಂದರೆ ಧಾರಾಕಾರವಾಗಿ ಹಣವು ವಿವಿಧ ರಾಜ್ಯಗಳ ಶ್ರೀಮಂತರಿಂದ ಹರಿದು ಬರುವುದಂತೆ. ದಾನ ಧರ್ಮ ಮತ್ತು ಮಂದಿರಗಳನ್ನು ಕಟ್ಟುವುದರಲ್ಲಿ ಮುಂದಿರುವ ಮತ್ತೊಂದು ಸಮಾಜವೆಂದರೆ ಜೈನ ಸಮಾಜ. ಅವರು ಸಂಖ್ಯೆಯಲ್ಲಿ ಕಮ್ಮಿ ಇದ್ದರೂ ಔದಾರ್ಯದಲ್ಲಿ ಬಹಳ ಮುಂದೆ. ರಾಷ್ಟ್ರೀಯ ಹೆದ್ದಾರಿಯ ಬದಿಗೆ ಬೃಹತ್ ಸ್ಮಾರಕಗಳನ್ನು ಮಾಡಲು ಒಬ್ಬೊಬ್ಬ ದಾನಿಯೇ ಮುಂದಾಗುತ್ತಾನೆ. ಅಲ್ಲಮ ಪ್ರಭು ದೇವಾಲಯಕ್ಕೆ ಹೋಗುವ ದಾರಿಯಲ್ಲಿ ಬೃಹತ್ತಾದ 24 ತೀರ್ಥಂಕರರ ಮೂರ್ತಿಗಳನ್ನು ನಿಲ್ಲಿಸಿದ್ದಾರೆ. ಮೊದಲು ಆ ಯೋಜನೆ ಇತ್ತೋ ಇಲ್ಲವೊ. ನಾವು ಅಲ್ಲಮಗಿರಿಯ ವ್ಯಾಪ್ತಿಯಲ್ಲಿ ಮಠ ಕಟ್ಟಲು ಆರಂಭಿಸುತ್ತಲೇ ಅವರೂ ಭೂಮಿ ಕೊಂಡು ಈ ವರ್ಷ ಮೂರ್ತಿಗಳನ್ನು ಸ್ಥಾಪನೆ ಮಾಡಿದ್ದಾರೆ.

ಎಲ್ಲ ದೃಷ್ಟಿಯಿಂದಲೂ ಧಾರ್ಮಿಕವಾಗಿ ಹಿಂದುಳಿದ ಸಮಾಜ ಲಿಂಗಾಯತರದು: ಸಿಖ್ಖರು ಮೊದಲು ಗುರುದ್ವಾರ ಮಾಡಿ ನಂತರ ಗುರುನಾನಕದೇವ ಎಂಜನಿಯರಿಂಗ್ ಕಾಲೇಜ್ ಮಾಡಿದರು.

ಹೊರರಾಜ್ಯದಲ್ಲಿ, ಹೊರದೇಶದಲ್ಲಿ ವೃತ್ತಿ ಕಾಲೇಜು ಮಾಡುವ ನಮ್ಮ ಮಠಾಧೀಶರು ಸಂಘ ಸಂಸ್ಥೆಗಳು ಮೊದಲು ಬಸವ ಮಂಟಪ ಅರ್ಥಾತ್ ಪ್ರಾರ್ಥನಾ ಮಂದಿರ ಮಾಡುವುದಿಲ್ಲ; ಕೇವಲ ಕಾಲೇಜು ಮಾಡುತ್ತಾರೆ, ಅಲ್ಲೊಂದು ಧರ್ಮಗುರು ಬಸವಣ್ಣನವರ ಫೋಟೋ ಸಹ ಇರುವುದಿಲ್ಲ. ಒಂದು ಬಸವ ಮಂಟಪ ಕಟ್ಟಲು ನಿಷ್ಠಾವಂತ ಶರಣರು ಪರದಾಡಬೇಕು. ಅದಕ್ಕೂ ಅಸಹನೆ ತೋರುವವರು ಬಹಳಷ್ಟು ಮಂದಿ. ಸಿಖ್ಖರು, ಜೈನರು ಅವರ ಧರ್ಮಮಂದಿರ ಕಟ್ಟಲು ಧಾರಾಕಾರವಾಗಿ ಹಣ ಕಳಿಸಿದರೆ, ನಮ್ಮ ಸಮಾಜದ ಕೆಲವು ಮುಖಂಡರು ಕೊಡುವ ದಾನಿಗಳಿಗೂ ಚಾಡಿ ಚುಚ್ಚುವರು. ಈ ಕೆಟ್ಟ ಪ್ರವೃತ್ತಿಯು ಧರ್ಮಪಿತ ಬಸವಣ್ಣನವರ ಆಶಯ ಮತ್ತು ಆದೇಶಕ್ಕೆ ವಿರುದ್ಧವಾದುದು ಎಂಬುದನ್ನು ಮೇಲ್ಕಂಡ ವಚನದಿಂದ ಅರ್ಥ ಮಾಡಿಕೊಳ್ಳಬಹುದು.

190. ಜಂಗಮದೊಳಗೆ ಲಿಂಗಯ್ಯನಿದ್ದಾನೆ.

ಭೂಮಿಯೊಳಗೆ ನಿಧಾನವಿದ್ದುದ
ಅಂಜನವುಳ್ಳವರು ತೋರುವರಯ್ಯಾ
ಅಂಜಲುಬೇಡ ಕಂಡಾ;
ಮನದಲ್ಲಿ ಸಂದೇಹವ ಮಾಡದಿರಾ.
ಜಂಗಮದೊಳಗೆ ಲಿಂಗಯ್ಯನಿದ್ದಾನೆಂದು ನಂಬುಗೆಯುಳ್ಳಡೆ
ತೋರುವ ಲಿಂಗದೇವಾ -ಬ.ವ.ದೀ.188

ಭೂಮಿಯ ಒಳಗೆ ನಿಧಿ ಇದ್ದರೆ ಅಂಜನ ಹಚ್ಚಿಕೊಂಡು ನೋಡಿ ಕೆಲವರು ತೋರಿಸುವರು. (ಇಂದು ಆಧುನಿಕ ವೈಜ್ಞಾನಿಕ ತಂತ್ರಗಳಿಂದ ಲೋಹದ ಅದಿರು ಇದ್ದರೆ ಪತ್ತೆ ಮಾಡುವರು. ಭೂಮಿಯ ಒಳಗೆ ಹರಿಯುವ ಅಂತರ್ಜಲವನ್ನು ವೈಜ್ಞಾನಿಕ ಸಾಧನದಿಂದ ಮಾತ್ರವಲ್ಲ ಬೇವಿನ ಕಡ್ಡಿ, ತೆಂಗಿನ ಕಾಯಿಗಳ ನೆರವಿನಿಂದ ಕೂಡ ಪತ್ತೆ ಮಾಡುವರು) ಅದೇ ರೀತಿ ಧರ್ಮಪಿತ ಬಸವಣ್ಣನವರು ಭಕ್ತಿ ಎಂಬ ಅಂಜನದ ನೆರವಿನಿಂದ ನಮಗೆ ಒಂದು ಪರಮ ಸತ್ಯದ ನಿಧಿಯನ್ನು ತೋರಿಸಿದ್ದಾರೆ. ಅದು, "ಜಂಗಮದೊಳಗೆ ಲಿಂಗಯ್ಯನಿದ್ದಾನೆ." ಎಂಬ ಸತ್ಯವನ್ನು ನಂಬಿದರೆ ಏನೇನು ಸಮಸ್ಯೆ ಬರುತ್ತವೋ ಎಂದು 'ಅಂಜಲು ಬೇಡ ಕಂಡಾ' ಎಂದು ಧೈರ್ಯ ಹೇಳುತ್ತಾರೆ. "ಇನ್ನು ನಾನು ಸಲ್ಲಿಸುವ (ತನುಮನ) ಧನ ಸತ್ಪಾತ್ರಕ್ಕೆ ಸಲ್ಲುತ್ತೋ ಇಲ್ಲವೋ ಎಂದು ಮನದಲ್ಲಿ ಸಂದೇಹ ಮಾಡದಿರು." ಎಂದು ಬುದ್ಧಿವಾದ ಹೇಳುತ್ತಾರೆ.

ವ್ಯಕ್ತಿಯು ತನ್ನಷ್ಟಕ್ಕೆ ತಾನು, ತನಗಾಗಿ ತಾನು ಬಾಳಿದರೆ ಸಾಲದು ಸಮಾಜ ಮುಖಿಯಾಗಿ ಬಾಳಬೇಕು ಎಂಬುದೇ ಈ ವಚನದ ಮರ್ಮ. (ಕೆಲವೊಮ್ಮೆ ಈ ಉಪದೇಶದಿಂದ ಆಗುವ ದುಷ್ಪರಿಣಾಮದ ಅರಿವೂ ಧರ್ಮಪಿತರಿಗಿದೆ. ಏಕೆಂದರೆ ಒಬ್ಬ ಶ್ರದ್ಧಾವಂತ ಭಕ್ತ ಬಗ್ಗುತ್ತಾನೆ ಎಂದರೆ ಅವನ ಬೆನ್ನು ಮೇಲೆ ಸವಾರಿ ಮಾಡಬೇಕೆಂಬ ಗುರು -ಜಂಗಮರೂ ಇರುತ್ತಾರೆ. ಕೆಲವೊಮ್ಮೆ ತಲೆಗಂದಾಯದಂತೆ ಇಷ್ಟು ಕೊಡಲೇಬೇಕು ಎಂದು ಆಜ್ಞೆ ಮಾಡಿ, ಕೊಡದಿದ್ದರೆ ಬಹಿಷ್ಕಾರ ಹಾಕಿಸುವ ಕ್ರೂರ ಮನಸ್ಸುಗಳೂ ಉಂಟು. ಅಂಥ ಗುರು ಜಂಗಮರಿಗೂ ಮುಂದಿನ ಕೆಲವು ವಚನಗಳಲ್ಲಿ ಬೋಧೆ ಇದೆ. ಇಲ್ಲಿ ಭಕ್ತನಿಗೆ ಉಪದೇಶವಿದೆ, ಅಂಜಲು ಬೇಡಾ ಕಂಡಾ ಎಂದು. ಒಂದು ಸತ್ಕಾರ್ಯಕ್ಕೆ ಕೊಡಬೇಕೆಂಬ ಸಂಕಲ್ಪವಿದ್ದರೆ ಅದು ಖಂಡಿತಾ ನೆರವೇರುವುದು ಎಂಬ ನಂಬಿಕೆ ಬೇಕು. ಕೊಡುವ ಸಹೃದಯಿಗಳು ಇದ್ದಲ್ಲಿ ನಾನಾ ಕಾರಣ ಹೇಳಿ, ಪಡೆದು ದುರುಪಯೋಗ ಮಾಡುವ ಜನರಿಗೇನೂ ಕಡಿಮೆ ಇಲ್ಲ. ಹೀಗಾಗಿ, ತಾನು ಕೊಡುವ ಹಣ ಸದುಪಯೋಗವಾದೀತೇ ಎಂಬ ಸಂದೇಹ ದಾಸೋಹಿಯಲ್ಲಿ ಹುಟ್ಟುವುದು ಸಹಜ. ಹಾಗೆ ಸಂದೇಹಪಟ್ಟು ಕೊಡದೇ ಇದ್ದರೆ ಆಗುವ ಒಳ್ಳೆಯ ಕೆಲಸಕ್ಕೆ ತಡೆಯುಂಟಾಗುವುದು. ಒಳ್ಳೆಯ ಮನಸ್ಸಿನಿಂದ ದಾಸೋಹಿಯು ಕೊಡಬೇಕು. ಒಂದು ವೇಳೆ ಪಡೆದವನು ದುರುಪಯೋಗ ಪಡಿಸಿಕೊಂಡರೆ ಅದರ ಪಾಪ ಅವನಿಗೇ ವಿನಾ ದಾಸೋಹಿಗಲ್ಲ.

ಏನೇ ಆದರೂ ಸದ್ಭಕ್ತನು ವಿವೇಚನಾ ಶಕ್ತಿಯನ್ನು ಬೆಳೆಸಿಕೊಳ್ಳಬೇಕು; ಸತ್ಪಾತ್ರಕ್ಕೆ ಸಲ್ಲುವಂತೆ ಕೊಡಬೇಕು.)

(ಪುಟ 25ರಲ್ಲಿ ಮುಂದುವರೆದಿದೆ)



Delegates welcoming Matajis to the Conference on 2-5-2009



Sharana Radhakrishnan, President, Coimbatore Basava Samithi Tamil Nadu, inaugurating the function on 2-5-09



Dr. Padmanabhan, Bharadhiyar University, Coimbatore, inaugurating



A.C.P.R. Ramadas hoisting the flag on 3-5-09



Dhanaraj Jeerge inaugurating the seminar on 2-5-09 at 4 pm



Dr.Padmanabhan releasing Tamil book Basavannarin Samudhaya Puratchi



Delegates who participated in Chennai 9th Lingayata Dharma Conference



Sharana C. R. Arumugam, Coimbatore receiving first copy of the Tamil Prayer book



Love-O-Nagaraj, Selam and R. B. Hebballi inaugurating 876th Basava Jayanthi



Pujya Channabasavaraja Deshikendra Swamiji of Urigam hoisting the flag on 4-5-09



Sharana M. K. Mallaya Raj of Bhavani delivering speech



Veerabhadrappa and Mallappa, Chemmbarampakkam, Chennai doing pooja of Lord Basavanna



R. Chandrasekar, President of R. B. D, Tamil nadu is honoured



Dr. R. K. Haldorai who translated prayer book and Basavannarin Samudhaya Puratchi is honoured



Sakkalatty Sharanas singing and dancing Vachanas



Sharana Mohanraj, Mettupalayam and C. R. Arumugam Coimbatore participating in procession

(ಪುಟ 16ರಿಂದ ಮುಂದುವರಿದ ಭಾಗ)

191. ಲಿಂಗಪೂಜೆಯಷ್ಟೇ ಸಾಲದು

ಕನ್ನಡಿಯ ನೋಡುವ ಅಣ್ಣಗಳಿರಾ, ಜಂಗಮವ ನೋಡಿರೆ;
ಜಂಗಮದೊಳಗೆ ಲಿಂಗಯ್ಯ ಸನ್ನಿಹಿತವಾಗಿಪ್ಪ,
ಸ್ಥಾವರ ಜಂಗಮ ಒಂದೆ ಎಂದುದು ಲಿಂಗದೇವನ ವಚನ. - ಬ.ವ.ದೀ.189

ಕೇವಲ ಆತ್ಮೋದ್ಧಾರದಲ್ಲಿ ಅನುರಕ್ತನಾದ ಭಕ್ತನನ್ನು ಸಮಾಜ ಮುಖಿಯನ್ನಾಗಿ ಮಾಡುವ ಕಳಕಳಿಯನ್ನು ಧರ್ಮಪಿತರ ವಚನದಲ್ಲಿ ಕಾಣುತ್ತಿದ್ದೇವೆ. ಇಲ್ಲಿ ಕನ್ನಡಿ ಎಂದರೆ ಆತ್ಮದರ್ಶನ ಮಾಡಿಸುವ ಇಷ್ಟಲಿಂಗ ದರ್ಪಣ. ಕೇವಲ ಇಷ್ಟಲಿಂಗ ಪೂಜೆಯಲ್ಲಿ ಆಸಕ್ತನಾದ ಭಕ್ತನೇ, ನಿನ್ನ ಸುತ್ತಲಿನ ಸಮಾಜವನ್ನು ನೋಡು. ಜಾತೀಯತೆ, ಮೂಢನಂಬಿಕೆ, ಕಂದಾಚಾರ, ಧರ್ಮದ ಹೆಸರಿನಲ್ಲಿ ಶೋಷಣೆ ಹೇಗೆ ನಡೆಯುತ್ತಿವೆ? ಇಷ್ಟಲಿಂಗಾರ್ಚನೆಯ ಮೂಲಕ ನೀನು ಆನಂದ ಹೊಂದುತ್ತಿರುವೆ. ಇದು ಇತರರಿಗೂ ಸಿಗುವಂತೆ ಮಾಡು.

(ಕನ್ನಡಿಯ ನೋಡುವ ಅಣ್ಣಗಳಿರಾ ಎನ್ನುವ ವಾಕ್ಯಕ್ಕೆ ಹೀಗೂ ಅರ್ಥಮಾಡುಬಹುದು. ಕೇವಲ ದೇಹಾಲಂಕಾರದಲ್ಲಿ ಆಸಕ್ತರಾದ ಭೋಗವಾದಿ ಜನರೇ ಕೇವಲ ನಿಮ್ಮ ಸುಖಭೋಗಗಳಿಗಾಗಿ ಬದುಕಬೇಡಿರಿ. ನಿಮ್ಮ ಸುತ್ತಲಿರುವ ಸಮಾಜದ ಕಷ್ಟಕ್ಕೂ ತುಸು ಸ್ಪಂದಿಸಿ. ನಮ್ಮ ಸಮಾಜದ ಶ್ರೀಮಂತ ವರ್ಗ ಸೇರುವ ಧಾರ್ಮಿಕ ಸಭೆಗಳಲ್ಲಿ ಧಾರ್ಮಿಕ, ಭಾಕ್ತಿಕ ವಾತಾವರಣಕ್ಕಿಂತ ಬಟ್ಟೆ-ಬರೆ, ಆಭರಣ-ಅಲಂಕಾರದ ಪ್ರದರ್ಶನವೇ ಜಾಸ್ತಿ ಎಂದು ಕೆಲವರ ಅನುಭವ.)

"ದೇವರು ನಿರಾಕಾರ, ನಿರ್ಗುಣ. ಅವನ ಸಾಕಾರ ಮುಖವೇ ಸಮಾಜ. ಆದ್ದರಿಂದ ಸ್ಥಾವರ =ಜಂಗಮ ಎಂದು ತಿಳಿ "ಎನ್ನುತ್ತಾರೆ ಧರ್ಮಪಿತರು. ಇಲ್ಲಿ ಸ್ಥಾವರ ಎಂದರೆ ಜಡವಲ್ಲ, ನಿಶ್ಚಲವಾಗಿ ಇರುವ ದೇವರು, ಜಂಗಮ ಎಂದರೆ ಚಲನಶೀಲತೆಯುಳ್ಳ ಸಮಾಜ. ಸ್ಥಾವರ ಮತ್ತು ಜಂಗಮ ಎಂಬ ಪದಗಳನ್ನು ಬಹುವಿಧಾರ್ಥದಲ್ಲಿ ಧರ್ಮಪಿತರು ಬಳಸಿದ್ದಾರೆ. ಆದ್ದರಿಂದ ವಚನದ ಭಾವವನ್ನು ಗ್ರಹಿಸಿ ಈ ಪದಗಳಿಗೆ ಅರ್ಥ ಕೊಡಬೇಕು.

ಈ ವಚನದಲ್ಲಿ "**ಎಂದುದು ಲಿಂಗದೇವನ ವಚನ** "ಎಂಬ ಪ್ರಯೋಗವಿದೆ. ಇದೇ ರೀತಿ ಬಹಳಷ್ಟು ವಚನಗಳಲ್ಲಿ ಬರುತ್ತದೆ. "ಈ ರೀತಿ ಹೇಳುತದೆ ದೇವರ ವಾಣಿ" ದೇವರ ವಾಣಿಯು ತನ್ನಿಂದ ತಾನೇ ನುಡಿಯುವುದಿಲ್ಲವಷ್ಟೆ, ಆ ಸತ್ಯವನ್ನು ಗ್ರಹಿಸಿಕೊಳ್ಳುವ ದಾರ್ಶನಿಕ ಚೇತನವೊಂದು ಬೇಕಷ್ಟೆ! ಅವರೇ ಅವತಾರ ಪುರುಷ ಬಸವಣ್ಣನವರು. ಆದ್ದರಿಂದ "**ಎಂದುದು ಲಿಂಗದೇವನ ವಚನ** "ಎಂಬುದರ ಮರ್ಮ" ಎಂದು ನನ್ನ ಅಂತರ್ವಾಣಿ ಹೇಳುವುದು" ಎಂಬುದಾಗಿದೆ.

192. ಭಕ್ತಿ ಇಲ್ಲದವರನೊಲ್ಲ

ಗೀತವ ಹಾಡಿದಡೇನು. ಶಾಸ್ತ್ರ-ಪುರಾಣವ ಕೇಳಿದಡೇನು
ವೇದ ವೇದಾಂತವನೋದಿದಡೇನು,
ಮನವೊಲಿದು ಲಿಂಗ ಜಂಗಮವ ಪೂಜಿಸಲರಿಯದವರು!
ಎಲ್ಲರಲಿ ಅನುಭಾವಿಯಾದಡೇನು?
ಭಕ್ತಿಯಿಲ್ಲದವರನೊಲ್ಲ ಲಿಂಗದೇವ ! - ಬ.ವ.ದೀ.190

ಭಗವದ್ಗೀತೆಯನ್ನು ಸುಶ್ರಾವ್ಯ ಕಂಠದಿಂದ ಹಾಡಿದರೇನಂತೆ, ತಪ್ಪದೆ ಗುಡಿ-ಗುಂಡಾರ ಪುರಾಣದ ಕಟ್ಟೆಗೆ ಹೋಗಿ ಶಾಸ್ತ್ರ-ಪುರಾಣಗಳನ್ನು, ಪುಣ್ಯ ಕಥೆಗಳನ್ನು ಕೇಳಿದರೇನು? ವೇದಗಳಲ್ಲಿ ಪಾರಂಗತನಾಗಿ, ವೇದಾಂತ ಶಾಸ್ತ್ರಬಲ್ಲಿದನಾಗಿ ವ್ಯಾಖ್ಯಾನ ಸಹಿತವಾಗಿ ಓದಿದರೇನು ಮನಃಪೂರ್ವಕವಾಗಿ ಲಿಂಗಾರಾಧನೆ ಮಾಡದ ಮತ್ತು ಜಂಗಮವನ್ನು ಗೌರವಿಸದ ವ್ಯಕ್ತಿ ನಿಷ್ಪ್ರಯೋಜಕ. ಕೆಲವರು ಉತ್ತಮ ವಾಗ್ಮಿಗಳಿರುವರು. ಗಣ ಮೇಳಾಪ ನಡೆಯುವಾಗ ಎಲ್ಲರೂ ಮೆಚ್ಚುವಂತೆ ಅನುಭಾಗಳೆಂಬಂತೆ ಮಾತನಾಡುವರು. ಗುರು ಲಿಂಗ ಜಂಗಮ ಕುರಿತು ತ್ರಿವಿಧ ದಾಸೋಹ ಪೂರ್ಣವಾದ ಭಕ್ತಿ ಇಲ್ಲದವರನ್ನು ಲಿಂಗದೇವನು ಮೆಚ್ಚನು.

193. ಜಂಗಮಕ್ಕೆ ಅಂಜಬೇಕು

ಲಿಂಗವ ಪೂಜಿಸಿದ ಬಳಿಕ, ಜಂಗಮಕ್ಕೆ ಅಂಜಲೇಬೇಕು;
ದಕ್ಕ ನುಂಗಿದಂತೆ ಬೆರೆತುಕೊಂಡಿರಬೇಡ

ಬೇಗಿ ಬೆಳೆದ ಕೊನೆವಾಳೆಯಂತೆ ಬಾಗಿಕೊಂಡಿದ್ದಡೆ,
ನಿಂದಿರಲೊಲ್ಲ ಲಿಂಗದೇವ - ಬ.ವ.ದೀ.191

ಸೃಷ್ಟಿಕರ್ತ ಲಿಂಗದೇವನನ್ನು ನಂಬಿ ಇಷ್ಟಲಿಂಗರೂಪದಲ್ಲಿ ಪೂಜಿಸಿದ ಬಳಿಕ ಜಂಗಮಕ್ಕೆ ಅಂಜಲೇಬೇಕು. ದಕ್ಕ ಅಂದರೆ ಬಿದಿರು ಕೋಲಿನ ತುಂಡು. ಅದನ್ನು ನುಂಗಿದಂತೆ, ಸೊಕ್ಕಿನಿಂದ ಸೆಟೆದು (ಬೆರೆತು) ಕೊಂಡಿರಬಾರದು. ಸೊಂಪಾಗಿ ಬೆಳೆದ ಬಾಳೆಗೊನೆಯಂತೆ ಬಾಗಿ ಕೊಂಡಿದ್ದರೆ ದೇವನು ಭಕ್ತನು ಬೇಡಿದ ಪದವಿಯನೀವನು.

ಕೆಲವರು ವಿಷಯ ಲಂಪಟರು, ದುಶ್ಚಟ ಉಳ್ಳವರು ಮತ್ತೆ ಕೆಲವು ಶ್ರೀಮಂತರು ಗುರು ಜಂಗಮರ ಕರೆಗೆ ಓಗೊಡದೆ ಸೊಕ್ಕಿನಿಂದ ವರ್ತಿಸುತ್ತಾರೆ. ಅವರು ಏನಾದರೂ ತಪ್ಪು, ದೌರ್ಜನ್ಯ ಮಾಡುವಾಗ ದೌರ್ಜನ್ಯಕ್ಕೊಳಗಾದವರು ಗುರುಗಳ ಬಳಿ ದೂರನ್ನು ಒಯ್ಯುತ್ತಾರೆ. ಆಗ ಗುರುಗಳು ಹೇಳಿ ಕಳಿಸುತ್ತಾರೆ. ಭಕ್ತಿಯುಳ್ಳವರು, ಶಿಷ್ಟಾಚಾರ ತಿಳಿದವರು ಗುರುಗಳ ಆಜ್ಞೆ ಪಾಲಿಸಲು ಬರುತ್ತಾರೆ. ಉನ್ಮತ್ತರು ಸೊಕ್ಕಿನಿಂದ ಬರಲು ನಿರಾಕರಿಸುತ್ತಾರೆ.

ಇಲ್ಲಿ ಇನ್ನೊಂದು ರೀತಿ ವ್ಯಾಖ್ಯಾನಿಸಬಹುದು. ಒಬ್ಬ ತರುಣ ಅಥವಾ ತರುಣಿ ಇರುತ್ತಾರೆ. ಅವನು ಅಥವಾ ಆಕೆ ತಪ್ಪು ಹೆಜ್ಜೆ ಇಡುತ್ತಿದ್ದಾರೆ ಎಂದುಕೊಳ್ಳುವಾ. ಆಗ ಆ ವ್ಯಕ್ತಿ ಭಕ್ತ / ಭಕ್ತೆ, ಅವರ ತಂದೆ ತಾಯಿ ಅಥವಾ ಹಿರಿಯರು ಜಂಗಮವಾಗುವರು. ಜ್ಞಾನಿಗಳು, ವಿವೇಕಿಗಳು ಬುದ್ಧಿವಾದ ಹೇಳಿದುದನ್ನು ವಿನಯದಿಂದ ಸ್ವೀಕರಿಸಬೇಕೇ ವಿನಾ ಸೊಕ್ಕಿನಿಂದ ತಿರಸ್ಕರಿಸಬಾರದು. ಪೂಜೆಯಲ್ಲಿ ಬಹೂಪಯೋಗಿಯಾದುದು ಬಾಳೆಹಣ್ಣು. ಅದಕ್ಕೆ 2 ಕಾರಣ. ಒಂದು ಅದು ಬಾಗಿ ಬೆಳೆಯುವುದು, ಇನ್ನೊಂದು ಬೀಜರಹಿತವಾಗಿ ಇರುವುದು. ನೈವೇದ್ಯವಾದ ಬಾಳೆಹಣ್ಣನ್ನು ಪೂರ್ತಿಯಾಗಿ ಪ್ರಸಾದ ರೂಪದಲ್ಲಿ ಸ್ವೀಕರಿಸಬಹುದು. ಬೀಜವಿಲ್ಲವಾದ ಕಾರಣ ಅದಕ್ಕೆ ಮರುಹುಟ್ಟು ಇಲ್ಲ. ಹಾಗೆಯೇ ಈ ಜೀವಾತ್ಮವು ದೇವನಿಗೆ ಪೂರ್ಣವಾಗಿ ಅರ್ಪಿತವಾಗಬೇಕು ಇದು ಪುನಃ ಹುಟ್ಟಿಬರುವುದು ಬೇಡ ಎಂಬುದರ ಸಂಕೇತವಾಗಿ ಬಾಳೆಹಣ್ಣಿಗೆ ಪೂಜಾವಿಧಿಗಳಲ್ಲಿ ಅಗ್ರಸ್ಥಾನ.

194. ಹಮ್ಮಿನ ಭಕ್ತಿ ಬೇಡ

ಹಮ್ಮಿನ ಭಕ್ತಿ ಕರ್ಮಕ್ಕೆ ಮೊದಲು;
ಮರ್ಮವನರಿಯದ ಮಾಟ ಸಯಿದಾನದ ಕೇಡು,
ಬಂದ ಸಮಯೋಚಿತವನರಿಯದಿದ್ದಡೆ
ನಿಂದಿರಲೊಲ್ಲ ಲಿಂಗದೇವ. - ಬ.ವ.ದೀ.192

ಅಹಂಕಾರದಿಂದ ಮಾಡುವ ಭಕ್ತಿ ತನ್ನ ವಿನಾಶಕ್ಕೆ ಕಾರಣವಾಗುತ್ತದೆ. ಪುರಾಣಗಳ ಕಥೆಗಳಲ್ಲಿ ಓದುತ್ತೇವೆ. ಭಸ್ಮಾಸುರ ಮುಂತಾದವರು ಶಿವನನ್ನು ತಪಸ್ಸಿನಿಂದ ಒಲಿಸಿಕೊಂಡರು. ತ್ರಿಪುರಗಳ ಅರಸರಾದ ವೀರ, ವಿದ್ಯುನ್ಮಾಲಿ, ತಾರಕ ಎಂಬುವವರೂ ಅಷ್ಟೆ ಅಪಾರ ಶಿವಭಕ್ತರು ಮತ್ತು ವೀರರು. ಆದರೆ ಅವರು ವರ ಪಡೆದಾದ ಮೇಲೆ ಅಹಂಕಾರ ಬಂದಿತು. ಸೊಕ್ಕಿನಿಂದ ವರ್ತಿಸ ತೊಡಗಿದರು. ಮೊದಲು ವರ ಕೊಟ್ಟ ಶಿವನೇ ನಂತರ ಅವರನ್ನು ಶಿಕ್ಷಿಸಬೇಕಾಯಿತು. ಭಕ್ತಿ ಮತ್ತು ದಾಸೋಹ ಕರ್ಮ ಸ್ವರ್ಗಕ್ಕೆ ಸಾಧನ. ಆದರೆ ಅಹಂಕಾರದಿಂದ ಕೂಡಿದ ಭಕ್ತಿ ಕರ್ಮ ಅರ್ಥಾತ್ ಪಾಪ ವೃದ್ಧಿಗೆ ಸಾಧನ, ದಾನ - ದಾಸೋಹ ಮಾಡುವಾಗ ಮರ್ಮವರಿತು ಮಾಡಬೇಕು. ಇಲ್ಲದೆ ಇದ್ದರೆ "ಮರ್ಮವನರಿಯದ ಮಾಟ ಸಯದಾನದ ಕೇಡು." ಬೆಂಗಳೂರಿನಲ್ಲಿ ಒಬ್ಬ ದಾನಿ ಇದ್ದಾರೆ. ಅವರು ವರ್ಷಕ್ಕೊಮ್ಮೆ ಸಾಧುಗಳಿಗೆ ಊಟಕ್ಕೆ ಹಾಕಿಸುತ್ತಾರೆ. ಕಾಣಿಕೆ ಕೊಡುತ್ತಾರೆ. ಅವರುಗಳಲ್ಲಿ ಅಫೀಮು, ಭಂಗಿ ಸೇದುವವರೇ ಹೆಚ್ಚು. ದುರ್ವ್ಯಸನಕ್ಕೆ ಬಲಿಯಾದ, ಉಂಡಾಡಿ ಗುಂಡರಾಗಿ ಯಾವುದೇ ಹೊಣೆಗಾರಿಕೆ ಇಲ್ಲದೆ ತಿರುಗುವ ಜನರಿಗೆ ಕಾವಿ ವಸ್ತ್ರ ಧರಿಸಿದ್ದಾರೆ ಎಂಬ ಒಂದೇ ಕಾರಣಕ್ಕೆ ಊಟಕ್ಕಿಕ್ಕಿ, ಕಾಣಿಕೆ ಕೊಡುವುದು ಮರ್ಮವನರಿಯದೆ ಮಾಡುವ ಮಾಟವಲ್ಲವೆ? ಸಯದಾನ ಎಂದರೆ ಸಾಮಗ್ರಿಗಳು - ಅವುಗಳ ಸವೆತವಾಗುವುದಲ್ಲದೆ ಪುಣ್ಯ ಪ್ರಾಪ್ತಿಯಾಗುವುದಿಲ್ಲ.

"ಬಂದ ಸಮಯೋಚಿತವನರಿಯದಿದ್ದಡೆ ನಿಂದಿರಲೊಲ್ಲ ಲಿಂಗದೇವ ಎಂಬ ವಾಕ್ಯ ಮಹತ್ವಪೂರ್ಣ. ಒಬ್ಬ ವ್ಯಕ್ತಿಗೆ ಅತ್ಯಂತ ಅವಶ್ಯವಾಗಿ ಸಹಾಯ ಹಸ್ತ ಬೇಕಾಗಿರುತ್ತದೆ. ಆಗ ಉದಾಸೀನ ಮಾಡಿ ನಂತರ ಅವನಿಗೆ ಅಗತ್ಯವಿಲ್ಲದಾಗ ಸನ್ಮಾನ ಮಾಡಿದರೇನು? ಜಂಗಮನೋರ್ವನಿಗೆ ತೀವ್ರವಾಗಿ ಹಸಿವೆಯಾಗಿರುತ್ತದೆ. ಅಥವಾ ಪರವೂರಿಂದ ಪ್ರವಾಸ ಮಾಡಿ ಬಂದಿರುವಾಗ ಸ್ನಾನ - ಪೂಜೆಯ

ಅವಶ್ಯಕತೆ ಇರುತ್ತದೆ. ಆಗ ಅದಕ್ಕೆ ಏರ್ಪಾಡು ಮಾಡದೆ, ಹಬ್ಬದ ದಿವಸ ಬಿನ್ನಹಕ್ಕೆ ಕರೆದು ಒಲ್ಲೆ ಒಲ್ಲೆ ಎಂದರೂ ಒತ್ತಾಯ ಮಾಡಿ ಉಣಲಿಕ್ಕುವುದು ಸರಿಯೆ? ಸಮಯೋಚಿತವಾಗಿ ಮಾಡುವುದು ಹೆಚ್ಚು ಅರ್ಥಪೂರ್ಣ ಮತ್ತು ಪುಣ್ಯಪ್ರದಾಯಕ.

195. ಬರಿಯ ಮಾತಿನ ಬುರುಡೆ.

ದ್ವೈತಾದ್ವೈತವನೋದಿ ಏನ ಮಾಡುವಿರಯ್ಯಾ-
ನಮ್ಮ ಶರಣರಿಗೆ ಉರಿಗೆ ಅರಗಾಗಿ ಕರಗದನ್ನಕ್ಕ,
ಸ್ಥಾವರ ಜಂಗಮವೊಂದೆ ಎಂದು ನಂಬದನ್ನಕ್ಕ?
ಲಿಂಗದೇವಾ, ಬರಿಯ ಮಾತಿನ ಮಾಲೆಯಲೇನಹುದು? - ಬ.ವ.ದೀ.193

ದ್ವೈತ, ಅದ್ವೈತ ಮುಂತಾದ ಶಾಸ್ತ್ರಗಳ ಬಗೆ ಪರಿಣತಿ ಸಾಧಿಸಿ, ಅದರಲ್ಲಿ ಬರುವ ಸೈದ್ಧಾಂತಿಕ ವಿಷಯಗಳನ್ನು ಚರ್ಚಿಸಿದರೇನಂತೆ? ಉದಾಹರಣೆಗೆ ಎಲ್ಲವೂ ಬ್ರಹ್ಮ, ಯಾವ ಭೇದವೂ ಇಲ್ಲ, ವಿದ್ಯಾವಿನಯ ಸಂಪನ್ನನಾದ ಬ್ರಾಹ್ಮಣನನ್ನು ಗೋವನ್ನು, ಆನೆಯನ್ನು, ನಾಯಿಯನ್ನು, ಚಂಡಾಲನನ್ನು ಪಂಡಿತರಾದವರು ಸಮದೃಷ್ಟಿಯಿಂದ ಕಾಣುತ್ತಾರೆ ಎಂದು ಶ್ಲೋಕಗಳನ್ನು ಹೇಳಿದರೇನು ಆಚರಣೆಯಲ್ಲಿ ಇರಬೇಕಲ್ಲವೆ? ನಮ್ಮ ಶರಣರನ್ನು ಕಂಡಾಗ ಅವರ ಸುಖ ದುಃಖಗಳಿಗೆ ಸ್ಪಂದಿಸಬೇಕು. ಉರಿಯ ಸ್ಪರ್ಶದಿಂದ ಅರಗು ಕರಗುವಂತೆ, ಸಹ ಧರ್ಮಿಗಳ ಕಷ್ಟಕಾರ್ಪಣ್ಯಗಳಲ್ಲಿ ಪರಸ್ಪರ ನೆರವಾಗಬೇಕು.

(ಬೆಂಗಳೂರು ನಗರದ ಕೆಲವು ಸಮುದಾಯಗಳಲ್ಲಿ ಉದಾ: ಮಾರವಾಡಿ ಮತ್ತು ಮುಸ್ಲೀಮ್, ಸಮಾಜದ ವತಿಯಿಂದ ಸುಲಭ ಬಡ್ಡಿ ದರದಲ್ಲಿ ಉದ್ಯೋಗಕ್ಕಾಗಿ ಸಾಲ ನೀಡಲಾಗುವುದು. ನಂತರ ಅವರು ಅದನ್ನು ತೀರಿಸಬೇಕು. ಬಹಳಷ್ಟು ಬಡವರು ಖಾಸಗಿ ಬಡ್ಡಿ ಕೊಡಲಾಗದೆ ಸೋತು ಆತ್ಮಹತ್ಯೆಗೆ ಮೊರೆ ಹೋಗುವುದುಂಟು. ಸಮಾಜದ ವತಿಯಿಂದ ನೆರವು ನೀಡಿದರೆ ಪಡೆದವರಿಗೆ ತನ್ನ ಸಮಾಜ ಮತ್ತು ತನ್ನ ಧರ್ಮದ ಬಗ್ಗೆ ಅಭಿಮಾನವು ಬೆಳೆಯುವುದು.

"ಸ್ಥಾವರ ಅಂದರೆ ನಿಶ್ಚಲನಾಗಿರುವ ದೇವರು. ಜಂಗಮ ಎಂದರೆ ಚಲನ ಶೀಲವಾದ ಸಮಾಜ ಇವೆರಡೂ ಚೈತನ್ಯವೆಂಬ ನಾಣ್ಯದ ಎರಡು ಮುಖಗಳು. ಆದ್ದರಿಂದ ಬರಿಯ ಮಾತಿನ ಮಾಲೆಯನ್ನು ಕಟ್ಟಿ ಸಮತಾವಾದವನ್ನು ಹೇಳಿದರೆ ಸಾಲದು, ದೇವರನ್ನು ಒಲಿಸಿಕೊಳ್ಳಬೇಕು ಎನ್ನುವವರು ಜಂಗಮ ಸೇವೆ ಮಾಡಲೇಬೇಕು.

196. ಜಂಗಮದ ಬಗ್ಗೆ ಉದಾಸೀನ ಬೇಡ

ಲಾಂಛನ ಹೊರಗೆ ಬಂದಿರಲು, ಒಳಗೆ ಲಿಂಗಾರ್ಚನೆಯೆಂತಯ್ಯಾ?
ಮುಖದಲ್ಲಿ ಕಟ್ಟಿದ ಕನ್ನಡಿ, ಮೂಗಿನ ಮೇಲಣ ಕತ್ತಿ
ಸಮಯಾಚಾರವೆಂತುಟಯ್ಯಾ?
ಲಿಂಗದೇವಯ್ಯ ಮೂಗ
ಕೊಯ್ಯದೆ ಮಾಣ್ಬನೆ ಹೇಳಯ್ಯಾ - ಬ.ವ.ದೀ.194

ಇಷ್ಟಲಿಂಗ, ವಿಭೂತಿ, ರುದ್ರಾಕ್ಷಿ, ಕಾಷಾಯ ಲಾಂಛನ ಧರಿಸಿದ ಜಂಗಮನು ಹೊರಗೆ ಬಂದಿರುವಾಗ ಅವನನ್ನು ಬರಮಾಡಿಕೊಳ್ಳುವುದನ್ನು ಕಡೆಗಣಿಸಿ ಒಳಗೆ ಇಷ್ಟಲಿಂಗಾರ್ಚನೆಯಲ್ಲಿ ಭಕ್ತನು ತಲ್ಲೀನನಾಗುವುದು ಸರಿಯೆ? ಕೆಲವು ಶ್ರೀಮಂತರು ಜಂಗಮರನ್ನು ಸ್ವಾಗತಿಸಲು ಇಷ್ಟವಿಲ್ಲದೆ (ಅಥವಾ ದೇಣಿಗೆ ಕೇಳಲು ಬಂದ ಸಾಮಾಜಿಕ / ಧಾರ್ಮಿಕ ಕಾರ್ಯಕರ್ತರಿಗೆ ದೇಣಿಗೆ ಕೊಡಲು ಇಷ್ಟವಿಲ್ಲದೆ) ಯಜಮಾನರು ಪೂಜೆಯಲ್ಲಿ ತಲ್ಲೀನರಾಗಿದ್ದರೆ ಎಂದು ಹೆಂಡತಿ, ಮಕ್ಕಳು ಅಥವಾ ಸೇವಕರ ಕೈಲಿ ಹೇಳಿ ಸುವುದುಂಟು.

ಭಾರತ ದೇಶದಲ್ಲಿ ಧರ್ಮಪ್ರಚಾರಕ್ಕೆ ಮೊಟ್ಟಮೊದಲು ಆರಂಭಿಸಿದವರು ಗೌತಮ ಬುದ್ಧರು. ನಂತರ ರೂಢಿಗೆ ತಂದವರು ಗುರು ಬಸವಣ್ಣನವರು. ಅಸಂಖ್ಯಾತ ಜಂಗಮರನ್ನು ಧರ್ಮ ಪ್ರಚಾರದಲ್ಲಿ ತೊಡಗಿಸಿದರು. ಲಿಂಗಾಯತ ಧರ್ಮವು ತ್ವರಿತಗತಿಯಲ್ಲಿ ಹಬ್ಬ ತೊಡಗಿತು. ದೀಕ್ಷೆ ತೆಗೆದುಕೊಂಡ ನವ ಲಿಂಗಾಯತರಿಗೆ ತರಬೇತಿ ಕೊಡುವುದು ಅಗತ್ಯವಿತ್ತು. ಜಂಗಮರು ಪಟ್ಟಣಕ್ಕೆ ಪಂಚರಾತ್ರಿಯಂತೆ ಹಳ್ಳಿಗೆ ಏಕರಾತ್ರಿಯಂತೆ ಸಂಚರಿಸುತ್ತ ಜನರಿಗೆ ಸಂಸ್ಕಾರ ನೀಡುತ್ತಿದ್ದರು. ಆಗ ಅವರ ಪೂಜಾದಿ ಕ್ರಿಯೆಗಳನ್ನು ಊಟೋಪಚಾರಗಳನ್ನು ಭಕ್ತರು, ಗೃಹಸ್ಥರು ನೋಡಿಕೊಳ್ಳಬೇಕು ತಾನೆ? ತಮ್ಮ ಸಾಮಾಜಿಕ/ ಧಾರ್ಮಿಕ ಸ್ಥಾನವನ್ನು ಹೆಚ್ಚಿಸಿಕೊಳ್ಳಲು ಸಾಕಷ್ಟು ಜನ ದೀಕ್ಷೆ ಪಡೆಯುತ್ತಿದ್ದರು. ಜಂಗಮರು

ಬೋಧೆ ಮಾಡಲು ಬಂದಾಗ ಕೆಲವು ಶ್ರೀಮಂತರು ಅಹಂಕಾರದಿಂದಲೋ ಜಿಪುಣ ತನದಿಂದಲೋ ಅವರನ್ನು ಕಡೆಗಣಿಸುತ್ತಿದ್ದರು. ಇಂತಹ ಅನುಭವಗಳು ಧರ್ಮ ಪ್ರಚಾರಕರ ಆರಂಭದ ಜೀವನದಲ್ಲಿ ಆಗುತ್ತವೆ. ಪೂಜ್ಯ ಅಪ್ಪಾಜಿಯವರ ಜೀವನದಲ್ಲಿ ಘಟಿಸಿವೆ. ಸ್ವಂತ ಗಾಡಿ ಬಂದ ಮೇಲೆ. ಸಿಬ್ಬಂದಿ ದೊರೆತ ಮೇಲೆ ಸಮಸ್ಯೆ ತಪ್ಪಿದೆ. ಸನ್ಯಾಸಿ ಆದ ಹೊಸದರಲ್ಲಿ ಇನ್ನೂ ಒಬ್ಬಂಟಿಯೇ ಇರುವರಷ್ಟೆ. ಪೂಜ್ಯ ಗುರುಗಳು ಬೆಳೆಸಿದ ಭಕ್ತವೃಂದ ಇದ್ದುದರಿಂದ ನಮಗೆ ಆ ಸಮಸ್ಯೆ ಬರಲಿಲ್ಲ. ಎಂಥಾ ಸಮಸ್ಯೆ ಬಂದರೂ ಪೂಜ್ಯರು ಛಲ ಬಿಡಲಿಲ್ಲ. ಉಪವಾಸ-ವನವಾಸ ಮಾಡಿ ಧರ್ಮಪ್ರಚಾರ ಮಾಡಿದರು) ಜಂಗಮರು ಉತ್ಸಾಹ ಕಳೆದುಕೊಳ್ಳಲು ಇದು ಪ್ರೇರಣೆ ನೀಡದೆ? ಅದಕ್ಕಾಗಿಯೇ ಧರ್ಮಪಿತರು ಅಂಥ ಭಕ್ತರಿಗೆ ಬುದ್ಧಿವಾದವನ್ನು ಕಟುವಾದ ಭಾಷೆಯಲ್ಲಿ ಹೇಳಿದ್ದಾರೆ.

ಮೂಗಿನ ಮೇಲೊಂದು ಕತ್ತಿ ತೂಗುತ್ತಿದೆ. ಯಾವಾಗ ಬಡಿದು ಮೂಗು ತುಂಡರಿಸುವುದೋ ತಿಳಿಯದು. ಅದನ್ನು ನೋಡಲಿಕ್ಕೆ ಕನ್ನಡಿಯನ್ನೂ ಕಟ್ಟಲಾಗಿದೆ! ಹಾಗೆ ಜಂಗಮನ ಕುರಿತು ಉದಾಸೀನ ಮಾಡುವವರಿಗೆ ಲಿಂಗದೇವನ ಶಿಕ್ಷೆ ಕಾದಿರುತ್ತದೆ.

171. ಲಿಂಗವು ಬೇಡದು ಬೆಸಗೊಳ್ಳದು

ಆಡುತ್ತ ಹಾಡುತ್ತ ಭಕ್ತಿಯ ಮಾಡಬಹುದು ಲಿಂಗಕ್ಕೆ
ಅದು ಬೇಡದು ಬೆಸಗೊಳ್ಳದು
ತಂದೊಮ್ಮೆ ನೀಡಬಹುದು,
ಕಾಡುವ ಬೇಡುವ ಜಂಗಮ ಬಂದಡೆ,
ನೀಡಲು ಆರರು ಲಿಂಗದೇವಾ. - ಬ.ವ.ದೀ.195

ಇಷ್ಟಲಿಂಗಕ್ಕೆ ಹರ್ಷದಿಂದ ನಲಿನಲಿದಾಡುತ್ತ ಮನದುಂಬಿ ಹಾಡುತ್ತ ಎಷ್ಟೊತ್ತು ಬೇಕಾದರೂ ಪೂಜೆ ಮಾಡಬಹುದು. ಏಕೆಂದರೆ ಅದು ಏನನ್ನೂ ಬೇಡುವುದಿಲ್ಲ ಮತ್ತು ಏನಾದರೊಂದು ವಸ್ತು ಕಡಿಮೆಯಾದರೆ ಏಕೆ ಎಂದು ಬೆಸಗೊಳ್ಳದು ಅಂದರೆ ಕೇಳದು. ಜಂಗಮನ ವಿಷಯ ಹಾಗಲ್ಲ. ಜಂಗಮನಿಗೆ ಒಮ್ಮೆ ನೀಡಿದಾಗ ಅದು ಹೊಟ್ಟೆ ತುಂಬ ಆಗದೆ ಇದ್ದರೆ ಅವನು ಪುನಃ ಕೇಳುವುದು ಸ್ವಾಭಾವಿಕ. ಆಗ ಕೆಲವು ಗೃಹಿಣಿಯರು ಸಿಡಿಪಿಡಿ ಮಾಡುವರು. "ಒಮ್ಮೆ ನೀಡಿದ್ದು ಸಾಲದೆ? ಪುನಃ ಕೇಳ್ತೀರಲ್ಲ. ಇಟ್ಟಷ್ಟು ತಿಂದು ಹೋದರಾಗದೆ?" ಎಂದೂ ಅನ್ನಬಹುದು.

ಈ ವಚನದಲ್ಲಿ ಜಂಗಮನಿಗೂ ಸೂಚ್ಯವಾಗಿ ಬೋಧೆ ಇದೆ ಎನಿಸುತ್ತದೆ. ತುಂಬಾ ಕಾಡುವ ಮತ್ತು ಕೊಟ್ಟಷ್ಟೂ ಇನ್ನಷ್ಟು ಬೇಡುವ ಜಂಗಮರನ್ನು ಕಂಡಾಗ ಭಕ್ತನಲ್ಲಿ ತಿರಸ್ಕಾರ ಹುಟ್ಟುತ್ತದೆ. ಅದಕ್ಕಾಗಿ ಜಂಗಮ ಸೂಕ್ಷ್ಮ ಸ್ವಭಾವಿಯಾಗಿ ಇರಬೇಕು. ಕಾಡಿದರೆ, ಬೇಡಿದರೆ ಸಹ ನೀಡುವ ಸ್ವಭಾವವಿಲ್ಲದ ಯಜಮಾನ /ಯಜಮಾನಿಯ ವರ್ತನೆ ತಿಳಿದು ಸೂಕ್ಷ್ಮವಾಗಿ ವರ್ತಿಸಿ, ಇಟ್ಟಷ್ಟನ್ನು ಪ್ರಸಾದವಾಗಿ ಸ್ವೀಕರಿಸಬೇಕು; ಕೇಳಿ ಅವಮಾನಿತನಾಗಬಾರದು.

198. ಉಣ್ಣದ ಲಿಂಗಕ್ಕೆ ಬೋನವ ಹಿಡಿವರು

ಕಲ್ಲ ನಾಗರ ಕಂಡರೆ ಹಾಲನೆರೆಯೆಂಬರು;
ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯಾ!
ಉಂಬ ಜಂಗಮ ಬಂದಡೆ ನಡೆಯೆಂಬರು;
ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ!
ನಮ್ಮ ಲಿಂಗದೇವನ ಶರಣರ ಕಂಡು ಉದಾಸೀನವ ಮಾಡಿದಡೆ
ಕಲ್ಲ ತಾಗಿದ ಮಿಟ್ಟೆಯಂತಪ್ಪರಯ್ಯಾ - ಬ.ವ.ದೀ.196

ಕ್ರಾಂತಿಪುರುಷ ಬಸವಣ್ಣನವರ ಜನಪ್ರಿಯ ವಚನಗಳಲ್ಲಿ ಇದೂ ಒಂದು. ನಾಗರ ಕಲ್ಲುಗಳನ್ನು ಗುಡಿಗಳ ಆವರಣದಲ್ಲಿ, ಅರಳಿ ಗಿಡಗಳ ಕೆಳಗೆ ಪ್ರತಿಷ್ಠಾಪಿಸಿರುತ್ತಾರೆ. ಮೂಢ ಜನರು ಅವನ್ನು ಸುತ್ತುತ್ತಿರುತ್ತಾರೆ, ಹಾಲನ್ನು ತಂದು ನಾಗರಕಲ್ಲಿನ ಮೇಲೆ ಎರೆಯುತ್ತಾರೆ. ಇವರು ಪೂಜೆ ಮಾಡುವಾಗಲೇ ನಿಜವಾದ ನಾಗರ ಹಾವು ಬಂದರೆ ತಕ್ಷಣ "ಕೊಲ್ಲು ಕೊಲ್ಲು" ಎಂದು ಕಿರುಚಾಡಿ ಜನರನ್ನು ಸೇರಿಸುತ್ತಾರೆ. ಅದೇ ರೀತಿ ಉಂಬ ಜಂಗಮ ಬಂದರೆ, "ಸ್ವಾಮೇರೆ ಮುಂದೆ ನಡೀರಿ" ಎನ್ನುತ್ತಾರೆ. ಗುಡಿಗೆ ಹೋಗಿ ಸ್ಥಾವರ ಲಿಂಗಕ್ಕೆ ಎಡೆ ಹಿಡಿದುಕೊಂಡು ಬನ್ನಿ ಎಂದು ಯಾರನ್ನಾದರೂ ಕಳಿಸುತ್ತಾರೆ.

ನಿಸ್ವಾರ್ಥಿಗಳು, ಧರ್ಮ ಬೋಧಕರು, ತನು ದಾಸೋಹಿ (dedicated Soul)ಗಳು ಆದ ಜಂಗಮರಿಗೆ ಊಟೋಪಚಾರಗಳನ್ನು ಏರ್ಪಾಡು ಮಾಡುವುದು ಸಮಾಜದ ಕರ್ತವ್ಯ. ಆದ್ದರಿಂದ ಅಂಥ ತ್ಯಾಗಿಗಳನ್ನು ಕಂಡು ಉದಾಸೀನವ ಮಾಡಿದರೆ ಅದು ಕಲ್ಲು ತಾಗಿದ ಮಣ್ಣಿನ ಹೆಂಟೆಯಂತೆ ಆಗುವರು. ಶರಣರ ಕಂಡು ಉದಾಸೀನವ ಮಾಡಿದರೆ ಎಂಬುದರಲ್ಲಿ ಇನ್ನೊಂದು ಅರ್ಥವೂ ಇದೆ. ಸ್ವಧರ್ಮೀಯರಾದ ಶರಣರನ್ನು ಕಂಡಾಗ ಅದೂ ಪರವೂರಿಂದ ಬಂದವರು ಇರುವಾಗ 'ಮನೆಗೆ ಬನ್ನಿ, ಪ್ರಸಾದ ಮಾಡಿ' ಎಂದು ಕರೆಯಬೇಕು. ಅವರಾಗಿಯೇ ಮನೆಗೆ ಬಂದಾಗ 'ಪ್ರಸಾದ ಮಾಡಿ' ಎನ್ನಬೇಕು. ಹಸಿವಾಗಿದ್ದರೂ ಸಂಕೋಚದಿಂದ ಅತಿಥಿಗಳು ಸುಮ್ಮನಿದ್ದರೆ ಆತಿಥೇಯರು ಕರೆಯದೆ ಉದಾಸೀನ ಮಾಡಬಾರದು. ಜಂಗಮ ಪದವನ್ನು ಚೈತನ್ಯ ಎಂದು, ಜೀವ ಎಂದು ಅರ್ಥದಲ್ಲಿ ವಿಶಾಲಗೊಳಿಸಿದರೆ ಆಗ ಹಸಿದ ಜೀವಿಗಳೆಲ್ಲ ಜಂಗಮರೆ! ಉಂಬ ಜಂಗಮ ಅಂದರೆ ಹಸಿದು ನಿಂತಿರುವ ವ್ಯಕ್ತಿ ಅನ್ನವನ್ನು ಬೇಡುವಾಗ ಅವನ ಹಸಿವು ತಣಿಸದೆ ಗುಡಿಯ ಲಿಂಗಕ್ಕೆ ಎಡೆಹಿಡಿಯಲು ಹೋಗುವ ಮರುಳು ಮಾನವರಿಗೆ ಈ ವಚನದಲ್ಲಿ ಹಿತೋಪದೇಶವಿದೆ.

199. ಜಂಗಮವೇ ಲಿಂಗ

ನಾಗಂಗೆ ಹೊಸತನಿಕ್ಕಿಹೆವೆಂಬರು;
ನಾಗ ಬಂದಡೆ ಕೋಲ ಕಳೆದುಕೊಂಬರು!
ಆಗದಯ್ಯಾ! ಜಂಗಮ ಲಿಂಗವೆಂಬ ಶಬ್ದವಾಗದಯ್ಯಾ!
ಲಿಂಗದೇವರಲ್ಲಿ ಸಿಂಧುಬಲ್ಲಾಳಂಗಲ್ಲದೆ ಆಗದಯ್ಯಾ - ಬ.ವ.ದೀ.197

ನಾಗರ ಪಂಚಮಿಯ ದಿನ ನಾಗರಾಜನಿಗೆ ಹೊಸ ವಸ್ತುಗಳನ್ನು ಕೊಡುತ್ತೇವೆಂದು ಹೊಸ ಪಂಚೆ, ಶಲ್ಯ, ಕಡುಬು, ಹಾಲು ಸಹಿತವಾಗಿ ಹುತ್ತದ ಬಳಿಗೆ ಹೋಗುವರು. ಹುತ್ತವು ಸಮೀಪದಲ್ಲಿ ಸಿಗದಿದ್ದರೆ ನಾಗರ ಕಲ್ಲಿಗೇ ಹಾಲೆರೆದು ಪಂಚೆ ಉಡಿಸಿ, ಶಲ್ಯ ಹಾಕುವರು. ಕಾಯಿ ಕಡುಬು, ಸಿಹಿ ಕಜ್ಜಾಯವನ್ನು ಎಡೆ ಹಿಡಿಯುವರು. ಅಕಸ್ಮಾತ್ ಹುತ್ತದ ಒಳಗಿನಿಂದ ನಾಗವು ಹೊರಬಂದರೆ ಅಥವಾ ನಾಗರ ಕಲ್ಲಿನ ಬಳಿ ಹರಿದಾಡುತ್ತ ಬಂದರೆ ಅದನ್ನು ಕೊಲ್ಲಲು ಕೋಲನ್ನು ತಳೆದುಕೊಳ್ಳುವರು. ಅದೇ ರೀತಿ ಕೆಲವರ ಭಕ್ತಿ. ಲಿಂಗಪೂಜೆಯನ್ನು ಮಾಡುತ್ತಾರೆ, ನಂತರ ಸಂತೃಪ್ತಿಯಿಂದ ಭೋಜನವನ್ನು ಮಾಡುತ್ತಾರೆ. ಅದೇ ಸಮಯಕ್ಕೆ ಜಂಗಮನು ಬಂದರೆ ಅವನನ್ನು ನಿಂದಿಸಿ, ಉಣಲಿಕ್ಕದೆ ಅಥವಾ ಅವನಿಗೆ ಏನೂ ಕಾಣಿಕೆ ನೀಡದೆ ಗದರಿಸಿ, ಅಟ್ಟಿಬಿಡುವರು. ಇಂಥ ಸಂದರ್ಭದಲ್ಲಿ ಧರ್ಮಗುರು ಬಸವಣ್ಣನವರಿಗೆ ಸಿಂಧುಬಲ್ಲಾಳನ ನೆನಪಾಗುತ್ತದೆ. ಒಬ್ಬ ವ್ಯಕ್ತಿ ತನುವಿನಿಂದ ಸೇವೆ ಮಾಡಬಹುದು, ಮನದಿಂದ ಪ್ರೋತ್ಸಾಹಿಸಬಹುದು, ಧನವನ್ನು ಕೊಡಬಹುದು ಆದರೆ ತನ್ನ ಹೆಂಡತಿಯನ್ನು ಕೊಡಲು ಎಂಥಾ ಪ್ರಸಂಗದಲ್ಲೂ ಒಪ್ಪುವುದಿಲ್ಲ. ಮಾತ್ರವಲ್ಲ ಹಾಗೆ ಪತ್ನಿಯನ್ನು ಕೇಳುವುದು ಆತ್ಮಾಭಿಮಾನವನ್ನು ಕೆರಳಿಸುವುದು. ಆದರೆ ಸ್ವತಃ ರಾಜನಾಗಿದ್ದ ಸಿಂಧುಬಲ್ಲಾಳನು ಅಷ್ಟೇ ಶಾಂತ ಮನಸ್ಸಿನಿಂದ ಪತ್ನಿಯನ್ನು ಒಪ್ಪಿಸಿದಾಗ, ಸಿಂಧು ಬಲ್ಲಾಳನ ಭಕ್ತಿಯನ್ನು ಪರೀಕ್ಷಿಸಲು ಬಂದಿದ್ದ ಜಂಗಮ ವೇಷಧಾರಿ ಶಿವನು ತಾನೇ ನಾಚಿಬಿಟ್ಟ. ಸಿಂಧುಬಲ್ಲಾಳನ ಭಕ್ತಿಯನ್ನು ಮೆಚ್ಚಿ ಕೈಲಾಸಕ್ಕೆ ಕರೆದೊಯ್ದ.

(ಸಿಂಧು ಬಲ್ಲಾಳನ ಭಕ್ತಿ ಅನುಕರಣೀಯವಲ್ಲ. ಇಂಥ ಅಂಧಶ್ರದ್ಧೆಗೆ ಬಲಿಯಾದ ವ್ಯಕ್ತಿಯನ್ನು ದುರುಪಯೋಗ ಪಡಿಸಿಕೊಳ್ಳಲು ಸಾಕಷ್ಟು ಜನ ವೇಷಧಾರಿಗಳು ಸಿದ್ಧರಿರುವರು. ಕೆಲವು ಜಂಗಮ ವೇಷಧಾರಿಗಳೂ ಅಷ್ಟೆ, ಮುಗ್ಧರು, ಭಾವುಕರೂ ಆದ ಭಕ್ತರನ್ನು ಶೋಷಿಸುವರು, ಆದ್ದರಿಂದ ಭಕ್ತನು ನಿತ್ಯಾನಿತ್ಯ ವಿವೇಕ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು; ಸತ್ಪಾತ್ರರಿಗೆ ದಾನ ಮಾಡಬೇಕು. ಅಪಾತ್ರರನ್ನು ತಿರಸ್ಕರಿಸಬೇಕು)

200. ಜಂಗಮಕ್ಕೆರೆದಡೆ ಸ್ಥಾವರ ನೆನೆಯಿತ್ತು

ಎರೆದಡೆ ನೆನೆಯದು ಮರೆದಡೆ ಬಾಡದು
ಹುರುಳಿಲ್ಲ ಹುರುಳಿಲ್ಲ ಲಿಂಗಾರ್ಚನೆ; ಲಿಂಗದೇವಾ,
ಜಂಗಮಕ್ಕೆರೆದಡೆ ಸ್ಥಾವರ ನೆನೆಯಿತ್ತು - ಬ.ವ.ದೀ.198

ಕೆಲವೊಂದು ವಚನದಲ್ಲಿ ಯಾವುದಾದರೊಂದು ಅಂಶಕ್ಕೆ ಒತ್ತುಕೊಟ್ಟರೆ ಅದರ ಅರ್ಥ ಇನ್ನಿತರ ಅಂಶಗಳನ್ನು ಕಡೆಗಣಿಸಿರುತ್ತಾರೆಂದಲ್ಲ. ವಚನಗಳನ್ನು ಅರ್ಥ ಮಾಡುವಾಗ ಎಚ್ಚರಿಕೆ ಅಗತ್ಯ. ಇಷ್ಟಲಿಂಗಕ್ಕೆ ಮಜ್ಜನಕ್ಕೆ ಎರೆದರೆ ಅದೇನೂ ನೆನೆಯುವುದಿಲ್ಲ, ಮರೆತರೆ ಬಾಡುವುದಿಲ್ಲ. ಆದ್ದರಿಂದ

ಲಿಂಗಾರ್ಚನೆಯಲ್ಲಿ ಹುರುಳಿಲ್ಲ ಜಂಗಮ ಸೇವೆಯನ್ನು ಮಾಡಿದರೆ ಲಿಂಗದೇವನಿಗೆ ನಿಜವಾದ ತೃಪ್ತಿ. ಈ ವಚನ ಓದಿ ಕೆಲವರು "ನೋಡಿದಿರಾ, ಬಸವಣ್ಣನವರೇ ಹೇಳುತ್ತಾರೆ ಸೇವೆಯೊಂದೇ ಸಾಕು; ಲಿಂಗಪೂಜೆ ಬೇಕಿಲ್ಲ ಎಂದು." ಎಂಬುದಾಗಿ ಹೇಳಿ ಪೂಜೆ ಮಾಡುವುದರಿಂದ ತಪ್ಪಿಸಿಕೊಳ್ಳುತ್ತಾರೆ.

ಕೇವಲ ಲಿಂಗಪೂಜೆಯಲ್ಲಿ ವೈಯಕ್ತಿಕವಾಗಿ ಆಸಕ್ತರಾಗಿರುವವರಿಗೆ ಸಮಾಜ ಸೇವೆಯಲ್ಲೂ ತೊಡಗಿಸಿಕೊಳ್ಳಲಿಕ್ಕಾಗಿ ಈ ಬೋಧೆ ಇದೆ.

201. ಜಂಗಮಾಪ್ಯಾಯನದಲ್ಲಿ ಲಿಂಗ ಸಂತುಷ್ಟಿ

ಅಗ್ನಿಯಾಧಾರದಲ್ಲಿ ಕಬ್ಬುನ ನೀರುಂಬುದಯ್ಯಾ;
ಭೂಮಿಯಾಧಾರದಲ್ಲಿ ವೃಕ್ಷ ನೀರುಂಬುದಯ್ಯಾ;
ಜಂಗಮವಾಪ್ಯಾಯನವಾದಡೆ ಲಿಂಗಸಂತುಷ್ಟಿಯಹುದಯ್ಯಾ;
ಇದು ಕಾರಣ ಲಿಂಗದೇವರಲ್ಲಿ
ಜಂಗಮವಾಪ್ಯಾಯನವಾದಡೆ ಲಿಂಗಸಂತುಷ್ಟಿ - ಬ.ವ.ದೀ.199

ಕಬ್ಬಿಣವು ನೀರನ್ನು ಕುಡಿಯು(ಹೀರು)ವುದಿಲ್ಲ. ಆದರೆ ಚೆನ್ನಾಗಿ ಕಳಕಳ ಕಾದಾಗ ನೀರನ್ನು ಸಂಪೂರ್ಣ ಕುಡಿಯುತ್ತದೆ. ಅದೇ ರೀತಿ ಭೂಮಿಯಲ್ಲಿ ಬೇರನ್ನು ಇಳಿಸುವ ವೃಕ್ಷ ಭೂಮಿಗೆ ನೀರನ್ನು ಎರೆದಾಗ ಅದರ ನೆರವಿನಿಂದ ನೀರನ್ನು ಹೀರಿಕೊಳ್ಳುವುದು. ಅದೇ ರೀತಿ ಗುಡಿಗಳಲ್ಲಿರುವ ದೇವತಾ ಮೂರ್ತಿಗಳಾಗಲಿ, ಲಿಂಗಗಳಾಗಲಿ ಅಭಿಷೇಕವೆಂದು ಎರೆದ ಹಾಲನ್ನು ಕುಡಿಯುವುದಿಲ್ಲ; ಬೆಣ್ಣೆ ಸೇವೆ ಎಂದು ಪೂಜಾರಿ ಮೆತ್ತುವ ಬೆಣ್ಣೆ ತಿನ್ನುವುದಿಲ್ಲ. ದೇವರು ನಿರಾಕಾರ. ಅವನಿಗೆ ಉಣ್ಣಿಸಲು, ಉಡಿಸಲು ಬರದು. ಅದೇ ವಸ್ತುಗಳನ್ನು ಹಸಿದವರಿಗೆ, ಅಗತ್ಯವಿರುವವರಿಗೆ ಕೊಟ್ಟರೆ ಮಾನವರು ತಿಂದಾಗ ಲಿಂಗದೇವನಿಗೆ ಸಂತೃಪ್ತಿಯಾಗುತ್ತದೆ. ಆದ್ದರಿಂದ ಆಪ್ಯಾಯನದ ವಸ್ತುಗಳನ್ನು ಹೋಮ-ಹವನ, ಯಜ್ಞ-ಯಾಗಗಳ ಹೆಸರಿನಲ್ಲಿ ಸುಡಬಾರದು. ಧರ್ಮಪಿತ ಬಸವಣ್ಣನವರ ದೃಷ್ಟಿಯಲ್ಲಿ ಈ ರೀತಿ ಮಾಡಿದ ವಸ್ತುನಷ್ಟ ಪಾಪಕ್ಕೆ ಕಾರಣವಾಗುತ್ತದೆ. ಅವನ್ನು ಉಣ್ಣಲು, ತಿನ್ನಲು, ಉಣಿಸಲು ತಿನಿಸಲು ಬಳಸಬೇಕು.

202. ಜಂಗಮವೇ ಸುಂಕಿಗ

ಭಾಂಡವ ತುಂಬಿದ ಬಳಿಕ ಸುಂಕವ ತೆತ್ತಲ್ಲದೆ
ವಿರಹಿತ ಹೋಗಬಾರದು.
ಕಳ್ಳನಾಣ್ಯ ಸಲುಗೆಗೆ ಸಲ್ಲದು,
ಭಕ್ತಿ ಎಂಬ ಭಾಂಡಕ್ಕೆ ಜಂಗಮವೆ ಸುಂಕಿಗ
ಲಿಂಗದೇವಾ

- ಬ.ವ.ದೀ. 200

ಸಾಮಾಗ್ರಿಗಳನ್ನು, ವಸ್ತುಗಳನ್ನು ಬಂಡಿಗಳಿಗೆ ತುಂಬಿದ ಮೇಲೆ ಸುಂಕ (Tax)ವನ್ನು ಕೊಟ್ಟು ನಗರಗಳ ಒಳಕ್ಕೆ ಪ್ರವೇಶಿಸಬೇಕು. ಸುಂಕ ಕೊಡದೆ ತಪ್ಪಿಸಿಕೊಂಡು ಹೋಗಲು ಸಾಧ್ಯವಿಲ್ಲ. ಕಳ್ಳತನದಲ್ಲಿ ಸಾಗಿಸಿದ ಮಾಲು ಬಳಕೆಗೆ ಸಲ್ಲುವುದಿಲ್ಲ. ಉಪಯೋಗಿಸಲು ಸರ್ಕಾರದವರು ಅವಕಾಶ ಕೊಡುವುದಿಲ್ಲ. ಅದೇ ರೀತಿ ಭಕ್ತಿ ಎಂಬ ಸಂಪತ್ತನ್ನು ಲಿಂಗದೇವನ ರಾಜ್ಯಕ್ಕೆ ಕೊಂಡೊಯ್ಯಬೇಕಾಗಿದೆ. ಮೊದಲು ದಾಸೋಹ ಎಂಬ ಸುಂಕ ಕೊಡಲೇಬೇಕು; ಯಾರಿಗೆ? ಜಂಗಮನಿಗೆ! ಏಕೆಂದರೆ ಆತ ಲಿಂಗದೇವನ ಪ್ರತಿನಿಧಿಯಾದ ಸುಂಕಿಗ (Tax Collector).

ಸಮಾಜ ಸೇವೆ -ದಾಸೋಹ ಎಂಬ ಸುಂಕ ಕೊಡದೆ ಒಬ್ಬ ಭಕ್ತನು ಕೇವಲ ಇಷ್ಟಲಿಂಗ ಪೂಜಾನಂದದ ಸಂಪತ್ತನ್ನು ಸಂಗ್ರಹಿಸಿಕೊಂಡು ದೇವರ ರಾಜ್ಯವನ್ನು ಪ್ರವೇಶಿಸಲು ಆಗುವುದಿಲ್ಲ ಎಂಬ ಸಂದೇಶ ಸಾರುವ ಈ ವಚನ ಬಹಳ ಅಮೂಲ್ಯವಾದುದು. (ಮುಂದುವರಿಯುವುದು)

ಶೃಂಗಾರವಾವುದು ?

ತನುವಿಗೆ ಶೃಂಗಾರ ಕಾಯಕ; ಮನಕ್ಕೆ ಶೃಂಗಾರ ಮೃದುವಚನ
ಧನಕ್ಕೆ ಶೃಂಗಾರ ದಾಸೋಹ; ನುಡಿಗೆ ಶೃಂಗಾರ ನಡೆ
ಜ್ಞಾನಿಗೆ ಶೃಂಗಾರ ಅಧ್ಯಾತ್ಮ; ಆತ್ಮಂಗೆ ಶೃಂಗಾರ ಲೀಲಾವಿಶೇಷ
ಲಿಂಗದೇವನ ಧ್ಯಾನ

-ಪೂಜ್ಯ ಮಾತೆ ಜ್ಞಾನೇಶ್ವರಿ

☹ ಸಮಸ್ಯೆ ? - ಸಮಾಧಾನ ! ☺

✉ ಸಿದ್ಧರಾಮ ಖಾನಾಪುರ, ಬನಹಟ್ಟಿ -587311, ಮೊ - 9902895065

? ಕನ್ನಡ ಸಾಹಿತ್ಯದಲ್ಲಿ ನನಗೆ ಕೆಲವೊಂದು ಸಮಸ್ಯೆಗಳು ಕಾಡುತ್ತಿವೆ.

1. ಹರಿಹರನ ರಗಳೆಗಳು, ಪಾಲ್ಕುರಿಕೆ ಸೋಮನಾಥನ ಬಸವ ಪುರಾಣಮು, ಭೀಮಕವಿಯ ಬಸವ ಪುರಾಣ, ಗುಬ್ಬಿ ಮಲ್ಲಣಾರ್ಯನ ವೀರಶೈವಾಮೃತ ಪುರಾಣ, ಷಡಕ್ಷರಿಯ ವೃಷಭೇಂದ್ರ (ಬಸವರಾಜ)ವಿಜಯ, ವಿರುಪಾಕ್ಷ ಪಂಡಿತನ ಚನ್ನಬಸವ ಪುರಾಣ, ಚಾಮರಸನ ಪ್ರಭುಲಿಂಗಲೀಲೆ -ಈ ಮುಂತಾದ ಕಾವ್ಯಗಳನ್ನು ವೀರಶೈವ ಕಾವ್ಯಗಳೆಂದು ಕರೆಯಬೇಕೋ ಅಥವಾ ಲಿಂಗಾಯತ ಕಾವ್ಯಗಳೆಂದು ಕರೆಯಬೇಕೋ?

2. ಈ ಕವಿಗಳು ಲಿಂಗಾಯತ ಕವಿಗಳೋ ಅಥವಾ ವೀರಶೈವ ಕವಿಗಳೋ ?

3. 12ನೆಯ ಶತಮಾನದ ನಂತರ ಬಂದ ಈ ಕವಿಗಳು ಶೈವಾಗಮೋಕ್ತ ವೀರಶೈವವನ್ನು ಮತ್ತು ವಚನೋಕ್ತ ಲಿಂಗಾಯತವನ್ನು ಸಮನ್ವಯಗೊಳಿಸಲು ಯತ್ನಿಸಿರುವರೆ?

4. ಈ ಕಾವ್ಯಗಳನ್ನು ಬರೆದ ಕವಿಗಳೆಲ್ಲ ಇಷ್ಟಲಿಂಗಧಾರಿಗಳಾಗಿದ್ದರೆ?

5. ಈ ಕಾವ್ಯಗಳ ಮೂಲಕ ಶರಣರನ್ನು ಮತ್ತು ಶರಣ ಸಿದ್ಧಾಂತವನ್ನು ಶೈವೀಕರಣಗೊಳಿಸುವ ಪ್ರಕ್ರಿಯೆ ನಡೆದಿದೆಯೆ?

★ ನಿಮ್ಮ ಪ್ರಶ್ನೆಗಳಲ್ಲೇ ಉತ್ತರವು ಹುದುಗಿದೆ. ಈ ಬಗ್ಗೆ ನಾನು ಹಲವಾರು ಸಾರಿ ಕಲ್ಯಾಣ ಕಿರಣದಲ್ಲಿ ಪ್ರಸ್ತಾಪಿಸಿದ್ದೇನೆ. ಆದರೂ ಈಗ ಕ್ರೋಢೀಕರಿಸಿ ಹೇಳುತ್ತಿದ್ದೇನೆ. ಹರಿಹರನಿಂದ ಶರಣರ ಮೇಲೆ ಕಾವ್ಯ ಬರೆಯುವ ಪರಂಪರೆ ಆರಂಭವಾಗಿದೆ. ಆತ ಶೈವ ಬ್ರಾಹ್ಮಣ, ಹಂಪೆಯ ವಿರುಪಾಕ್ಷನ ಭಕ್ತ, ವೀರಶೈವ ಕವಿಯಲ್ಲ, ಇಷ್ಟಲಿಂಗಧಾರಿ ಲಿಂಗಾಯತನೂ ಅಲ್ಲ. ಮುಖ್ಯವಾಗಿ ಭಕ್ತಿ ಕವಿ; ಅದ್ಭುತ ಪ್ರತಿಭಾವಂತ. ಗುರು ಬಸವಣ್ಣನವರ ಬಗ್ಗೆ ಅವನಿಗೆ ಅಪಾರ ಭಕ್ತಿ ಮತ್ತು ಮೆಚ್ಚುಗೆ. ಹೀಗಾಗಿ ಅವನ ಲೇಖನಿಗೆ ಗುರು ಬಸವಣ್ಣನವರ ಜೀವನ ಚರಿತ್ರೆ ಅಪೂರ್ವ ವಸ್ತು. ಭಾವಾವೇಶದಲ್ಲಿ ಅನೇಕ ಅಸಂಗತ ವಿಚಾರಗಳನ್ನು ಬರೆದಿದ್ದಾನೆ. ಉದಾ: ಶಾಪದಿಂದ ಗುರು ಬಸವಣ್ಣನವರನ್ನು ಭುವಿಗೆ ಇಳಿಸಿದ್ದು, ಪತ್ನಿಯನ್ನು (ಸಿಂಧು ಬಲ್ಲಾಳನಂತೆ) ಜಂಗಮನಿಗೆ ಒಪ್ಪಿಸುವುದು ಇತ್ಯಾದಿ. ಆದರೆ, ಅನೇಕ ಚಾರಿತ್ರಿಕ ಅಂಶಗಳನ್ನೂ ಒದಗಿಸಿದ್ದಾನೆ. ಉದಾಃ ಇಷ್ಟಲಿಂಗವು ಗುರು ಬಸವಣ್ಣನವರ ಪರಿಕಲ್ಪನೆ, ಕೊಡುಗೆ ಎಂಬುದು. ಅವರು ಗಣಪರ್ವಗಳನ್ನು ನಡೆಸುತ್ತಿದ್ದರು. ಅದಕ್ಕೆ ಅಂಗ, ವಂಗ, ಕಳಿಂಗ, ಗುರ್ಜರ ದೇಶಗಳಿಂದೆಲ್ಲ ಭಕ್ತರು ಬರುತ್ತಿದ್ದರೆಂಬುದು ಇತ್ಯಾದಿ... ಆದರೆ ಹರಿಹರನಿಗೆ ಬಸವಣ್ಣನವರ ಇಷ್ಟಲಿಂಗದ ಪೂಜಾ ಮರ್ಮವಾಗಲಿ, ಅಂತಿಮವಾಗಿ ಅವರು ಯೋಗೀಕ ನಿಲುವಿನಿಂದ ಹೇಗೆ ಇಚ್ಛಾಮರಣಿಯಾಗಿ ದೇಹ ಬಿಟ್ಟು ಲಿಂಗೈಕ್ಯರಾದರೆಂಬುದಾಗಲಿ ತಿಳಿದೇ ಇಲ್ಲ.

ಇನ್ನು ಪಾಲ್ಕುರಿಕೆ ಸೋಮನಾಥ ಆಂಧ್ರ ಮೂಲದ ವೀರಶೈವ ಕವಿ. ಚಾಮರಸನೂ ಅಷ್ಟೆ. ಗುಬ್ಬಿ ಮಲ್ಲಣಾರ್ಯ, ಷಡಕ್ಷರಿ, ವಿರುಪಾಕ್ಷ ಪಂಡಿತ ಮುಂತಾದವರು ಇಷ್ಟಲಿಂಗಧಾರಿಗಳು ಆಗಿದ್ದಿರ ಬಹುದಾದರೂ ಆ ಹೊತ್ತಿಗೆ ಆದಿ ಶರಣರ ಕ್ರಾಂತಿಕಾರಿ ವಿಚಾರಗಳಾಗಲಿ, ಮಾನವೀಯ ಕಳಕಳಿಯಾಗಲಿ ಆಗಲೇ ನಿಸ್ಸತ್ವಗೊಂಡಿರುವುದನ್ನು ಕಾಣಬಹುದು. ವಚನಕಾರರ ವೈಚಾರಿಕತೆ ಲವಲೇಶವೂ ಇಲ್ಲದೆ ಪುನಃ ಇವರೆಲ್ಲ ಕೈಲಾಸಕ್ಕೆ ಜೋತು ಬಿದ್ದಿರುವುದನ್ನು ಕಾಣುತ್ತೇವೆ.

ಶರಣರನ್ನು, ಶರಣರ ಸಿದ್ಧಾಂತವನ್ನು ಎಲ್ಲ ಕಾವ್ಯಗಳೂ ಶೈವೀಕರಿಸುವ ಪ್ರಯತ್ನವನ್ನೇ ಮಾಡಿವೆ. ಇದರಲ್ಲಿ ದುರುದ್ದೇಶ ಮತ್ತು ಸದುದ್ದೇಶ ಎರಡನ್ನೂ ಊಹಿಸಬಹುದು. ದುರುದ್ದೇಶವೇನೆಂದರೆ, ನಮ್ಮ ದೇಶದಲ್ಲಿ ವೈದಿಕ ಪುರೋಹಿತ ಶಾಹಿ ಬಹಳ ಬಲಿಷ್ಠವಾದುದು. ಬಹುದೊಡ್ಡ ವ್ಯಕ್ತಿತ್ವದ ಬುದ್ಧ, ಮಹಾವೀರ, ಬಸವಣ್ಣನಂತಹವರು ಬಂದಾಗ ಸ್ವಲ್ಪ ದುರ್ಬಲವಾದಂತೆ ಕಂಡರೂ ಅದು ಕರಿಕೆಯ ಬೇರಿನಂತೆ! ಬೇಸಿಗೆಯ ಕಾಲದಲ್ಲಿ ಒಣಗಿದಂತೆ ಕಂಡರೂ ಮಳೆಗಾಲದಲ್ಲಿ ಕರಿಕೆಯು ಬಹಳ ಬಲಿಷ್ಠವಾಗುವುದು. ಏಕೆಂದರೆ ಅದರ ಬೇರು ಬಹಳ ಆಳದಲ್ಲಿರುವುದು. ಬೌದ್ಧ ಧರ್ಮವು ವೈದಿಕದೊಡನೆ ರಾಜಿ ಮಾಡಿಕೊಳ್ಳುದುದರಿಂದ ಅಲ್ಲಿಯ ಭಿಕ್ಕುಗಳು ತತ್ವನಿಷ್ಠರಾದುದರಿಂದ ಬೌದ್ಧ

ಧರ್ಮವನ್ನು ದೇಶದಿಂದಲೇ ಹೊರಗೆ ಅಟ್ಟಲಾಯಿತು. ಜೈನ ಧರ್ಮವು ರಾಜಿ ಮಾಡಿಕೊಂಡಿದ್ದರಿಂದ ತನ್ನಮೂಲ ಸ್ವರೂಪವನ್ನು ಕಳೆದುಕೊಂಡು ಉಳಿದುಕೊಂಡಿತು. ಕಲ್ಯಾಣ ಕ್ರಾಂತಿಯ ನಂತರ ಧರ್ಮಗುರು, ಧರ್ಮ ಸಂಹಿತೆಯ ಸಂಪರ್ಕ ಕಡಿದುಕೊಂಡು ಲಿಂಗಾಯತ ಸಮಾಜವು ದಿಕ್ಕೇಡಿಯಾದಾಗ ಮಾರ್ಗದರ್ಶಕರು ಇಲ್ಲದಾದಾಗ ಪುನಃ ವೈದಿಕ / ಶೈವ ಪುರೋಹಿತ ಶಾಹಿಯು ಸಮಾಜದ ಒಳಸೇರಿತು - ಮೇಲೆ ಉಲ್ಲೇಖಿಸಿದ ಕಾವ್ಯ ಗ್ರಂಥಗಳ ಮೂಲಕ. ಮರ್ತ್ಯಲೋಕವನ್ನುಳಿದ ಬೇರೊಂದು ಲೋಕವನ್ನೇ ಒಪ್ಪದ ಗುರು ಬಸವಣ್ಣ, ಚನ್ನಬಸವಣ್ಣನವರನ್ನು ಕೈಲಾಸದಿಂದ ಇಳಿಸುವ ಪ್ರಯತ್ನನಡೆಯಿತು. ನಂದಿಯ ಅವತಾರ ಬಸವಣ್ಣ ಎಂಬ ಪರಿಕಲ್ಪನೆ ತಂದು ಕ್ರಾಂತಿಪುರುಷ ಬಸವಣ್ಣನವರನ್ನು ಪೌರಾಣೀಕರಣ (Mythologise) ಮಾಡಲಾಯಿತು. ವರ್ಣಾಂತರ ವಿವಾಹದಂತಹ ಕ್ರಾಂತಿಕಾರಿ ಘಟನೆಯನ್ನು ಎಲ್ಲ ಕಾವ್ಯಗಳೂ ಮುಚ್ಚಿಟ್ಟಿರುವುದು ಗಮನಾರ್ಹ. ಕೇವಲ ಜನಪದ ಸಾಹಿತ್ಯದಲ್ಲಿ, ಕಾಲಜ್ಞಾನ ವಚನಗಳಲ್ಲಿ ವರ್ಣಾಂತರ ವಿವಾಹ ಮತ್ತು ಕಲ್ಯಾಣ ಕ್ರಾಂತಿಯ ಕಥೆ ದಾಖಲಾಗಿರುವುದೂ ಅಷ್ಟೇ ಗಮನಾರ್ಹ.

ಭೀಮಕವಿಯ ಬಸವ ಪುರಾಣದಲ್ಲಿ ಪ್ರಸ್ತಾಪಿತವಾದ ಶಿವಭಕ್ತರ ಕಥೆಗಳು ಯಾವುವೂ ವಚನ ಧರ್ಮದ ಧ್ಯೇಯಾದರ್ಶಗಳಿಗೆ ಹೊಂದುವಂಥವಲ್ಲ. ಬಸವಾದಿ ಪ್ರಮಥರು ಸಮಾಜದ ಹೊರಗೆ ಎಸೆದಿದ್ದ ಅನೇಕ ನಂಬಿಕೆಗಳು ಬಸವ ಪುರಾಣ, ಹರಿಹರನ ರಗಳೆಯ ಮೂಲಕ ಒಳಸೇರಿದವು. ಹೀಗಾಗಿ ಈ ಕವಿಗಳಲ್ಲಿ ಪುರೋಹಿತಶಾಹಿ ಮನೋಭಾವವನ್ನು ಗುರುತಿಸಬಹುದು, ದುರುದ್ದೇಶಪೂರಿತ ಮಾಲಿನ್ಯೀಕರಣವನ್ನು ಆರೋಪಿಸಬಹುದು.

ಇನ್ನು ಈ ಅಶುದ್ಧೀಕರಣದಲ್ಲಿ ಸದುದ್ದೇಶವನ್ನೂ ಊಹಿಸಬಹುದು. ಕ್ರಾಂತಿಕಾರಿ ವಿವಾಹ ಮತ್ತು ಕಲ್ಯಾಣ ಕ್ರಾಂತಿ ವಿವಾಹ ದಿಕ್ಕುತಪ್ಪಿ ಚದುರಿದ ಸಮಾಜಕ್ಕೆ ವಚನ ಸಾಹಿತ್ಯವು ದೂರಕದಾಯಿತು. ಗುರು ಬಸವಣ್ಣನವರನ್ನು ಗೌರವಿಸಿ, ವೈಭವಿಸಿ ಹಾಡಿ ಕೊಂಡಾಡುವ ಸಾಹಿತ್ಯದ ಅಗತ್ಯವಿತ್ತು. ಬಸವಾದಿ ಪ್ರಮಥರ ಏಕದೇವೋಪಾಸನೆ ಭಾರತೀಯ ಮನಸುಗಳಿಗೆ ನುಂಗಲಾರದ ತುತ್ತು. ಪಾರಂಪರಿಕವಾಗಿ ಬಂದ ಶಿವೋಪಾಸನೆಯ ಮೋಹ ಬಿಡಲಾರದ ನಂಟು. ಹೀಗಾಗಿ ಕವಿಗಳು ಶೈವಭಕ್ತಿಯ ವೇಷ ತೊಡಿಸಿ ಬಸವಣ್ಣನವರನ್ನು ಶಿವನ ಮಾನಸ ಪುತ್ರ ನಂದಿಯ ಅವತಾರವಾಗಿ ಮಾಡಿ ಕಾವ್ಯಗಳನ್ನು ಬರೆದು. ಸ್ವಲ್ಪ ಮಟ್ಟಿಗಾದರೂ ಬಸವ ಭಕ್ತಿಯನ್ನು ಉಳಿಸಿರಬಹುದು ಬೆಳೆಸಿರಬಹುದು ಎಂಬ ಭಾವನೆ ಈ ಕವಿಗಳು ಗುರು ಬಸವಣ್ಣನವರನ್ನು ಹೊಗಳಿರುವ ಪರಿಯನ್ನು ನೋಡಿದಾಗ ಅನ್ನಿಸದೆ ಇರದು.

ವಚನ ಸಾಹಿತ್ಯದ ಅಧ್ಯಯನದ ಆಧಾರದ ಮೇಲೆ ಇಂದು ನಾವು ಕಾವ್ಯಗಳನ್ನು ವಿಮರ್ಶೆ ಮಾಡಿ ಅವುಗಳಲ್ಲಿ ಸಿಗುವ ಚಾರಿತ್ರಿಕ ಅಂಶಗಳನ್ನು ಆಯ್ದುಕೊಂಡು ತತ್ವಕ್ಕೆ ವಿರುದ್ಧವಾಗಿರುವುದನ್ನು ಕೈಬಿಡುವ ಪ್ರಾಜ್ಞತೆಯನ್ನು ಬೆಳೆಸಿಕೊಳ್ಳಬೇಕು ಅಷ್ಟೆ.

814ನೆಯ ಬಸವ ಪಂಚಮಿ
26-7-2009

ಶ್ರೀ ಗುರು ಬಸವಣ್ಣನವರ ಲಿಂಗೈಕ್ಯ ಸಂಸ್ಮರಣಾ ದಿನ 814ನೆಯ ಬಸವ ಪಂಚಮಿಯು ದೇವ (ಭಾನು)ವಾರ, ದಿ.26-7-2009ರಂದು ಬಂದಿದೆ. ನೀಲಮ್ಮ ಷಷ್ಟಿಯು ಸೋಮವಾರ ದಿ.27-7-2009ರಂದು ಬಂದಿದೆ. ಎಲ್ಲರೂ ದೇವವಾರದಂದೇ ಆಚರಿಸಲು ಸೂಚನೆ.

ಪ್ರತಿ ವರ್ಷವೂ ಬೆಂಗಳೂರಿನ ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ಬಸವ ಪಂಚಮಿಯ ಸಮಾರಂಭ ಏರ್ಪಡಿಸಲಾಗುವುದು. ಈ ವರ್ಷ ಅದು ಭಾನುವಾರ ಬಂದಿರುವುದರಿಂದ ಟೌನ್‌ಹಾಲ್ ಬೇರೆಯವರಿಗೆ ಬುಕ್ ಆಗಿತ್ತು.. ಹೀಗಾಗಿ ನಾವು ಶನಿವಾರ ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ; ಭಾನುವಾರ ಬಸವ ಮಂಟಪದಲ್ಲಿ ಆಚರಿಸುತ್ತಿದ್ದೇವೆ.

ಚೆನ್ನೈ ನಗರದಲ್ಲಿ ಅದ್ದೂರಿಯಾಗಿ ನಡೆದ
9ನೆಯ ಲಿಂಗಾಯತ ಧರ್ಮ ಸಮ್ಮೇಳನ

ತಮಿಳುನಾಡಿನ ರಾಜಧಾನಿ ಚೆನ್ನೈನಲ್ಲಿ 9ನೆಯ ಲಿಂಗಾಯತ ಧರ್ಮ ಸಮ್ಮೇಳನವು 2009ರ ಮೇ 2,3 ಮತ್ತು 4ರಂದು ಅದ್ದೂರಿಯಾಗಿ ಮತ್ತು ಅರ್ಥಪೂರ್ಣವಾಗಿ ಜರುಗಿತು. ಚೆನ್ನೈಯ ತ್ಯಾಗರಾಯ ನಗರ (ಟಿ.ನಗರ) ದಲ್ಲಿರುವ ಹಿಂದಿ ಪ್ರಚಾರ ಸಭಾದ ಮಹಾತ್ಮ ಗಾಂಧಿ ಕಾನ್ವೋಕೇಷನ್ ಹಾಲ್‌ದಲ್ಲಿ ಸಮ್ಮೇಳನವು ಆಯೋಜಿಸಲ್ಪಟ್ಟಿತ್ತು. ಶ್ರೀಗುರು ಬಸವಣ್ಣನವರು 12ನೆಯ ಶತಮಾನದಲ್ಲಿ ಸಂಸ್ಥಾಪಿಸಿದ ಲಿಂಗಾಯತ ಧರ್ಮದ ಅನುಯಾಯಿಗಳು ಭಾರತದ ಆದ್ಯಂತ ಚದುರಿದಂತೆ ಇರುವುದರಿಂದ ಅವರನ್ನು ಸಂಘಟಿಸಲು ಮತ್ತು ಗುರು ಬಸವಣ್ಣನವರ ಅಮೂಲ್ಯ ಸಂದೇಶಗಳನ್ನು ವಿವಿಧ ಭಾಷೆಗಳಲ್ಲಿ ಪ್ರಚಾರ ಮಾಡಲೋಸುಗ ಲಿಂಗಾಯತ ಧರ್ಮ ಸಮ್ಮೇಳನಗಳನ್ನು 1993ರಿಂದ ನಡೆಸಲಾಗುತ್ತಿದೆ. ಮೊಟ್ಟ ಮೊದಲ ಸಮ್ಮೇಳನವು ತಮಿಳುನಾಡಿನ ನೀಲಗಿರಿ ಜಿಲ್ಲೆಯ ಕಾಟೇರಿಯಲ್ಲಿ 1993ರಲ್ಲಿ ಜರುಗಿತು. ಎರಡನೆಯದು 1994ರಲ್ಲಿ ಆಂಧ್ರ ಪ್ರದೇಶ ರಾಜಧಾನಿ ಹೈದರಾಬಾದಿನಲ್ಲಿ, ಮೂರನೆಯದು 1995ರಲ್ಲಿ ಬೆಂಗಳೂರು ನಗರದಲ್ಲಿ ನಡೆದವು. ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ಅಂಗವಾಗಿ 1997ರಲ್ಲಿ ನವದೆಹಲಿಯ ಲಾಲ್‌ಕಿಲ್ಲಾ ಮೈದಾನದಲ್ಲಿ 5ನೆಯ ಸಮ್ಮೇಳನ, ಮಹಾರಾಷ್ಟ್ರದ ರಾಜಧಾನಿ ಮುಂಬಯಿಯಲ್ಲಿ 6ನೆಯ ಸಮ್ಮೇಳನ, ಏಳನೆಯ ಮತ್ತು ಎಂಟನೆಯ ಸಮ್ಮೇಳನಗಳು ಕ್ರಮವಾಗಿ ದೆಹಲಿಯ ದರಿಯಾಗಂಜ್‌ನ ಮಹಾವೀರ ವಾಟಿಕಾ ಮತ್ತು ಮಹಾವೀರ ಎನ್‌ಕ್ಲೇವ್‌ದಲ್ಲಿ ಜರುಗಿದವು. ಒಂಬತ್ತನೆಯ ಸಮ್ಮೇಳನವು ಚೆನ್ನಾಯ್ ನಗರದಲ್ಲಿ ಆಯೋಜಿಸಲ್ಪಟ್ಟಿತು.

ದಿ.2-5-09ರಂದು ಬೆಳಿಗ್ಗೆ ಸರಿಯಾಗಿ 10-30ಕ್ಕೆ ಉದ್ಘಾಟನಾ ಸಮಾವೇಶವು ಆರಂಭವಾಯಿತು. ಮೊಟ್ಟ ಮೊದಲಿಗೆ ಆದಿ ಪ್ರಮಥ ಧರ್ಮಗುರು ಬಸವಣ್ಣವರ ಅಮೃತಶಿಲಾ ಮೂರ್ತಿಗೆ ಪೂಜೆ ಸಲ್ಲಿಸಿ, ಪುಷ್ಪವೃಷ್ಟಿ - ಆರತಿ ಮಾಡಲಾಯಿತು. ಜಗನ್ಮಾತಾ ಅಕ್ಕಮಹಾದೇವಿ ಪೀಠಾಧ್ಯಕ್ಷೆ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಬಸವ ಧ್ವಜಾರೋಹಣವನ್ನು ಮಾಡಿದರು. ಸಕಲಟ್ಟಿ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಶರಣ.ಆರ್.ಚಂದ್ರಶೇಖರ್ ಎಲ್ಲರನ್ನು ಸ್ವಾಗತಿಸಿದರು. ಕೂಡಲ ಸಂಗಮದ ಬಸವ ಧರ್ಮ ಪೀಠದ ಅಧ್ಯಕ್ಷರಾದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರು ಪ್ರಾಸ್ತಾವಿಕವಾಗಿ ಮಾತನಾಡಿ ಸಮ್ಮೇಳನದ ಧ್ಯೇಯೋದ್ದೇಶಗಳನ್ನು ವಿವರಿಸಿ, ಸಮ್ಮೇಳನವನ್ನು ಉದ್ಘಾಟಿಸಿದರು.

"ಗುರು ಬಸವಣ್ಣನವರು 12ನೆಯ ಶತಮಾನದಲ್ಲಿ ಸಂಸ್ಥಾಪಿಸಿದ ಲಿಂಗಾಯತ ಧರ್ಮವು ತನ್ನ ಘನವಾದ ತತ್ವಗಳಿಂದ ಬಹಳ ವ್ಯಾಪಕವಾಗಿ ಪ್ರಸಾರಗೊಂಡು ಬಹಳ ಜನರನ್ನು ಆಕರ್ಷಿಸಿತು. ಗುರು ಬಸವಣ್ಣನವರ ಜೀವನದ ಅಂತಿಮ ಘಟ್ಟದಲ್ಲಿ ಹುಟ್ಟಿನಿಂದ ಬ್ರಾಹ್ಮಣನಾಗಿ ದೀಕ್ಷಾ ಸಂಸ್ಕಾರ ಪಡೆದು ಶರಣರಾದ ಮಧುವರಸರ ಮಗಳು ಲಾವಣ್ಯವತಿಯನ್ನು ಹುಟ್ಟಿನಿಂದ ಸಮಗಾರರಾಗಿ ದೀಕ್ಷಾ ಸಂಸ್ಕಾರ ಪಡೆದು ಶರಣರಾದ ಹರಳಯ್ಯನವರ ಮಗ ಶೀಲವಂತನಿಗೆ ಕೊಟ್ಟು ವಿವಾಹ ಮಾಡಿಸಿದ್ದರಿಂದ ಸಂಪ್ರದಾಯವಾದಿಗಳು ಸಿಡಿದೆದ್ದು ಬಿಜ್ಜಳರಾಜನಿಗೆ ಚಾಡಿ ಹೇಳಿದರು. ಇದರಿಂದ ಗುರು ಬಸವಣ್ಣನವರಿಗೆ ಗಡಿಪಾರು ಶಿಕ್ಷೆಯಾಯಿತು. ವಿವಾಹದಲ್ಲಿ ಭಾಗಿಗಳಾದವರ ಕಣ್ಣು ಕೀಳಿಸಿ ಎಳೆಹೂಟೆ ಶಿಕ್ಷೆ ನೀಡಲಾಯಿತು. ಜಾತಿವಾದಿಗಳು ವಚನ ಸಾಹಿತ್ಯವನ್ನು ನಾಶಮಾಡಲು ಯತ್ನಿಸಿದಾಗ ಚನ್ನಬಸವಣ್ಣನವರ ನೇತೃತ್ವದಲ್ಲಿ ಶರಣರು ವಚನ ಸಾಹಿತ್ಯ ತೆಗೆದುಕೊಂಡು ಸಹ್ಯಾದ್ರಿಯ ಕಡೆಗೆ ನಡೆದರು. ಕಲ್ಯಾಣದಲ್ಲಿದ್ದ ಅಸಂಖ್ಯಾತ ಶರಣರು ದೇಶದ ಎಲ್ಲೆಡೆ ಚದುರಿದರು. ಉತ್ತರದಲ್ಲಿ ಆಂಧ್ರದ ಕಡೆಗೆ, ದಕ್ಷಿಣದ (ಇಂದಿನ) ಮೈಸೂರು ಜಿಲ್ಲೆ, ತಮಿಳುನಾಡು - ಹೀಗೆಲ್ಲ ಛದುರಿದರು. ನೀಲಗಿರಿ ಜಿಲ್ಲೆಯ ಸಕಲಟ್ಟಿ, ಕಾಟೇರಿ, ಸೂಗತೂರೈ ಮುಂತಾದ ಕಡೆಯಲ್ಲಿ ನೆಲೆಸಿರುವ ಲಿಂಗಾಯತರು ಕಲ್ಯಾಣದಿಂದ ಅಂದು ವಲಸೆ ಬಂದರು. ಕೃಷ್ಣಗಿರಿ ಜಿಲ್ಲೆಯ ಡಂಕಣಿಕೋಟೆ ತಾಲ್ಲೋಕಿನ ಉರಿಗಂ ಎಂಬಲ್ಲಿ ನೂರೊಂದು ಸ್ವಾಮಿಗಳ ಗದ್ದುಗೆ ಮಠ ಇದೆ. ಇವರು ಕಲ್ಯಾಣದಿಂದ ಬಂದ ಶರಣರು ಎಂಬ ಬಗ್ಗೆ ಶಾಸನವೇ ಇದೆ. ನಂತರ ಶ್ರೀ ಸಿದ್ದಲಿಂಗೇಶ್ವರರು ಸಂಚರಿಸಿ, ಧರ್ಮ ಪ್ರಚಾರ ಮಾಡಿ ಲಿಂಗಾಯತ ಧರ್ಮವನ್ನು ಬೆಳೆಸಿದರು. ಇನ್ನು ಕೆಲವರು ಉದ್ಯೋಗ, ವ್ಯಾಪಾರಕ್ಕಾಗಿ ಬಂದು ನೆಲೆಸಿದ್ದಾರೆ. ಈ ರೀತಿಯಲ್ಲಿ ಬೆಳೆದಿರುವ ಲಿಂಗಾಯತ ಸಮಾಜದಲ್ಲಿ ಸಂಘಟನೆ ಮತ್ತು ಸಂಸ್ಕಾರಗಳನ್ನು ಮುಖ್ಯವಾಗಿ ಗುರಿಯಾಗಿ ಇಟ್ಟುಕೊಂಡು ಪ್ರಸ್ತುತ ಸಮ್ಮೇಳನವನ್ನು ಏರ್ಪಡಿಸಲಾಗಿದೆ." ಎಂದು ಪೂಜ್ಯ ಮಾತಾಜಿಯವರು ನುಡಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕೊಯಿಮತ್ತೂರಿನ ಭಾರತಿಯಾರ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ|| ಪದ್ಮನಾಭನ್, "ಪೂಜ್ಯ ಮಾತಾಜಿಯವರ ತರಂಗಿಣಿ ಕಾದಂಬರಿಯ ತಮಿಳು ಆವೃತ್ತಿಯನ್ನು ಓದಿದ್ದೇನೆ. ಕಳೆದ ವರ್ಷ ಸಕಲಟ್ಟಿಯ ಸಮ್ಮೇಳನದಲ್ಲಿ ಪುಸ್ತಕ ಬಿಡುಗಡೆಯಾದಾಗ ಮೊದಲನೆಯ ಪ್ರತಿಯನ್ನು ಪಡೆದುಕೊಳ್ಳುವ ಭಾಗ್ಯ ನನ್ನದಾಗಿತ್ತು. ಅದರಲ್ಲಿ ಚಿತ್ರಿತವಾಗಿರುವ ಅಕ್ಕಮಹಾದೇವಿಯವರ ವ್ಯಕ್ತಿತ್ವ ಅದನ್ನು ಚಿತ್ರಿಸಿರುವ ಪೂಜ್ಯ ಮಾತಾಜಿಯವರ ಲೇಖನ ಶಕ್ತಿಗೆ ಬೆರಗಾಗಿದ್ದೇನೆ. ಅವರಲ್ಲಿ ಸಾಹಿತ್ಯ ಶಕ್ತಿ, ವಾಗ್ಮಿತ್ವದ ಜೊತೆಗೆ ಸಂಘಟನಾ ಶಕ್ತಿಯೂ ಮೇಳವಿಸಿರುವುದು ನಾಯಕತ್ವದ ವಿಶೇಷ ಗುಣ. ಇವರ ಅಧ್ಯಾತ್ಮಿಕ ಶಕ್ತಿಯು ಅದ್ಭುತವಾಗಿದ್ದು ಇದರ ಜೊತೆಗೆ ಪ್ರಗತಿಪರ ಚಿಂತನೆ ಇರುವುದು ಎಲ್ಲರನ್ನೂ ಆಕರ್ಷಿಸುತ್ತದೆ. ಇವರ ಪುಸ್ತಕ ಲಾರ್ಡ್ ಬಸವ ಓದಿ ನಾನು ಬಸವಣ್ಣನವರ ಬಗ್ಗೆ ತಿಳಿದುಕೊಂಡೆನು. ಬಸವೇಶ್ವರರ ಪ್ರಗತಿಪರ ಚಿಂತನೆಯು ಪೂಜ್ಯ ಮಾತಾಜಿಯವರ ಮೂಲಕ ಹೊರರಾಜ್ಯಗಳಲ್ಲಿ ಪ್ರಚಾರವಾಗುತ್ತಿರುವುದು ನಿಜಕ್ಕೂ ಅಭಿಮಾನದ ವಿಷಯ. ಹಿಂದೆ ಒಂದು ವರ್ಷದ ಹಿಂದೆ ಸಕಲಟ್ಟಿಯಲ್ಲಿ ಬಸವ ಮಂಟಪವು ಉದ್ಘಾಟನೆಯಾದಾಗ ಪೂಜ್ಯ ಮಾತಾಜಿಯವರ ಸಾಹಿತ್ಯದ ಪರಿಚಯವಾಯಿತು. ಈ ಸಮ್ಮೇಳನದಿಂದ ಲಿಂಗಾಯತ ಧರ್ಮದ ಬಗ್ಗೆ ತಿಳಿಯಲು ಅನುಕೂಲವಾಯಿತು." ಎಂದು ಹೇಳಿದರು. ಬೆಂಗಳೂರಿನ ಹಿರಿಯ ನ್ಯಾಯವಾದಿ ಶರಣ.ಜೆ.ಜೈರಾಜ್ ಅವರು ತಮ್ಮ ಮಾತೃಭಾಷೆಯಾದ ತಮಿಳುವಿನಲ್ಲಿ ಗಣಮೇಳದ ಸಂದೇಶವನ್ನು ಭಾಷಾಂತರಿಸಿ, ಭಾಷಣ ಮಾಡಿದರು. ಕಲ್ಯಾಣವೆಂಬ ಪ್ರಣತಿಯಲ್ಲಿ ಎಂಬ ವಚನವನ್ನು ತಮಿಳಿನಲ್ಲಿ ಹಾಡಿದರು.

ವಿಶೇಷ ಆಹ್ವಾನಿತರಾಗಿ ತಮಿಳುನಾಡು ಬಸವ ಸಮಿತಿ ಕೋಶಾಧ್ಯಕ್ಷರಾದ ಕೊಯಿಮತ್ತೂರಿನ ಶರಣ. ಎಂ.ರಾಧಾಕೃಷ್ಣನ್, ಮಾನವ ಹಕ್ಕುಗಳ ಸಮಿತಿಯ ಮುಖ್ಯಾಧಿಕಾರಿಗಳಾದ ಕೊಯಿಮತ್ತೂರಿನ ಶರಣ. ಸಿ.ಆರ್. ಆರುಮುಗಂ, ವೆಲ್ಲೂರಿನ ವೀರಭದ್ರೇಶ್ವರ ದೇವಾಲಯದ ಅಧ್ಯಕ್ಷ ಶರಣ.ಸಿ.ಬಿ.ಶಿವಪ್ಪ ಭವಾನಿ-ಈರೋಡ್ ಬಸವೇಶ್ವರ ಜಂಗಮ ಟ್ರಸ್ಟಿನ ಅಧ್ಯಕ್ಷ ವಿ.ಎಸ್.ಸಿ. ಕುಮಾರ್, ಇದೇ ಸಂಸ್ಥೆಯ ಉಪಾಧ್ಯಕ್ಷರಾದ ಎಂ.ಆರ್.ಎಂ.ರಾಜಮಾಣಿಕ್ಯಂ ಆಗಮಿಸಿದ್ದರು. ಊಟಿ ರಾಷ್ಟ್ರೀಯ ಬಸವ ದಳದ ಕಾರ್ಯದರ್ಶಿ ಆರ್.ಸಂಪತ್ ಶರಣು ಸಮರ್ಪಣೆ ಮಾಡಿದರು.

ಧಾರ್ಮಿಕ ಮೌಲ್ಯಗಳ ಅಗತ್ಯ

ದಿ. 2ರಂದು ಸಂಜೆ 4 ಗಂಟೆಗೆ ಎರಡನೆಯ ಅಧಿವೇಶನ ಸಕಲಟ್ಟಿಯ ಶರಣ ಸಮೂಹದ ವಚನ ಭಜನೆಯಿಂದ, ಸಮೂಹಗಾನದಿಂದ ಆರಂಭವಾಯಿತು. ಸಕಲಟ್ಟಿ ಶರಣ-ಶರಣೆಯರು ಶರಣ.ಆರ್.ಚಂದ್ರಶೇಖರ್ ಮತ್ತು ಶರಣೆ. ಇಂದ್ರಾಣಿ ಅವರ ನೇತೃತ್ವದಲ್ಲಿ ಸುಶ್ರಾವ್ಯ ಕಂಠದಿಂದ ಸಾಮೂಹಿಕವಾಗಿ ವಚನಗಳನ್ನು ಹಾಡಿ ಎಲ್ಲರನ್ನೂ ತನ್ಮಯಗೊಳಿಸಿದರು. ಶರಣೆ. ಸಿಂಧು ಮತ್ತು ಶರಣ.ವಿ.ಎಸ್.ರೆಡ್ಡಿ ಅಂಬತ್ತೂರು ಇವರು ಗುರು ಬಸವಣ್ಣನವರ ಪೂಜೆಯನ್ನು ನೆರವೇರಿಸಿದರು. ಜಂಗಮ ಪತ್ರಿಕೆಯ ಸಂಪಾದಕರಾದ ಜಿ.ಆರ್. ಅಜಗಿರಿ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆದ ಎರಡನೆಯ ಅಧಿವೇಶನವನ್ನು ಆಂಧ್ರಪ್ರದೇಶ್ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಶರಣ ಧನರಾಜ್ ಜೀರಗೆ ಉದ್ಘಾಟಿಸಿದರು.

"ಈ ರೀತಿಯ ಸಮ್ಮೇಳನದಿಂದ ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ತಮಿಳುನಾಡುಗಳ ಲಿಂಗಾಯತ ಧರ್ಮೀಯರೆಲ್ಲರೂ ಒಂದೆಡೆ ಸೇರಿ ಭ್ರಾತೃತ್ವ ಪ್ರದರ್ಶಿಸಲು ಅನುಕೂಲವಾಗುತ್ತದೆ. ಆಂಧ್ರ ಪ್ರದೇಶ ರಾಜಧಾನಿ ಹೈದರಾಬಾದಿನಲ್ಲಿ 2ನೆಯ ಸಮ್ಮೇಳನ ಚಾರಿತ್ರಿಕ ಎಕ್ಸಿಬಿಷನ್ ಗ್ರೌಂಡಿನಲ್ಲಿ ನಡೆಯಿತು. ಸಮ್ಮೇಳನದ ನಂತರ ನಿಜವಾದ ಸಂಘಟನೆ, ಜಾಗೃತಿ ಆಯಿತು. ಹೈದರಾಬಾದ್ ನಗರದಲ್ಲೇ ಸುಮಾರು ಹದಿನೆಂಟು ರಾಷ್ಟ್ರೀಯ ಬಸವ ದಳಗಳು ಆಗಿವೆ. ಜಿಯಾಗುಡದಲ್ಲಿ ಬಸವ ಮಂಟಪ ಆಗಿ, ಗುರು ಬಸವಣ್ಣನವರ ಅಮೃತ ಶಿಲಾ ಮೂರ್ತಿಯ ಪ್ರತಿಷ್ಠಾಪನೆ ಆಗಿದೆ. ಮೊದಲು ಲಿಂಗಾಯತ ಧರ್ಮದ ಬಗ್ಗೆ, ಗುರು ಬಸವಣ್ಣನವರ ಬಗ್ಗೆ ಏನೂ ತಿಳಿದಿರಲಿಲ್ಲ. ಪೂಜ್ಯ ಲಿಂಗಾನಂದ ಗುರೂಜಿ ಮತ್ತು ಪೂಜ್ಯ ಮಾತಾಜಿಯವರಿಂದಾಗಿ ಜಾಗೃತಿ ಮತ್ತು ಸಂಘಟನೆ ಎರಡೂ ಆದವು. ಮಾತ್ರವಲ್ಲ ಬಸವಣ್ಣನವರ ಐಕ್ಯಕ್ಷೇತ್ರ ಕೂಡಲ ಸಂಗಮ ಸುಕ್ಷೇತ್ರ, ಶರಣರು ಪಾದವಿಟ್ಟ ಪುಣ್ಯಭೂಮಿ ಬಸವ ಕಲ್ಯಾಣ, ಮಹಾರಾಷ್ಟ್ರದ ಅಲ್ಲಮಗಿರಿ ಎಲ್ಲವೂ ಅಭಿವೃದ್ಧಿ ಸಾಧಿಸಿದವು. ಭಾರತದ ರಾಜಧಾನಿ ನವದೆಹಲಿಯಲ್ಲಿ ಸಹ ಮಂಟಪ ಆಯಿತು. ಇವೆಲ್ಲ ನಮ್ಮ ಸಮಾಜಕ್ಕೆ ಅಭಿಮಾನ ಉಂಟು ಮಾಡುವ ಸಂಗತಿಗಳು" ಎಂದು ಹೇಳಿದರು.

ಚೆನ್ನೈಯ ಪ್ರತಿಷ್ಠಿತ ಭಾಷಾ ವಿಜ್ಞಾನ ಸಂಸ್ಥೆಯ ತಮಿಳು ವಿಭಾಗದ ಮುಖ್ಯಸ್ಥರಾದ ಪ್ರೊ.ಡಾ||ಆರ್.ಕೆ.ಹಾಲ್ದೊರೈ ಅವರು ವಿಶೇಷ ಉಪನ್ಯಾಸ ನೀಡಿದರು. ಅವರು ಕೆಲವು ಕಾಲ ಮೈಸೂರು, ಬೆಂಗಳೂರು ಕಾಲೇಜುಗಳಲ್ಲಿ ಅಧ್ಯಾಪಕರಾಗಿದ್ದುದರಿಂದ ಕನ್ನಡ ಭಾಷೆಯ ಅಧ್ಯಯನ ಮಾಡಿದ್ದಾರೆ. ಹೀಗಾಗಿ ಸಾಮೂಹಿಕ ಪ್ರಾರ್ಥನೆ ಪುಸಕವನ್ನು ತಮಿಳಿಗೆ ಅನುವಾದಿಸಿರುವುದರಲ್ಲದೆ ಕ್ರಾಂತಿಕಾರಿ ಬಸವೇಶ್ವರ ಎಂಬ ಪುಸಕವನ್ನು ತಮಿಳಿನಲ್ಲಿ ಬರೆದು ಅಂದು ಬಿಡುಗಡೆ ಮಾಡಿಸಿದರು. ಪ್ರೊ. ಡಾ|| ಪದ್ಮನಾಭನ್ ಬಿಡುಗಡೆ ಮಾಡಿದರು. ತಮಿಳು ಲೇಖಕರಾದ ಪ್ರೊ.ವಿ.ರತ್ನಸಭಾಪತಿ ಮತ್ತು ಹಿಂದಿ ಪ್ರಚಾರ ಸಭಾದ ಜನರಲ್ ಸೆಕ್ರೆಟರಿ ಶರಣ. ಸಿ.ಎಸ್.ವಿ. ಅಣ್ಣಾಮಲೈ ಉಪನ್ಯಾಸ ನೀಡಿದರು. ಪೂಜ್ಯ ಮಾತಾಜಿಯವರು (ಆಂಗ್ಲಭಾಷೆಯಲ್ಲಿ) ಆಶೀರ್ವಚನ ನೀಡುತ್ತ, ಇಂದಿನ ಯುಗಮಾನದಲ್ಲಿ ಧಾರ್ಮಿಕ ಮತ್ತು ಅಧ್ಯಾತ್ಮಿಕ ಮೌಲ್ಯಗಳ ಅಗತ್ಯವೇನಿದೆ ಎಂಬುದನ್ನು ವಿವರಿಸಿದರು. ಬೀದರಿನ ಬಸವ ಮಂಟಪದ ಅನಾಥಾಲಯದ ಮಕ್ಕಳು "ಬಸವನ ಅವತಾರ" ಎಂಬ ಗೀತೆಯನ್ನು ನೃತ್ಯಾಭಿನಯ ಮಾಡಿ ಜನರ ಮನಸ್ಸನ್ನು ಮುದಗೊಳಿಸಿದರು. ಕುಮಾರಿ ಪ್ರಾರ್ಥನಾ ಅಕ್ಕಮಹಾದೇವಿಯ ವಚನ ಚಿಲಿಪಿಲಿ ಎಂದೋದುವ ಎಂಬುದರ ನೃತ್ಯ ಪ್ರದರ್ಶನ ಮಾಡಿದಳು. ಬಸವ ಗಂಗೋತ್ರಿ ಅನಾಥಾಲಯದ ಬಾಲಕಿ ಬಸವ ಚಂದ್ರಿಕೆ "ಬಸವನ ಬೆಳಕೆ ಎಲ್ಲಾಡಿ ಬಂದೆ" ಎಂಬುದರ ನೃತ್ಯ ಪ್ರದರ್ಶನ ನೀಡಿದಳು.

ಸಾಮೂಹಿಕ ಪ್ರಾರ್ಥನೆ

ದೇವವಾರವಾದ ಭಾನುವಾರದಂದು ವಾರದ ಸಾಮೂಹಿಕ ಪ್ರಾರ್ಥನೆ ನಡೆಯುವುದು ಪರಿಪಾಠ. ಪ್ರಾರ್ಥನಾ ಸಮಾವೇಶ ಶರಣ ಸಂಗಮವು ಪೂಜೆಯೊಡನೆ ಪ್ರಾರಂಭವಾಯಿತು. ಚೆನ್ನೈಯಲ್ಲಿ ಸಿ.ಸಿ.ಬ್ರಾಂಚ್‌ನ ಪೋಲೀಸ್ ಸಹಾಯಕ ಆಯುಕ (ಎ.ಸಿ.ಪಿ)ರಾಗಿರುವ ಶರಣ. ಆರ್.ರಾಮದಾಸ್ ಅವರು ಬಸವ ಧ್ವಜಾರೋಹಣ ಮಾಡಿದರು. ಪ್ರೊ.ಆರ್.ಕೆ.ಹಾಲ್ದೊರೈಯವರು ಭಾಷಾಂತರ ಮಾಡಿದ್ದ ಸಂಕಲ್ಪಗೀತೆ, ಧ್ವಜಗೀತೆಗಳನ್ನು ತಮಿಳಿನಲ್ಲಿಯೇ ಹಾಡಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ ಎಲ್ಲರನ್ನೂ ಆಶ್ಚರ್ಯಗೊಳಿಸಿದರು. ನಂತರ ತಮಿಳಿನಲ್ಲಿಯೇ ಸಾಮೂಹಿಕ ಪ್ರಾರ್ಥನೆ ಮಾಡಿಸಿದರು. ಸಾಮೂಹಿಕ ಪ್ರಾರ್ಥನೆಯ ಮಹತ್ವ ತಿಳಿಸುತ್ತ, ಮುಸ್ಲಿಂ ಸಮಾಜ, ಕ್ರೈಸ್ತ ಸಮಾಜದ ಶಕಿ ಇರುವುದೇ ಸಾಮೂಹಿಕ ಪ್ರಾರ್ಥನೆಯಲ್ಲಿ. ಕ್ರೈಸರು ದೊಡವರು, ಸಣ್ಣವರು ಎಂಬ ತಾರತಮ್ಯವಿಲ್ಲದೆ ಭಾನುವಾರದಂದು ಚರ್ಚಿಗೆ ಹೋಗಿ ಪ್ರಾರ್ಥಿಸುವರು. ಮುಸಲೀಮರು ದಿನ ನಿತ್ಯ 5 ಬಾರಿ ನಮಾಜ್ ಮಾಡುವುದೇ ಅಲ್ಲದೆ ಶುಕ್ರವಾರದಂದು ಸಾಮೂಹಿಕ ಪ್ರಾರ್ಥನೆ ಮಾಡುವರು. ಚೆನ್ನೈ ನಗರದ ತುಂಬಾ ಲೆಕ್ಕವಿಲ್ಲದಷ್ಟು ಚರ್ಚ್‌ಗಳನ್ನು ಮಸೀದಿಗಳನ್ನು ಕಾಣಬಹುದು. ಸಿಖ್ಖರು ಈ ಬೃಹತ್ ನಗರದಲ್ಲಿ ಅತ್ಯಂತ ಸಣ್ಣ ಸಂಖ್ಯೆಯಲ್ಲಿದ್ದಾರೆ. ಆದರೆ ಎಂಥಾ ಗುರುದ್ವಾರವನ್ನು ನಿರ್ಮಿಸಿದ್ದಾರೆ. ಲಿಂಗಾಯತರು ಸಾಕಷ್ಟು ಸಂಖ್ಯೆಯಲ್ಲಿ ಚೆನ್ನೈಯಲ್ಲಿ ಇದ್ದಾರೆ. ಕೆಲವರು ಆರ್ಥಿಕವಾಗಿ ದುರ್ಬಲರಾಗಿದ್ದರೂ ಮತ್ತೆ ಕೆಲವರು ಅತ್ಯಂತ ಉತಮ ಸ್ಥಿತಿಯಲ್ಲಿ ಇದ್ದಾರೆ. ಇಷ್ಟು ದೊಡ್ಡ ಸಮುದಾಯಕ್ಕೆ ಒಂದು ಪ್ರಾರ್ಥನಾ ಸ್ಥಳ - ಬಸವ ಮಂಟಪವಿಲ್ಲ, ಧಾರ್ಮಿಕ ಮಾರ್ಗದರ್ಶನ ಮಾಡುವ ಲಿಂಗಾಯತ ಮಠವಿಲ್ಲ. ಇದು ಅತ್ಯಂತ ವಿಷಾದನೀಯ ಸಂಗತಿಯಲ್ಲವೆ? ಎಂದು ನುಡಿದರು.

ಪೋಲೀಸ್ ಕಮೀಷನರ್ ರಾಮದಾಸ್ ಮಾತನಾಡಿ, "ಇಂದು ನಮ್ಮ ಸಮಾಜದ ಇಂಥ ಒಂದು ಭವ್ಯ ಕಾರ್ಯಕ್ರಮ ಚೆನ್ನೈಯಲ್ಲಿ ನಡೆಯುತ್ತಿರುವುದು ನನಗೆ ಅತೀವ ಹೆಮ್ಮೆ ಮತ್ತು ಆನಂದವನ್ನು ಉಂಟು ಮಾಡಿದೆ. ಪೂಜ್ಯರ ಸಾಹಿತ್ಯ ಓದಿದ ಮೇಲೆ ನನಗೆ ಶೈವ, ವೀರಶೈವ ಮತ್ತು ಲಿಂಗಾಯತಗಳ ವ್ಯತ್ಯಾಸ ಮನವರಿಕೆಯಾಯಿತು." ಎಂದು ತಮ್ಮ ಉಪನ್ಯಾಸದಲ್ಲಿ ಮೂರರ ವಿಶ್ಲೇಷಣೆ ಮಾಡಿದರು. ಚೆಂಬ್ರಂಬಾಕಮ್‌ನ ದಾನಿ ಶರಣ. ವೀರಭದ್ರಪ್ಪ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಸಕಲಟ್ಟಿ ರಾಷ್ಟ್ರೀಯ ಬಸವ ದಳದ ಶರಣ. ಆರ್.ಚಂದ್ರಶೇಖರ್ ಪ್ರಸ್ತಾವನೆ ಮಾಡಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಮಾಜದ ಮುಖಂಡ ಶರಣ.ಎಂ.ಮೋಹನ್‌ರಾಜು, ಶರಣ. ರಾಧಾಕೃಷ್ಣನ್, ಶರಣ. ಸಿ.ಆರ್.ಆರ್ಮುಗಂ, ಶರಣ. ಎನ್. ಕುಮಾರ್, ದಾನಿಗಳಾದ ಎಂ.ದೇವನ್ ಮತ್ತು ಮೈಸೂರು ಜಿಲ್ಲೆಯ ಈಗ ಶ್ರೇಷ್ಠ ಉದ್ಯಮಿಗಳಾಗಿ ಚೆನ್ನೈಯಲ್ಲಿ ನೆಲೆಸಿರುವ ಹಿರಿಯದಾನಿ ಶರಣ.ಶಿವಮೂರ್ತಿ ಅವರನ್ನು ಸತ್ಕರಿಸಲಾಯಿತು. ಭವಾನಿಯ ಶ್ರೀ ಬಸವೇಶ್ವರ ಟೆಕ್ಸ್‌ಟೈಲ್‌ನ ಶರಣ. ಮಲ್ಲಯ್ಯರಾಜು ಅಧ್ಯಕ್ಷತೆ ವಹಿಸಿದ್ದರು. ತಮಿಳುನಾಡು ಲಿಂಗಾಯತ್ ಅಸೋಸಿಯೇಷನ್‌ನ ಉಪಾಧ್ಯಕ್ಷ ಶರಣ. ಜಿ.ಆರ್.ಬಸವರಾಜನ್ ಅವರನ್ನು ಸಮಾಜ ಸೇವೆಗಾಗಿ ಸನ್ಮಾನಿಸಲಾಯಿತು. ವಯೋವೃದ್ಧರಾದ ಅವರು ಬೆನ್ನು ಮೂಳೆ ನೋವಿನಿಂದ ಕಾಂಚೀಪುರದ ಆಸ್ಪತ್ರೆಯಲ್ಲಿ ಸೇರ್ಪಡೆಗೊಂಡಿದ್ದರೂ ಸಹ ವೈದ್ಯರ ಪರವಾನಗಿ ಪಡೆದು ಸಾಮೂಹಿಕ ಪ್ರಾರ್ಥನಾ ಸಭೆಗೆ ಬಂದಿದ್ದರು. ತಮಿಳುನಾಡು ಲಿಂಗಾಯತರ ಸಂಘಟನೆಗಾಗಿ ಅವರು ಬಹಳಷ್ಟು ಶ್ರಮಿಸಿದ್ದಾರೆ.

ಸಾಮೂಹಿಕ ಇಷ್ಟಲಿಂಗಾರ್ಚನೆ

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರಿಂದ ಇಷ್ಟಲಿಂಗ ಪ್ರಾತ್ಯಕ್ಷಿಕೆ ಕಾರ್ಯಕ್ರಮ. ಅನೇಕ ಶರಣ-ಶರಣೆಯರು ತಾವೂ ಪೂಜೆಯಲ್ಲಿ ಪಾಲ್ಗೊಂಡರು. ಇಷ್ಟಲಿಂಗ ವಿಜ್ಞಾನ ಕುರಿತು ಪೂಜ್ಯರು ವಿವರಿಸಿ, ಪೂಜೆಯ ಮಹತ್ವವನ್ನು ತಿಳಿಸುವ ಈ ಕಾರ್ಯಕ್ರಮವನ್ನು ವಿಪ್ರೊ ಅಧಿಕಾರಿಗಳಾದ ಶರಣ.ಹೆಚ್.ಎಸ್.ಚನ್ನಬಸವಣ್ಣನವರು ಉದ್ಘಾಟಿಸಿದರು. ಹಿಂದು ಧರ್ಮದಿಂದ ಲಿಂಗಾಯತವು ಹೇಗೆ ಬೇರೆ, ಹಿಂದು ಧರ್ಮದೊಳಗಣ ಒಂದು ಜಾತಿಯಲ್ಲ ಲಿಂಗಾಯತವು ಹೇಗೆ ಸ್ವತಂತ್ರ ಧರ್ಮ ಎಂಬುದನ್ನು ತಾರ್ಕಿಕವಾಗಿ, ವೈಜ್ಞಾನಿಕವಾಗಿ ವಿವರಿಸಿ ಉಪನ್ಯಾಸ ನೀಡಿದರು. ಸಮ್ಮೇಳನಕ್ಕೆ ಉದಾರ ದೇಣಿಗೆ ನೀಡಿದ ಶರಣ.ಕೆ.ಎಲ್.ಪ್ರಕಾಶಂ ಮತ್ತು ಶರಣ. ಸಂಗಮೇಶ್ ಸೋದರರು ಆರಂಭದಲ್ಲಿ ಬಸವ ಗುರು ಪೂಜೆಯನ್ನು ನೆರವೇರಿಸಿದರು. ಹೈದರಾಬಾದ್ ಬಸವ ಮಂಟಪದ ವ್ಯವಸ್ಥಾಪಕರಾದ ಪೂಜ್ಯ ಶ್ರೀ ಪ್ರಭುಲಿಂಗ ಸ್ವಾಮಿಗಳು ಬಸವ ಧ್ವಜಾರೋಹಣವನ್ನು ನೆರವೇರಿಸಿದರು. ಲಿಂಗಾಯತ ಧರ್ಮ ಮಹಾಸಭಾದ ರಾಜ್ಯ ಉಪಾಧ್ಯಕ್ಷ ಬೀದರಿನ ಶರಣ. ಶಿವರಾಜ್ ಪಾಟೀಲ್, ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವ ದಳದ ಅಧ್ಯಕ್ಷ ಶರಣ. ವೀರಣ್ಣ ಕೊರ್ಲ್ವಳ್ಳಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಪೂಜಾ ನಂತರ ದೀಕ್ಷಾ ಕಾರ್ಯಕ್ರಮ ನೆರವೇರಿತು.

ನಂತರ ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಅನಾಥಾಶ್ರಮದ ಬಾಲಕ - ಬಾಲಕಿಯರಿಂದ ಶರಣ. ಸಂತೋಷ ಕುಮಾರ್ ಮತ್ತು ಶರಣೆ.ಪ್ರಾರ್ಥನಾಳ ನೇತೃತ್ವದಲ್ಲಿ "ಎಲ್ಲರಿಗೆ ಬೆಲ್ಲಾದ ಕಲ್ಯಾಣ ಬಸವಯ್ಯ" ನೃತ್ಯ ರೂಪಕವು ಪ್ರದರ್ಶಿತವಾಯಿತು. ಗುರು ಬಸವಣ್ಣನವರ ಸಮಗ್ರ ಜೀವನ ಚರಿತ್ರೆ, ಕಲ್ಯಾಣ ಕ್ರಾಂತಿಯ ಕಥೆಯನ್ನು ನೋಡಿ ಎಲ್ಲರೂ ಬಹಳ ಸಂತೋಷಪಟ್ಟರು, ಪ್ರಭಾವಿತರಾದರು. ಮಕ್ಕಳಿಗೆ ಉದಾರವಾಗಿ ಕೊಡುಗೆಯನ್ನು ನೀಡಿದರು.

876ನೆಯ ಬಸವ ಜಯಂತಿ ಮತ್ತು ಸಮಾರೋಪ ಸಮಾರಂಭ

ತಮಿಳುನಾಡು ಲಿಂಗಾಯತ ಅಸೋಸಿಯೇಷನ್‌ನವರು ಪ್ರತಿವರ್ಷವೂ ಬಸವ ಜಯಂತಿ ಆಚರಿಸುವ ಪರಿಪಾಠ ಇಟ್ಟುಕೊಂಡಿದ್ದಾರೆ. ಈ ವರ್ಷ ಸಮ್ಮೇಳನ ಸಮಿತಿಯಿಂದಲೇ ದೊಡ್ಡ ಪ್ರಮಾಣದಲ್ಲಿ ಆಚರಿಸುವ ಯೋಜನೆ ಇದ್ದುದರಿಂದ ಅವರೂ ಇದರಲ್ಲೇ ಭಾಗಿಗಳಾದರು. ಸೋಮವಾರ ದಿ. 4-5-09ರಂದು 876ನೆಯ ಬಸವ ಜಯಂತಿ ಆಚರಿಸಲಾಯಿತು. ಬಸವ ಪೂಜೆಯ ನಂತರ ಸಮ್ಮೇಳನದ ಸಂಯೋಜಕರಾದ ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು ಪ್ರಾಸ್ತಾವಿಕವಾಗಿ ಮಾತನಾಡಿದರು.

ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಉರಿಗಂ ಊರಿನ ನೂರೊಂದು ಸ್ವಾಮಿಗಳ ಗದ್ದುಗೆ ಮಠದ ಪೂಜ್ಯ ಶ್ರೀ ಚನ್ನಬಸವದೇಶೀಕೇಂದ್ರ ಸ್ವಾಮಿಗಳು ಧ್ವಜಾರೋಹಣ ಮಾಡಿದರು. ಮುಂಬಯಿಯ ಪ್ರಸಿದ್ಧ ಬಿಲ್ಡರ್ಸ್, 2008ನೇ ಇಸವಿಯ ರಾಷ್ಟ್ರ ಮಟ್ಟದ ರಾಜೀವ್ ಗಾಂಧಿ ಕಟ್ಟಡ ನಿರ್ಮಾಣ ಪ್ರಶಸ್ತಿ ಪಡೆದ ಆರ್.ಬಿ.ಹೆಬ್ಬಳ್ಳಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಸುಪ್ರಸಿದ್ಧ ಲೌವ್-ಓ ಕೋಲ್ಡ್ರಿಂಕ್ಸ್ ತಯಾರಿಕಾ ಕಾರ್ಖಾನೆಯ ಮಾಲಿಕರಾದ ಶರಣ.ನಾಗರಾಜ್, ಇವರು ತಮಿಳುನಾಡು ಲಿಂಗಾಯತ್ ಅಸೋಸಿಯೇಷನ್, ಚೆನ್ನೈಯ ಉಪಾಧ್ಯಕ್ಷರೂ ಅಹುದು. ಸಭಾಧ್ಯಕ್ಷತೆಯನ್ನು ವಹಿಸಿದ್ದರು. ತಮಿಳು ಪೆರವೈ ಅಧ್ಯಕ್ಷರಾದ ಕಲೈಯರಸಿ ನಟರಾಜನ್ ಉಪನ್ಯಾಸ ಮಾಡಿ ತಮಿಳುನಾಡಿನ ದಾರ್ಶನಿಕರು ಮತ್ತು ಶರಣರ ಬಗ್ಗೆ ತೌಲನಿಕವಾಗಿ ವಿವರಗಳನ್ನು ನೀಡಿದರು. ಆರ್.ಚಂದ್ರಶೇಖರ್ ತಮಿಳಿನಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಬೆಳಗಾಂ ಬಸವ ದಳದ ಕೆ.ಬಸವರಾಜ್, ಬೀದರ್ ಲಿಂಗಾಯತ ಸಮಾಜದ ಅಧ್ಯಕ್ಷರು ಕುಶಲರಾವ್ ಪಾಟೀಲ್, ಉಪಾಧ್ಯಕ್ಷ ಗಂಗಶೆಟ್ಟಿ ಪಾಟೀಲ್, ಗುಲಬರ್ಗಾ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ರೇವಣಪ್ಪ ಹೆಗ್ಗಣೆ ಅವರನ್ನು ಸತ್ಕರಿಸಲಾಯಿತು.

ಸಮ್ಮೇಳನದ ರೂಹಾರಿಗಳು, ಮಾರ್ಗದರ್ಶಕರೂ ಆದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರಿಗೆ ಸಂತಸದಿಂದ ಮಲ್ಲಿಗೆ ಹೂವಿನಿಂದ ಪುಷ್ಪವೃಷ್ಟಿ ಮಾಡಿ ಶರಣ ಬಂಧುಗಳು ಹರ್ಷಿಸಿ, ಅಭಿನಂದನೆ ಸಲ್ಲಿಸಿದರು. ಬಸವ ಮಂಗಲದೊಡನೆ ಕಾರ್ಯಕ್ರಮ ಮಂಗಲಗೊಂಡಿತು. ಮುಂದಿನ ವರ್ಷದ ಸಮ್ಮೇಳನವನ್ನು ಕೊಯಿಮುತ್ತೂರಲ್ಲಿ ಮಾಡಲು ಒಪ್ಪಿಗೆ ನೀಡಬೇಕೆಂದು ಮುಖಂಡರು ನಿವೇದಿಸಿಕೊಂಡರು.

ಸಮ್ಮೇಳನದಲ್ಲಿ ಕೈಗೊಂಡ ಮೂರು ನಿರ್ಣಯಗಳು

1. ತಮಿಳುನಾಡು ಸರ್ಕಾರವು ಲಿಂಗಾಯತ ಜಂಗಮರನ್ನು ಮಾತ್ರ ಅತ್ಯಂತ ಹಿಂದುಳಿದ ವರ್ಗಕ್ಕೆ ಸೇರಿಸಿ ಸವಲತ್ತುಗಳನ್ನು ನೀಡಿದೆ. ಇದು ಸಂತೋಷದ ಸಂಗತಿ. ಲಿಂಗಾಯತರ ಇತರ ಪಂಗಡಗಳವರು ಸಹ ಅತ್ಯಂತ ದಯನೀಯ ಸ್ಥಿತಿಯಲ್ಲಿ ಇರುವುದರಿಂದ ಲಿಂಗಾಯತರೆಲ್ಲರನ್ನು ಅತಿ ಹಿಂದುಳಿದ ವರ್ಗ (Most backward class)ಕ್ಕೆ ಸೇರಿಸಲು ಸರ್ಕಾರಕ್ಕೆ ಮನವಿ ಸಲ್ಲಿಸಲು ನಿರ್ಣಯಿಸಲಾಯಿತು.
2. ಚೆನ್ನೈ ನಗರದಲ್ಲಿ ಲಿಂಗಾಯತ ಸಮಾಜವನ್ನು ಸಂಘಟಿಸಲು ಮತ್ತು ಧಾರ್ಮಿಕ ತರಬೇತಿ ನೀಡಲು ಲಿಂಗಾಯತ ಮಠ ಆಗಬೇಕು ಎಂದು ನಿರ್ಣಯಿಸಲಾಯಿತು.
3. ಲಿಂಗಾಯತ ಧರ್ಮವು ಸ್ವತಂತ್ರ ಧರ್ಮ, ಜನಗಣತಿಯಲ್ಲಿ ಪ್ರತ್ಯೇಕ ಅಂಕಣ ಬೇಕು. 2011ನೆಯ ಇಸವಿಯ ಜನಗಣತಿಯಲ್ಲಿ ಲಿಂಗಾಯತರ ನಿಖರವಾದ ಸಂಖ್ಯೆ ಸಿಗುವಂತೆ ಆಗಲು ನವದೆಹಲಿಯ ಜನಗಣತಿಯ ಅತ್ಯುನ್ನತ ಅಧಿಕಾರಿಗಳಿಗೆ, ತಮಿಳುನಾಡಿನ ರಾಜ್ಯದ ಅಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಲು ನಿರ್ಧರಿಸಲಾಯಿತು.

ಮೂರು ದಿವಸಗಳ ಸಮ್ಮೇಳನ ಅಚ್ಚುಕಟ್ಟಾಗಿತ್ತು. ಹಿಂದಿ ಪ್ರಚಾರ ಸಭಾದ ಹಾಲ್‌ದಲ್ಲಿ ಕಾರ್ಯಕ್ರಮ, ಇತರೆ ಮೂರು ಕಲ್ಯಾಣ ಮಂಟಪಗಳಲ್ಲಿ ವಾಸ್ತವ್ಯ, ಶುಚಿ ಮತ್ತು ರುಚಿಯಾದ ಪ್ರಸಾದ ವ್ಯವಸ್ಥೆ ಎಲ್ಲರನ್ನೂ ಸಂಪ್ರೀತ ಗೊಳಿಸಿದವು. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪ್ರದರ್ಶಿತವಾದ ಬೆಂಗಳೂರಿನ ಕುಮಾರಿ ನಿಸರ್ಗ ನಾಗರಾಜು ಅವರ ನೃತ್ಯ ವಿಶೇಷ ಶೋಭೆ ನೀಡಿತು. ಧಾರವಾಡದ ನೃತ್ಯಪಟು ಸಂತೋಷ್‌ಕುಮಾರ್, ಬೀದರಿನ ಪ್ರಾರ್ಥನಾ, ಬಸವ ಗಂಗೋತ್ರಿಯ ಬಸವ ಚಂದ್ರಿಕೆಯರ ನೃತ್ಯಗಳು ಶರಣ ಸಂಸ್ಕೃತಿಯ ದರ್ಶನ ಮಾಡಿಸಿದವು. ಒಟ್ಟಾರೆ ಚೆನ್ನೈ ಸಮ್ಮೇಳನ ನೆನಪಿನಾಳದಲ್ಲಿ ಉಳಿಯುವಂತೆ ಆಯಿತು.

ಅದ್ದೂರಿ ಮೆರವಣಿಗೆ

ಸಮ್ಮೇಳನಕ್ಕೆ ಕಿರೀಟವಿಟ್ಟಂತೆ ಮೆರವಣಿಗೆ ನಡೆಯಿತು. ಚೆನ್ನೈಯ ನಗರದ ಪ್ರಮುಖ ರಸ್ತೆಯಲ್ಲಿ, ಪಾಂಡಿ ಬಜಾರ್ ಎಂಬ ಸುಪ್ರಸಿದ್ಧ ಮಾರುಕಟ್ಟೆಯ ಮುಖ್ಯ ರಸ್ತೆಯಲ್ಲಿ ಗುರು ಬಸವ ಭಾವಚಿತ್ರ ಹೊತ್ತ ಅಲಂಕೃತ ವಾಹನಗಳು, ಸುಂದರವಾದ ಭವ್ಯ ಕುದುರೆಗಳನ್ನು ಕಟ್ಟಿದ ಸಾರೋಟಿನಲ್ಲಿ ಬಸವ ಧರ್ಮ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಜಗದುರು ಮಾತೆ ಮಹಾದೇವಿ ಮತ್ತು ಜಗನ್ಮಾತಾ ಅಕ್ಕಮಹಾದೇವಿ ಪೀಠಾಧ್ಯಕ್ಷೆ ಪೂಜ್ಯ ಶ್ರೀ ಮಾತೆ ಗಂಗಾದೇವಿಯವರ ಮೆರವಣಿಗೆ ಸಾಗಿತು. ಸಕಲಟ್ಟಿ ಶರಣರು ಮೆರವಣಿಗೆಯುದ್ದಕ್ಕೂ ಹಾಡಿ ನರ್ತಿಸಿದರು. ಬೀದರ್ ರಾಷ್ಟ್ರೀಯ ಬಸವ ದಳದ ಕಾರ್ಯಕರ್ತರು, ಅನಾಥಾಲಯದ ಮಕ್ಕಳು ರಸ್ತೆಗಳಲ್ಲಿ ಕೋಲಾಟ ಪ್ರದರ್ಶಿಸಿದರು. ಕನ್ನಡದಲ್ಲಿ ಘೋಷಣೆ, ಬಸವ ಮಂತ್ರದ ಪರಿಮಳ ಸುತ್ತಲೂ ಹರಡಿತು. ಮಲ್ಲಿಗೆ ಹೂವಿನ ಸುರಿಮಳೆಯನ್ನು ಚೆನ್ನೈ ನಗರದಲ್ಲಿ ಕಾಣಬಹುದು. ಜನರು ಯಥೇಚ್ಛವಾಗಿ ನೂರಾರು, ಸಾವಿರಾರು ರೂಪಾಯಿ ಬೆಲೆ ಬಾಳುವ ದೊಡ್ಡ ದೊಡ್ಡ ಮಲ್ಲಿಗೆ ಹಾರ, ಸುಗಂಧರಾಜ ಹಾರಗಳನ್ನು ಪೂಜ್ಯರಿಗೆ ಹಾಕುತ್ತಿದ್ದರು. ಪಾಂಡಿ ಬಜಾರದ ಹೂವಿನ ಅಂಗಡಿಗಳವರು ಹೂ ಮಾಲೆಗಳೊಡನೆ ಧಾವಿಸಿ ಬಂದು ಪೂಜ್ಯರಿಗೆ ಹಾಕಿ ಪ್ರಸಾದ ಪಡೆಯುತ್ತಿದ್ದ ದೃಶ್ಯ ಕಣ್ಣಿಗೆ ಹಬ್ಬವನ್ನು ಉಂಟು ಮಾಡುತ್ತಿತ್ತು. ಶರಣ-ಶರಣೆಯರ ಸಾಲು ಒಂದು ಕಿಲೋಮೀಟರ್ ಉದ್ದವಿತ್ತು. ಬಿಸಿಲಿನ ತಾಪ ಮಕ್ಕಳಿಗೆ ಆಗದಿರಲೆಂದು ಧರ್ಮಪಿತ ಬಸವಣ್ಣನವರು ಸೂರ್ಯನಿಗೆ ಮೋಡ ಮುಸುಕಿಸಿ, ಗಿಡಗಳಿಂದ ತಂಗಾಳಿಯ ಚಾಮರ ಹಾಕಿಸುತ್ತಿದ್ದರು. ದಾರಿಯಲ್ಲಿ ಸಮ್ಮೇಳನ ಸಮಿತಿ ವತಿಯಿಂದ ತಣ್ಣನೆಯ ಜ್ಯೂಸ್ ವಿತರಿಸಲಾಗುತ್ತಿತ್ತು. ಮೆರವಣಿಗೆಯಲ್ಲಿ ತಮಿಳುನಾಡಿನ ಲಿಂಗಾಯತ ಸಮಾಜದ ಪ್ರಮುಖರು ಭಾಗವಹಿಸಿದ್ದರು. ಅವರಿಗೆ ಹೆಮ್ಮೆ ಮತ್ತು ಹಿಗ್ಗು. ನಮ್ಮ ಸಮಾಜಕ್ಕೆ ಇದು ಕಿರೀಟವಿಟ್ಟಂತೆ. ಇಂತಹ ಮೆರವಣಿಗೆ ಯಾವಾಗಲೂ ಆಗಿಲ್ಲ ಎಂದು ಉದ್ಗರಿಸಿದರು.

ಕನ್ನಡದಲ್ಲಿ ನಮ್ಮ ಘೋಷಣೆ ಕೂಗುವಾಗ ನಮ್ಮರೊಬ್ಬರು, "ಬೇಡ್ರಿ , ಕನ್ನಡ - ತಮಿಳು ಗಲಾಟೆ ಇರುತ್ತೆ ಮತ್ತು ಗಲಾಟೆಗೆ ಕಾರಣವಾಗಬಹುದು." ಎಂದರಂತೆ. ಇದನ್ನು ಕೇಳಿಸಿಕೊಂಡ ಕನ್ನಡ ತಿಳಿಯುವ ತಮಿಳರೊಬ್ಬರು ಹೇಳಿದರಂತೆ, "ಅದು ರಾಜಕೀಯ. ಇದು ಧಾರ್ಮಿಕ ಮೆರವಣಿಗೆ ಧರ್ಮವು ಭಾಷೆಗೆ ಅತೀತ. ತೊಂದರೆಯಿಲ್ಲ ಕನ್ನಡದಲ್ಲೇ ಘೋಷಣೆ ಮಾಡಿರಿ" ಎಂದರು.

4 ಗಂಟೆಗೆ ಆರಂಭವಾದ ಮೆರವಣಿಗೆ 7 ಗಂಟೆಗೆ ಮುಗಿದಾಗ ಕಾಲುಗಳು, ಶರೀರ ದಣಿದಿದ್ದರೂ ಮನಸು ಮಾತ್ರ ಹರ್ಷೋಲ್ಲಾಸದಿಂದ ಹಾಡುತ್ತಿತ್ತು. ಪೂಜ್ಯ ಮಾತಾಜಿ ಮತ್ತಾವಾಗ ಇಂಥ ಸಮ್ಮೇಳನ ಏರ್ಪಡಿಸುವರೋ ಎಂದು ಭಕ್ತರು ಕಾಯುವಂತೆ ಆಗಿದೆ.

ವರದಿ: ಕರಿಬಸಪ್ಪ ಕೋರಿಶೆಟ್ಟರ್, ನ್ಯಾಯವಾದಿ, ಧಾರವಾಡ

ವಿದ್ಯಾರ್ಥಿಗಳಿಗೊಂದು ಬುದ್ಧಿ ಮಾತು

-ಸಚ್ಚಿದಾನಂದ ಚಟನಳ್ಳಿ

ವರ್ಷಗಳ ಹಿಂದೆ ಕಾಲೇಜು ಜೀವನ ಪೂರೈಸಿ ವೃತ್ತಿ ಜೀವನಕ್ಕೆ ಕಾಲಿಟ್ಟ ನನಗೆ ಆ ಹಳೆಯ ನೆನಪುಗಳು ಈಗಲೂ ಮಾಸಿಲ್ಲ. ಮಾತ್ರವಲ್ಲ ಕಾಲೇಜು ಜೀವನದ ಮಹತ್ವದ ಬಗ್ಗೆ ದಿನದಿಂದ ದಿನಕ್ಕೆ ಹೆಚ್ಚು ಅರಿವಾಗುತ್ತಿದೆ. ವಿದ್ಯೆಗೆ ಸರಿ ಸಮವಾದ ಸಂಪತ್ತು ಈ ಜಗತ್ತಿನಲ್ಲಿ ಮತ್ತೊಂದಿಲ್ಲ. ಅದು ಮನುಷ್ಯನಿಗೆ ಅರಿವಿನ ಕಣ್ಣನ್ನು ನೀಡಿ ಬದುಕುವ ದಾರಿ ಕಲಿಸಿ ಕೊಡುತ್ತದೆ. ಸರಿಯಾದ ರೀತಿಯಲ್ಲಿ ಶಿಕ್ಷಣ ಪಡೆಯದಿದ್ದರೆ ಅದುವೇ ಅವನತಿಗೂ ಕಾರಣವಾಗುತ್ತದೆ. ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ನೂರಾರು ಕನಸುಗಳನ್ನು ಹೊತ್ತು ಕಾಲೇಜಿಗೆ ಹೋಗುವ ನಾವು ನಮ್ಮ ಮೂಲ ಗುರಿ ಮರೆಯಬಾರದು. ಸಮುದ್ರದ ಆಳದಲ್ಲಿರುವ ಮುತ್ತು ರತ್ನಗಳನ್ನು ತರಲು ಹೊರಟವರು ಸಮುದ್ರದ ದಡದಲ್ಲಿರುವ ಕಪ್ಪೆ ಚಿಪ್ಪು ಶಂಖಗಳನ್ನು ತೆಗೆದುಕೊಂಡು ತೃಪ್ತಿ ಹೊಂದಿ, ಮುತ್ತು ರತ್ನಗಳನ್ನು ಮರೆತಂತೆ ಆಗಬಾರದು ನಮ್ಮ ಜೀವನ. ನಮ್ಮ ಮೂಲ ಗುರಿ ಶಿಕ್ಷಣ ಪಡೆಯುವುದು. ಆ ಮೂಲಕ ಉನ್ನತ ಹುದ್ದೆ ಪಡೆದು ತನ್ನ ಹಾಗೂ ಕುಟುಂಬದ ಏಳಿಗೆ ಹೊಂದಿ ರಾಜ್ಯ ಹಾಗು ರಾಷ್ಟ್ರದ ಹಿತಕ್ಕಾಗಿ ದುಡಿಯುವುದಾಗಿದೆ. ಕಾಲೇಜು ಜೀವನ ಪ್ರವೇಶಿಸುತ್ತಿದ್ದಂತೆಯೇ ಅನೇಕ ಆಸೆ ಆಮಿಷಗಳು ನಮ್ಮನ್ನು ಕೈಮಾಡಿ ಕರೆಯುತ್ತವೆ. ಕಾಲೇಜು ಜೀವನದ ಮಹತ್ವ ಅರಿತುಕೊಂಡು ಅಭ್ಯಾಸ ಮಾಡಿದರೆ ಅದು ನಮ್ಮನ್ನು ರೂಪುಗೊಳಿಸುವ ಟಂಕಸಾಲೆಯಾಗುತ್ತದೆ, ಮರೆತರೆ ಅದುವೇ ಮಾಯಾಲೋಕವಾಗಿ ಅವನತಿಗೂ ಕಾರಣವಾಗುತ್ತದೆ.

ಕಾಲೇಜು ವಿದ್ಯಾರ್ಥಿಗಳನ್ನು ಬಲೆಗೆ ಬೀಳಿಸಲು ಪ್ರಯತ್ನ ಮಾಡುವ ಆಮಿಷಗಳಲ್ಲಿ, ಪ್ರೀತಿ-ಪ್ರೇಮ ಮತ್ತು ಸಿನೆಮಾ, ಮುಖ್ಯವಾದವುಗಳು. ಈ ಜಗತ್ತಿನಲ್ಲಿ ಕೆಲವೊಂದು ವಸ್ತುಗಳು ಹೆಚ್ಚು ಪ್ರಯತ್ನವಿಲ್ಲದೆಯೇ ಸಿಗುತ್ತವೆ. ಮತ್ತೆ ಕೆಲವು ಸತತ ಪ್ರಯತ್ನ ಮತ್ತು ಕಠಿಣವಾದ ಪರಿಶ್ರಮದಿಂದ ಮಾತ್ರ ಸಿಗುತ್ತವೆ. ಹೆಂಡತಿ/ಗಂಡ ಸಿಗಲಿಕ್ಕೆ ನಾವು ಹೆಚ್ಚು ಪ್ರಯತ್ನ ಮಾಡಬೇಕಾಗಿಲ್ಲ. ಒಂದು ವಯಸ್ಸಿಗೆ ಬಂದ ಮೇಲೆ, ತಾಯಿ-ತಂದೆ, ಬಂಧು-ಬಳಗದವರು ಸೂಕ್ತವಾದ ವಧು/ವರ ನೋಡಿ ಮದುವೆ ಮಾಡುತ್ತಾರೆ. ಆದರೆ ಒಂದು ಒಳ್ಳೆಯ ನೌಕರಿ ಸಿಗಬೇಕಾದರೆ ಪ್ರಯತ್ನ ಮಾತ್ರವಲ್ಲ, ಸತತ ಪರಿಶ್ರಮದಿಂದ ಮಾತ್ರ ಸಾಧ್ಯ. ಆದರೆ ಇಂದು ಕೆಲವು ಕಾಲೇಜಿನ ಯುವಕ ಯುವತಿಯರು ಹುಡುಗಿಯರ/ಹುಡುಗರ ಪ್ರೀತಿ ಗಳಿಸಿಕೊಳ್ಳಲಿಕ್ಕೆ ಮಾಡುವ ಹರಸಾಹಸ ನೋಡಿ ವ್ಯಥೆ ಎನಿಸುತ್ತದೆ. ಅದೇ ಪ್ರಯತ್ನ ಒಂದು ವೇಳೆ ತಮ್ಮ ವಿದ್ಯಾಭ್ಯಾಸದಲ್ಲಿ ಮಾಡಿದರೆ ಖಂಡಿತವಾಗಿಯೂ ಉನ್ನತ ಸ್ಥಾನಕ್ಕೆ ಹೋಗಲು ಸಾಧ್ಯವಿದೆ.

ಶಿಕ್ಷಣವೆಂದರೆ ಹಾಲು ಇದ್ದ ಹಾಗೆ, ಹಣ ಮೊಸರು ಇದ್ದ ಹಾಗೆ, ಕೀರ್ತಿ ಬೆಣ್ಣೆ ಇದ್ದ ಹಾಗೆ, ಹುಡುಗಿಯರ/ಹುಡುಗರ ಪ್ರೀತಿ ತುಪ್ಪವಿದ್ದ ಹಾಗೆ, ಇನ್ನಿತರ ಆಕರ್ಷಣೆಗಳು ಮಜ್ಜಿಗೆ ಇದ್ದ ಹಾಗೆ. ಆದರೆ ಶಿಕ್ಷಣ ಎನ್ನುವ ಹಾಲಿನಲ್ಲಿ ಈ ಎಲ್ಲವೂ ಅಡಕವಾಗಿವೆ. ಅದಕ್ಕಾಗಿ, ಮೊಸರು, ಬೆಣ್ಣೆ ತುಪ್ಪ, ಮಜ್ಜಿಗೆ ಒಂದೊಂದಕ್ಕೇ ಪ್ರಯತ್ನ ಮಾಡದೆ ಹಾಲಿಗಾಗಿ ಪ್ರಯತ್ನ ಮಾಡುವುದು ಒಳ್ಳೆಯದಲ್ಲವೇ? ನಂತರ ಉಳಿದವುಗಳೆಲ್ಲ ತಾನಾಗಿಯೇ ಬರುತ್ತವೆ. ಉನ್ನತ ಶಿಕ್ಷಣ ಪಡೆದು, ಒಳ್ಳೆಯ ಹುದ್ದೆ ಅಲಂಕರಿಸಿದರೆ ಸೂಕ್ತವಾದ ವಧುವೇ ಮನೆ ತುಂಬುತ್ತಾಳೆ. ಹುಡುಗಿಯರಿಗೆ ತಮಗೆ ಬೇಕಾದ ಹುದ್ದೆಯಲ್ಲಿರುವ ವರ ಸಿಗುತ್ತಾನೆ. ಹಣ, ಸುಖ, ಸಂಪತ್ತು, ಕೀರ್ತಿಯಂತೂ ಖಂಡಿತವಾಗಿಯೂ ಬಂದೇ ಬರುತ್ತದೆ. ಅದಕ್ಕಾಗಿ ಪ್ರೀತಿ ಪ್ರೇಮಗಳಿಂದ ಎಚ್ಚರದಿಂದಿದ್ದು, ಮೊದಲು ತಾವು ಮೂಲಗುರಿಯೆನ್ನುವ

ಸಮುದ್ರದಲ್ಲಿರುವ ಮುತ್ತು ರತ್ನಗಳನ್ನು (ಶಿಕ್ಷಣ ಮತ್ತು ಉದ್ಯೋಗ) ಪಡೆಯುವ ಕಡೆಗೆ ನಮ್ಮ ಗಮನವಿರಬೇಕು. ಈ ಪ್ರೀತಿ ಪ್ರೇಮಗಳೆನ್ನುವ ಕಪ್ಪೆ ಚಿಪ್ಪು ಶಂಖಗಳನ್ನು ಪಡೆದು ತೃಪ್ತರಾಗಬಾರದು.

ಕುಸುಮ ಒಬ್ಬ ಪ್ರತಿಭಾವಂತ ವಿದ್ಯಾರ್ಥಿನಿ ಎಸ್.ಎಸ್.ಎಲ್.ಸಿ. ನಂತರ ಡಿಪ್ಲೋಮಾ ಕೋರ್ಸಿಗೆ ಪ್ರವೇಶ ಪಡೆದಳು. ಆ ವರ್ಷದ ಕಾಲೇಜಿನ ವಾರ್ಷಿಕೋತ್ಸವದಲ್ಲಿ 'ಚಾಂದಿನಿ ಚಾಂದಿನಿ' ಎನ್ನುವ ಹಾಡಿಗೆ ನೃತ್ಯ ಮಾಡಿದಳು. ಅಂದಿನಿಂದ ಆ ಕಾಲೇಜಿನ ಹುಡುಗರು ಅವಳನ್ನು ಚಾಂದಿನಿ ಎಂದು ಚುಡಾಯಿಸತೊಡಗಿದರು. ಇದರಿಂದ ಕುಸುಮಾಗೆ ತುಂಬಾ ಕಳವಳವಾಗಲು ಆರಂಭಿಸಿತು. ದ್ವಿತೀಯ ವರ್ಷಕ್ಕೆ ಹೆದರಿ ಕಾಲೇಜಿಗೆ ಬರಲೇ ಇಲ್ಲ. ಈಗವಳ ಬದುಕು ಉನ್ನತ ಶಿಕ್ಷಣವಿಲ್ಲದೇ ಕೊರಗುವಂತಾಗಿದೆ. ಅದಕ್ಕಾಗಿ ವಿದ್ಯಾರ್ಥಿ ಮಿತ್ರರೇ ಇನ್ನೊಬ್ಬರ ಬಗ್ಗೆ ಆಡಿಕೊಳ್ಳುವುದು, ಒಬ್ಬರನ್ನು ಚುಡಾಯಿಸುವುದು ಪಾಪದ ಕೆಲಸ, ದಯವಿಟ್ಟು ಇಂಥವನ್ನು ಮಾಡಬೇಡಿರಿ.

ಗೀತಾ ಕೂಡ ಪ್ರತಿಭಾವಂತ ವಿದ್ಯಾರ್ಥಿನಿ, ಪ್ರಥಮ ವರ್ಷದ ಬಿ.ಎಸ್‌ಸಿ. ಪರೀಕ್ಷೆ ಬರೆದಿದ್ದಾಳೆ. ಅಂದು ಫಲಿತಾಂಶ ಕೂಡ ಪ್ರಕಟವಾಗಿದೆ. ಆದರೆ ಅವಳ ಪ್ರತಿಭೆಯ ಬಗ್ಗೆ ಅವಳಿಗೇ ವಿಶ್ವಾಸವಿರಲಿಲ್ಲ. ಅದಕ್ಕಾಗಿ ಅವಳು ಫಲಿತಾಂಶ ನೋಡಲು ಹೋಗಲೇ ಇಲ್ಲ. ಅವಳ ಒಬ್ಬ ಗೆಳೆಯ ಫೋನ್ ಮಾಡಿ ತಮಾಷೆಗಾಗಿ ನೀನು ಅನುತ್ತೀರ್ಣ (Fail) ಆಗಿದ್ದೀಯ ಎಂದ. ಅವಳಿಗೆ ಮುಂದಿನ ಮಾತುಗಳನ್ನು ಕೇಳಿಸಿಕೊಳ್ಳುವಷ್ಟು ತಾಳ್ಮೆ ಇರಲಿಲ್ಲ. ಫೋನ್ ಇಟ್ಟು ಅಡಿಗೆ ಮನೆಗೆ ಹೋಗಿ ಸೀಮೆಎಣ್ಣೆ ಸುರಿದುಕೊಂಡು ಮೈಗೆ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಳು. ವಾಸ್ತವದಲ್ಲಿ ಅವಳು ಪ್ರಥಮವರ್ಗದಲ್ಲಿ ಪಾಸಾಗಿದ್ದಳು. ಫಲಿತಾಂಶದಂಥಹ ಭಾವನಾತ್ಮಕ ವಿಷಯದೊಂದಿಗೆ ಎಂದಿಗೂ ತಮಾಷೆ ಮಾಡಬಾರದು. ಎರಡನೆಯದಾಗಿ ವಿದ್ಯಾರ್ಥಿಗಳು ಎಂದಿಗೂ ಆತ್ಮಹತ್ಯೆಯಂಥ ಘೋರ ಕೃತ್ಯಕ್ಕೆ ಇಳಿಯಬಾರದು. ಆತ್ಮಬಲ ಬೆಳೆಸಿಕೊಳ್ಳಬೇಕು. ಕೆಲವೊಮ್ಮೆ ತಾಂತ್ರಿಕ ಕಾರಣಗಳಿಂದಾಗಿ ನೀವು ಪಾಸಾಗಿದ್ದರೂ ಫೇಲ್ ಎಂದು ಫಲಿತಾಂಶ ಬಂದಿರುತ್ತದೆ. ಇಂಥದನ್ನೆಲ್ಲ ಮರು ಪರಿಶೀಲಿಸಬೇಕು. ಯಾವುದಕ್ಕೂ ಆತ್ಮಹತ್ಯೆಯೇ ಪರಿಹಾರ ಅಲ್ಲ.

ವೀರೇಶ ಒಬ್ಬ ಪ್ರತಿಭಾವಂತ ವಿದ್ಯಾರ್ಥಿ, ಆದರೆ 10ನೇ ತರಗತಿಯಲ್ಲಿ ಗಣಿತ ವಿಷಯದಲ್ಲಿ ಅನುತ್ತೀರ್ಣನಾದ ಫಲಿತಾಂಶ ನೋಡಿ ಮನೆಗೆ ಬಂದು ತನ್ನ ಕೋಣೆಯಲ್ಲಿ ಫ್ಯಾನಿಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡ. ಅವರ ತಾಯಿ - ತಂದೆಗೆ ಒಬ್ಬನೇ ಮಗ, ಅವರೀಗ ಕಣ್ಣೀರಿನಲ್ಲಿ ಕೈತೊಳೆಯುತ್ತಿದ್ದಾರೆ.

ಆತ್ಮ ಬಲ, ಆತ್ಮ ವಿಶ್ವಾಸ ಬೆಳೆಸಿಕೊಂಡು ಮುನ್ನಡೆಯಬೇಕು. ಎಂಥಾ ಪ್ರಸಂಗದಲ್ಲಿಯೂ ಉತ್ಸಾಹ ಕಳೆದುಕೊಳ್ಳಬಾರದು. 'ಉತ್ಸಾಹ ಕಳೆದುಕೊಂಡವನಷ್ಟು ದಿವಾಳಿಯೆದ್ದ ಮನುಷ್ಯ ಮತ್ತೊಬ್ಬನಿಲ್ಲ. ಎಲ್ಲವನ್ನೂ ಕಳೆದುಕೊಂಡರೂ ಉತ್ಸಾಹವೊಂದಿದ್ದರೆ ಮತ್ತೆ ಎಲ್ಲವನ್ನೂ ಪಡೆಯಬಲ್ಲ' ಎನ್ನುವುದು ಜ್ಞಾನಿಗಳ ಅನುಭವದ ಮಾತಾಗಿದೆ.

"Learn from the mistakes of the others; because you don't have time to do all those yourself" ಎನ್ನುವ ಆಂಗ್ಲ ಗಾದೆಯೊಂದಿದೆ. ಅದಕ್ಕಾಗಿ ಬೇರೆಯವರು ಮಾಡುವಂಥ ತಪ್ಪನ್ನೇ ಮಾಡಬೇಡಿರಿ. ಚೆನ್ನಾಗಿ ಓದಿ ದಕ್ಷ ಅಧಿಕಾರಿ, ದಕ್ಷ ರಾಜಕಾರಣಿಗಳಾಗಿ, ಜೀವನದಲ್ಲಿ ಯಶಸ್ಸನ್ನು ಕಂಡು, ಕನ್ನಡ ನಾಡಿಗೆ ಕೀರ್ತಿ ತರುವಂಥ ಹೆಮ್ಮೆಯ ಮಕ್ಕಳಾಗಿ.

ಪೂಜ್ಯ ಲಿಂಗಾನಂದ ಸ್ವಾಮೀಜಿಯವರ ಜನ್ಮ ಲಿಂಗಾಯತ ಧರ್ಮದ ಪುನರ್ಜನ್ಮ

-ಸಚ್ಚಿದಾನಂದ ಚಟನಳ್ಳಿ

ಆನೆಯು ಆ ದಾರಿಯಲ್ಲಿ ಹೋಯಿತ್ತೆಂದಡೆ
ಆಡೂ ಆ ದಾರಿಯಲ್ಲಿ ಹೋಯಿತ್ತೆನಬಹುದೆ?
ಸಂಗನ ಶರಣರಿಗೆ ಆನು ಸರಿಯೆಂದು ಗಳಹಲುಬಹುದೆ?
ಜಂಗಮಕ್ಕೆ ಮಾಡುವ ಭಕ್ತರಿಗೆ ಆನು ಸರಿಯೇ ಹೇಳಾ ಲಿಂಗದೇವಾ


ಆನೆ ಬೃಹದಾಕಾರದ ಪ್ರಾಣಿ. ಅದು ನಡೆದ ಜಾಗದಲ್ಲಿ ರಸ್ತೆ ನಿರ್ಮಾಣವಾಗುತ್ತದೆ. ಸಾಮಾನ್ಯವಾಗಿ ಕಾಡಿನಲ್ಲಿ ಹುಲ್ಲು, ಚಿಕ್ಕಪುಟ್ಟ ಗಿಡಗಳು ಇರುವ ಕಡೆ ಆನೆ ಹೋದರೆ ಅದು ತನ್ನ ಸೊಂಡಿಲಿನಿಂದ ತನಗೆ ಅಡ್ಡ ಬಂದ ಗಿಡ-ಮರ ಟೊಂಗೆಗಳನ್ನು ಕಿತ್ತಿ ಎಸೆಯುತ್ತದೆ. ಹೀಗೆ ಒಂದು ಸಲ ಆನೆಯು ಹೋಗುವ ದಾರಿಯು ಎಷ್ಟೇ ಇಕ್ಕಟ್ಟಾಗಿದ್ದರೂ ಅಲ್ಲಿ ರಸ್ತೆ ನಿರ್ಮಾಣವಾಗುತ್ತದೆ. ಆ ದಾರಿಯಲ್ಲಿ ಇತರ ಆಡಿನಂತಹ ಸಣ್ಣ ಪುಟ್ಟ ಪ್ರಾಣಿಗಳು ಯಾವುದೇ ತೊಂದರೆ ಇಲ್ಲದೆ ಸಾಗಬಹುದು.

ಅದೇ ರೀತಿ ಪೂಜ್ಯ ಶ್ರೀ ಲಿಂಗಾನಂದ ಸ್ವಾಮೀಜಿಯವರು ಜಿಡ್ಡುಗಟ್ಟಿದ ಸಂಪ್ರದಾಯದಲ್ಲಿ ಆನೆಯಂತೆ ಮುನ್ನುಗ್ಗಿ ಅನೇಕ ಮೂಢನಂಬಿಕೆಗಳು, ತಪ್ಪು ಆಚರಣೆಗಳೆಂಬ ಗಿಡ ಮರಗಳನ್ನು ಕಿತ್ತೆಸೆದು ನವ ಪಥವನ್ನು ನಿರ್ಮಿಸಿದ್ದಾರೆ. ಸುಮಾರು 50 ವರ್ಷಗಳ ಹಿಂದಿನ ದಿನಗಳನ್ನು ನೋಡಿದರೆ ಅಂದು ಬಸವಣ್ಣನವರು ಎಂದರೆ ಯಾರು? ವಚನಗಳೆಂದರೇನು? ಬಸವ ತತ್ತ್ವ, ಲಿಂಗಾಯತ ಧರ್ಮ, ಬಸವ ಧರ್ಮ ಎನ್ನುವ ಶಬ್ದಗಳು ಸಂಪೂರ್ಣವಾಗಿ ಮರೆಮಾಚಿ ಹೋದಾಗ ಮತ್ತೊಮ್ಮೆ 12ನೆಯ ಶತಮಾನದ ಭವ್ಯತೆ ದಿವ್ಯತೆಯನ್ನು ಭಾರತ ದೇಶದಲ್ಲಿ ಪ್ರತಿಷ್ಠಾಪಿಸಿದ ಮೊಟ್ಟಮೊದಲ ವ್ಯಕ್ತಿ ಪರಮಪೂಜ್ಯ ಲಿಂಗಾನಂದ ಸ್ವಾಮಿಜೀಯವರು. ಗುರು ಬಸವಣ್ಣನವರು ನೀಡಿದ ಲಿಂಗಾಯತ ಧರ್ಮದ ಬಗ್ಗೆ ಪುಂಖಾನುಪುಂಖವಾಗಿ ನಾಡಿನಾದ್ಯಂತ ಪ್ರವಚನ ಮಾಡಿ ಬಸವ ಸಾಮ್ರಾಜ್ಯವನ್ನು ಪ್ರತಿಷ್ಠಾಪಿಸಿದ ಮಹಾ ಗುರು ಲಿಂಗಾನಂದ ಸ್ವಾಮೀಜಿಯವರು. ಗುರುಬಸವಣ್ಣನವರು ಲಿಂಗಾಯತ ಧರ್ಮವೆಂಬ ಹೊಸ ಮನೆಯನ್ನು 12ನೇ ಶತಮಾನದಲ್ಲಿ ಕಟ್ಟಿದ್ದರು. 800 ವರ್ಷಗಳ ಅವಧಿಯಲ್ಲಿ ಆ ಮನೆ ಹಾಳಾಗಿ, ನುಸಿ ಹೋಗುತಾ ಅಳಿವಿನ ಅಂಚಿನಲ್ಲಿರುವಾಗ ಇದನ್ನು ಸಂಪೂರ್ಣವಾಗಿ ದುರಸ್ತಿಗೈದು ಮತ್ತೊಮ್ಮೆ 12ನೇ ಶತಮಾನದ ದಿವ್ಯತೆಯನ್ನು ತಂದುಕೊಟ್ಟವರು ಪರಮ ಪೂಜ್ಯ ಲಿಂಗಾನಂದ ಸ್ವಾಮೀಜಿಯವರು.

ಇತಿಹಾಸದ ಪುಟಗಳನ್ನು ತೆರೆದು ನೋಡಿದಾಗ ಒಂದು ಕಾರ್ಯವನ್ನು ಮಾಡ ಹೊರಟ ಮೊದಲ ವ್ಯಕ್ತಿಗಳು ಅನುಭವಿಸಿದ ನೋವು ಯಾತನೆ ಹೇಳತೀರದು. ಭಾರತಕ್ಕೆ ಜಲ ಮಾರ್ಗವನ್ನು ಕಂಡು ಹಿಡಿಯಲು ಹೊರಟ ಕೋಲಂಬಸ್ ಮತ್ತು ನಂತರದ ವಾಸ್ಕೋಡಿಗಾಮರ ಸಾಹಸ ರೋಮಾಂಚನವಾದುದು, ಅನುಭವಿಸಿದ ನೋವು ಅತ್ಯಂತ ಹೃದಯಸ್ಪರ್ಶಿಯಾಗಿದೆ. ಅವರ ಪ್ರಯಾಣದ ಮಧ್ಯದಲ್ಲಿ ಆಹಾರ ಸಾಮಗ್ರಿ ಮುಗಿದು ಹೋಗಿತ್ತು ಅನೇಕ ದಿನಗಳವರೆಗೆ ಉಪವಾಸವಿದ್ದು ಪ್ರಯಾಣಮಾಡಿ ಕೋಲಂಬಸ್ ವೆಸ್ಟ್ ಇಂಡೀಸನ್ನು ಕಂಡು ಹಿಡಿದ. ಕೋಲಂಬಸ್ ಸೂಚಿಸಿದ ಮಾರ್ಗವಿಡಿದು ವಾಸ್ಕೋಡಿಗಾಮ 1498ರಲ್ಲಿ, ಅನೇಕ ಕಷ್ಟಗಳನ್ನು ಅನುಭವಿಸಿ ಭಾರತಕ್ಕೆ ಜಲಮಾರ್ಗವನ್ನು ಕಂಡು ಹಿಡಿದ. ನಂತರ ಭಾರತಕ್ಕೆ ಬರುವವರಿಗೆ ಸುಲಭ ಸಾಧ್ಯವಾಯಿತು. ಅದೇ ರೀತಿ ಲಿಂಗಾನಂದ ಅಪ್ಪಾಜಿಯವರು ಲಿಂಗಾಯತ ಧರ್ಮದಲ್ಲಿ ಈ ಹೊಸ ಪಥವನ್ನು ಕಂಡು ಹಿಡಿಯಲಿಕ್ಕೆ ಬಸವ ಸಾಮ್ರಾಜ್ಯವನ್ನು ಪುನಃ ಪ್ರತಿಷ್ಠಾಪಿಸಲಿಕ್ಕೆ ಅನುಭವಿಸಿದ ನೋವು ಕಿರುಕುಳಗಳು ಕಲ್ಪನೆಯ ಆಳೆತೆಗೂ ಮೀರಿದಂಥವು. ಧರ್ಮ ಪ್ರಚಾರಗೈಯುವಾಗ ಅವರಿಗೆ ಸರಿಯಾಗಿ ಪ್ರಸಾದ ಸಿಗುತ್ತಿರಲಿಲ್ಲ. ಅವರ ಪ್ರಗತಿಪರ ವಿಚಾರಧಾರೆಯನ್ನು ಕಂಡು ಕೆಲವರು ಮೆಚ್ಚಿದರೆ ಇನ್ನು ಕೆಲವರು ತೊಂದರೆಯ ಕೊಟ್ಟರು. ಒಮ್ಮೆ ಪ್ರವಚನ ಮಾಡುವಾಗ, ಕುಹಕಿಯೊಬ್ಬನು ಅವರ ತಲೆಗೆ ಕಲ್ಲಿನಿಂದ ಹೊಡೆದ. ಪೆಟ್ಟಾದ ಭಾಗದಿಂದ ರಕ್ತ ಸೋರುತಿತ್ತು. ಒಂದು ಗಂಟೆಯ ಕಾಲ ಆ ಭಾಗಕ್ಕೆ ಹಾಗೆಯೇ ಕೈ ಹಿಡಿದುಕೊಂಡು ಪ್ರವಚನ ಮಾಡಿದರಂತೆ. "ನಾನು ಬಸವ ತತ್ತ್ವಕ್ಕಾಗಿ ಪ್ರಾಣವನ್ನು ಮುಡುಪಾಗಿಟ್ಟವನು. ಆ ಕಾರ್ಯಕ್ಕಾಗಿಯೇ ನನ್ನ ಪ್ರಾಣ ಹೋಗುವುದಾದರೆ ಇದಕ್ಕಿಂತ ಹೆಚ್ಚಿನ ಸಂತೋಷ ಮತ್ತಾವುದು? ಮುಂದೆ ನನ್ನ ಒಂದೊಂದು ಹನಿ ಹನಿ ರಕ್ತದಿಂದ ಒಬ್ಬೊಬ್ಬ ಲಿಂಗಾನಂದ ಹುಟ್ಟಿ ಧರ್ಮ ಪ್ರಚಾರ ಮಾಡುತ್ತಾರೆ" ಎಂದು ಅತ್ಯಂತ ಆತ್ಮಬಲದಿಂದ ಹೇಳಿದ್ದರಂತೆ. ಅಂಥ ಹನಿ ಲಿಂಗಾನಂದ, ರಾ.ಬ.ದಳದ ಶರಣರು ಆಗಬೇಕು. ಎಲ್ಲಾ ರೀತಿಯ ನೋವನ್ನು ತಾವು ಅನುಭವಿಸಿ ಸುಲಭವಾದ ರಾಜ ಮಾರ್ಗವನ್ನು ಕೊಟ್ಟರು. ಅವರ ಜನ್ಮದಿಂದಾಗಿ ಬಸವ ತತ್ತ್ವ ಮತ್ತೊಮ್ಮೆ ನಿಲ್ಲುವಂತಾಗಿದೆ. ಆ ಮಹಾಗುರುವಿಗೆ ಶರಣೆಂದು ಧನ್ಯರಾಗೋಣ.







ದಿನಾಂಕ 27-4-2009 ಬಸವ ಜಯಂತಿ ನಿಮಿತ್ತ









ಶ್ರೀ ಗುರು ಬಸವಣ್ಣನವರಿಗೆ ಪುಷ್ಪವೃಷ್ಟಿ-ಆರತಿ